ಗುರುವಾರ, ಸೆಪ್ಟೆಂಬರ್ 11, 2025| ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಗಮನ ಸೆಳೆದ ಹನುಮ

ಮದ್ದೂರಿನಲ್ಲಿ ಬುಧವಾರ ನಡೆದ ಗಣೇಶಮೂರ್ತಿಗಳ ವಿಸರ್ಜನೆ ಮೆರವಣಿಗೆಯಲ್ಲಿ ಹನುಮ ಪಾತ್ರಧಾರಿ ಕಲಾವಿದರೊಬ್ಬರು ಗಮನಸೆಳೆದರು



ಕುಲದೀಪ್ ಕೈಚಳಕ

ಭಾರತದ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಬುಧವಾರ ನಡೆದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಯುಎಇ ಎದುರು ನಾಲ್ಕು ವಿಕೆಟ್ ಗಳಿಸಿದರು

ಮರುಸಿಂಚನ: 27 ಜಿಲ್ಲೆಗಳಿಗೆ ವಿಸ್ತರಣೆ

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ರೂಪಿಸಿರುವ ಯೋಜನೆ

● ಎ.ಎಂ.ಸುರೇಶ



ಬೆಂಗಳೂರು: ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗಾಗಿ ರೂಪಿಸಿರುವ ಮರುಸಿಂಚನ ಯೋಜನೆಯನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಜಾರಿಗೊಳಿಸುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿನ ಸುಮಾರು 18 ಲಕ್ಷ ಮಕ್ಕಳು ಇದರ ಪ್ರಯೋಜನ ಪಡೆಯುವ ಸಾಧ್ಯತೆ ಇದೆ.

'ಎರಡು ವರ್ಷಗಳ ಹಿಂದೆ ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದ ಈ ಯೋಜನೆಯನ್ನು 2025–26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ 27 ಶೈಕ್ಷಣಿಕ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಇದರ ಅನುಷ್ಠಾನಕ್ಕೆ ಬೇಕಾದ ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿದ್ದು, ದಸರಾ ರಜೆಯ ಬಳಿಕ ಕಾರ್ಯರೂಪಕ್ಕೆ ಬರಲಿದೆ' ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾಕುಮಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಲಿಕೆಯಲ್ಲಿ ಹಿಂದೆ ಇರುವ ಮಕ್ಕಳನ್ನು ಗುರುತಿಸಿ, ಶಾಲಾ ಅವಧಿಯಲ್ಲೇ ಪರಿಹಾರ ಬೋಧನೆ ಮೂಲಕ ಅವರ ಕಲಿಕಾ ಮಟ್ಟವನ್ನು ಸುಧಾರಿಸಲಾಗುತ್ತದೆ. ಇದಕ್ಕಾಗಿ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸ ಪುಸ್ತಕ, ಶಿಕ್ಷಕರಿಗೆ ಮಾಡ್ಯೂಲ್‌ಗಳ ಕೈಪಿಡಿ ನೀಡಲಾಗುತ್ತದೆ. ಅದಕ್ಕೆ ಅನುಗುಣವಾಗಿ ಮಕ್ಕಳಿಗೆ ಕಲಿಸಲಾಗುತ್ತದೆ.

ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕನ್ನಡ ಹಾಗೂ ಇಂಗ್ಲಿಷ್ ವಿಷಯಗಳಲ್ಲಿ ಅಭ್ಯಾಸ ಪುಸ್ತಕಗಳನ್ನು ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ (ಡಿಎಸ್‌ಇಆರ್‌ಟಿ) ಸಿದ್ಧಪಡಿಸಲಿದೆ. ಸ್ವಯಂ ಸೇವಾ ಸಂಸ್ಥೆಗಳಾದ ಪೀಪಲ್ ಫಾರ್ ಆಕ್ಷನ್ ಸಂಸ್ಥೆ ಮತ್ತು ಜೆ–ಪಾಲ್ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗಿದ್ದು, ಕಾಲಕಾಲಕ್ಕೆ ಅಗತ್ಯ ಸಲಹೆಗಳನ್ನು ನೀಡಲಿವೆ.

ಕಲಿಕೆಯಲ್ಲಿ ಶೇ 40ಕ್ಕಿಂತ ಕಡಿಮೆ ಇರುವ ಅಥವಾ ಶೇ 60ಕ್ಕಿಂತ ಕಡಿಮೆ ಇರುವ ಮಕ್ಕಳಿಗೆ ಮರುಸಿಂಚನ ಯೋಜನೆಯಡಿ ಪರಿಹಾರ ಬೋಧನೆ ತರಗತಿಗಳನ್ನು ನಡೆಸಬೇಕೇ ಎಂಬುದು ಇನ್ನೂ ಅಂತಿಮವಾಗಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಭಿನ್ನ ಸಲಹೆಗಳು ಬಂದಿವೆ. ಸದ್ಯದಲ್ಲೇ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಆ ಬಳಿಕ ಮಕ್ಕಳ ಸಂಖ್ಯೆ ನಿಖರವಾಗಿ ಗೊತ್ತಾಗಲಿದೆ ಎಂದು ಮೂಲಗಳು ತಿಳಿಸಿವೆ.

ಗುಣಮಟ್ಟ ಸುಧಾರಣೆ: 10ನೇ ತರಗತಿಯಲ್ಲಿ ಕಡಿಮೆ ಫಲಿತಾಂಶ, ಉತ್ತೀರ್ಣರಾಗದೆ ಇರುವುದು ಕಂಡುಬಂದಿದೆ. ಅಲ್ಲದೆ ಮಕ್ಕಳು ಯಾವ ಹಂತದಲ್ಲಿ ಎಷ್ಟು ಕಲಿತಿರಬೇಕೊ, ಅಷ್ಟು ಕಲಿತಿರುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಆಯಾ ತರಗತಿಯಿಂದಲೇ ಗುಣಮಟ್ಟದಲ್ಲಿ ಸುಧಾರಣೆ ತರಲು ಮರುಸಿಂಚನ ಕಾರ್ಯಕ್ರಮ ರೂಪಿಸಲಾಗಿದೆ.

ಅಭ್ಯಾಸ ಪುಸ್ತಕ 80ರಿಂದ 100 ಪುಟ ಇರಲಿದ್ದು, ಮಕ್ಕಳ ಸಾಮರ್ಥ್ಯವನ್ನು ಅರಿತು ಪೂರಕ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಕಲಿಸಲಾಗುತ್ತದೆ. ಸಾಮಾನ್ಯ ತರಗತಿ ಹೊರತುಪಡಿಸಿ, ಹೆಚ್ಚುವರಿಯಾಗಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕಲಿಸುವುದರಿಂದ ಮಕ್ಕಳ ಕಲಿಕಾ ಮಟ್ಟದಲ್ಲಿ ಸುಧಾರಣೆಯಾಗಿರುವುದು ಮೌಲ್ಯಾಂಕನದಿಂದ ದೃಢಪಟ್ಟಿದೆ. ಇದನ್ನು ಆಧರಿಸಿ ಈ ವರ್ಷ ಎಲ್ಲ ಸರ್ಕಾರಿ ಶಾಲೆಗಳಿಗೆ ವಿಸ್ತರಣೆ ಮಾಡಲಾಗುತ್ತಿದೆ.

ಮುಖ್ಯಾಂಶಗಳು

- ಈ ವರ್ಷ ಡಿಎಸ್‌ಇಆರ್‌ಟಿ ಮೂಲಕ ಜಾರಿ
- ಶಿಕ್ಷಕರಿಗೆ ವಿಶೇಷ ತರಬೇತಿ
- ಹಿಂದಿ ಹೊರತುಪಡಿಸಿ, ಉಳಿದ ಐದು ವಿಷಯಗಳ ಆಯ್ಕೆ

ಪ್ರಾಯೋಗಿಕ ಯೋಜನೆ ಯಶಸ್ವಿ

17 ಜಿಲ್ಲೆಗಳ 93 ತಾಲ್ಲೂಕುಗಳಲ್ಲಿ 9ನೇ ತರಗತಿ ಮಕ್ಕಳಿಗೆ 2023–24ರಲ್ಲಿ ಪ್ರಾಯೋಗಿಕವಾಗಿ ಮರುಸಿಂಚನ ಯೋಜನೆ ಜಾರಿಗೊಳಿಸಲಾಗಿತ್ತು. ಕಳೆದ ವರ್ಷ 6ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ವಿಸ್ತರಿಸಲಾಗಿತ್ತು. ಇದು ಯಶಸ್ವಿಯಾಗಿರುವುದನ್ನು ಗಮನಿಸಿ 27 ಶೈಕ್ಷಣಿಕ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.

'ರಾಜ್ಯದಲ್ಲಿ ಒಟ್ಟು 35 ಶೈಕ್ಷಣಿಕ ಜಿಲ್ಲೆಗಳಿವೆ. ಈ ಪೈಕಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿರಸಿ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಒಟ್ಟಾರೆ ಶೈಕ್ಷಣಿಕ ಗುಣಮಟ್ಟ ಚೆನ್ನಾಗಿದೆ. ಆ ಜಿಲ್ಲೆಗಳಲ್ಲೂ ಕೆಲವು ಶಾಲೆಗಳಲ್ಲಿನ ಮಕ್ಕಳ ಕಲಿಕಾ ಮಟ್ಟ ಕಡಿಮೆ ಇರಬಹುದು. ಆದರೆ, ಆ ಜಿಲ್ಲೆಗಳಲ್ಲಿ ಮರುಸಿಂಚನ ಜಾರಿ ಮಾಡುವ ಬಗ್ಗೆ ಸದ್ಯಕ್ಕೆ ನಿರ್ಧರಿಸಿಲ್ಲ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮೂಲಗಳು ತಿಳಿಸಿವೆ.

ಚಟಾಕಿ ಸುದ್ದಿ

ಗರಂ, ದಂಡ ಪದಗಳ ಉಲ್ಲೇಖ ಇಲ್ಲ: ಜೋಶಿ ಸ್ಪಷ್ಟನೆ

ಬೆಂಗಳೂರು: ಅವ್ಯವಹಾರದ ಆರೋಪಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನಲ್ಲಿ 'ಎಲ್ಲಿಯೂ ಗರಂ, ದಂಡ ಹಾಕಿಲ್ಲ ಎಂದು ಖುಷಿ ಪಡಿ ಎನ್ನುವಂತಹ ವಾಕ್ಯಗಳು ಇಲ್ಲ' ಎಂಬುದಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ವಿಚಾರಣಾಧಿಕಾರಿ ನೇಮಕ ಮಾಡಿರುವುದನ್ನು ಪ್ರಶ್ನಿಸಿರುವ ಅರ್ಜಿಗೆ ಸಂಬಂಧಿಸಿ ಮಂಗಳವಾರ ವಿಚಾರಣೆ ನಡೆಸಿದ ಹೈಕೋರ್ಟ್‌ನ ತೀರ್ಪಿನ ಪ್ರತಿ ಹೊರ ಬರುವ ಮೊದಲೇ ಈ ರೀತಿ ಪತ್ರಿಕೆಗಳು ವರದಿ ಮಾಡಿರುವುದು ತಪ್ಪು ಗ್ರಹಿಕೆಗೆ ಕಾರಣವಾಗಲಿದೆ' ಎಂದು ತಿಳಿಸಿದ್ದಾರೆ.

'ವರದಿಗಳನ್ನು ಗಮನಿಸಿದರೆ, ದುರುದ್ದೇಶದಿಂದ ಯಾರೋ ತಪ್ಪು ಮಾಹಿತಿ ನೀಡಿರುವುದು ಸ್ಪಷ್ಟವಾಗಿದೆ. ಬಹಳ ಮುಖ್ಯವಾಗಿ ತೀರ್ಪಿನ ಆಧಾರದ ಮೇಲೆ ವರದಿ ಇರಬೇಕು. ಮಾಧ್ಯಮಗಳಲ್ಲಿನ ವರದಿಯು ನಿಖರತೆ, ಸತ್ಯಾಂಶದಿಂದ ಕೂಡಿರಬೇಕು. ಉತ್ಪ್ರೇಕ್ಷೆಯಿಂದ ಇರಬಾರದು ಎನ್ನುವ ಸರ್ವೋಚ್ಚ ನ್ಯಾಯಾಲಯದ ವಿವರಣೆಗೆ ಇದು ಹೊರತಾಗಿದೆ' ಎಂದಿದ್ದಾರೆ.

ಶಾಸಕ ಚವಾಣ್‌ಗೆ ಅಶ್ಲೀಲ ವಿಡಿಯೊ

ಔರಾದ್ (ಬೀದರ್ ಜಿಲ್ಲೆ): ಬಿಜೆಪಿ ಶಾಸಕ ಪ್ರಭು ಚವಾಣ್ ಅವರ ವಾಟ್ಸ್‌ಆ್ಯಪ್‌ಗೆ ಅಪರಿಚಿತ ವ್ಯಕ್ತಿಯೊಬ್ಬ ಅಶ್ಲೀಲ ಚಿತ್ರ ಹಾಗೂ ವಿಡಿಯೊ ಕಳುಹಿಸಿ ₹30 ಸಾವಿರಕ್ಕೆ ಬೇಡಿಕೆಯಿಟ್ಟು ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ಈ ಕುರಿತು ಶಾಸಕರ ಸಂಬಂಧಿ ಮುರುಳೀಧರ ಪ್ರಕಾಶ ಪವಾರ್ ಅವರು ಹೊಕ್ರಾಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಶಾಸಕರ ವಾಟ್ಸ್‌ಆ್ಯಪ್‌ಗೆ ಸಂದೇಶ ಕಳುಹಿಸಿದ ಅಪರಿಚಿತ ವ್ಯಕ್ತಿಯು, ನನ್ನ ಮೇಲೆ ಭರವಸೆ ಇಟ್ಟು ₹30 ಸಾವಿರ ಹಾಕಿ ಸಹಾಯ ಮಾಡಿ. ಇಲ್ಲದಿದ್ದರೆ ಯೂಟ್ಯೂಬ್‌ನಲ್ಲಿ ನಿಮ್ಮ ವಿಡಿಯೊ ಶೇರ್ ಮಾಡುತ್ತೇನೆ ಎಂದು ಬೆದರಿಸಿದ್ದಾನೆ. ಸೆ. 7ರಂದು ರಾತ್ರಿ ಹುಡುಗಿಯೊಬ್ಬಳ ಜತೆ ಶಾಸಕರಿರುವ ವಿಡಿಯೊ ಕಳುಹಿಸಿದ್ದಾನೆ. ಶಾಸಕರು ಹಾಗೂ ಪ್ರಿಯಾಂಕಾ ಗಾಂಧಿ ಅವರ ಭಾವಚಿತ್ರವನ್ನೂ ಕಳುಹಿಸಿದ್ದಾನೆ. ಶಾಸಕರ ಹೆಸರು ಕೆಡಿಸಲು ಯತ್ನಿಸಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಲಂಚ: ಇಬ್ಬರು ಅಧಿಕಾರಿಗಳು ವಶಕ್ಕೆ

ಹಾಸನ: ನಗರದ ಎನ್.ಆರ್. ವೃತ್ತದಲ್ಲಿರುವ ಪಂಚಾಯತ್ ರಾಜ್ ಎಂಜಿನಿಯರಿಂಗ್ ಕಚೇರಿಯ ಲೆಕ್ಕ ವಿಭಾಗದ ಅಧೀಕ್ಷಕ ರಾಮಚಂದ್ರು ಹಾಗೂ ಪ್ರಥಮ ದರ್ಜೆ ಸಹಾಯಕಿ ಲತಾ ಅವರು ಲಂಚ ಪಡೆಯುತ್ತಿದ್ದಾಗ, ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದರು.

ಕಾಮಗಾರಿ ಬಿಲ್ ಮಂಜೂರಾತಿಗಾಗಿ ಬೇಲೂರಿನ ಶಶಿ ಎಂಬುವವರಿಂದ ತಲಾ ₹ 1 ಸಾವಿರ ಪಡೆಯುತ್ತಿದ್ದಾಗ ಪೊಲೀಸರು ದಾಳಿ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆದರು. ಇನ್‌ಸ್ಪೆಕ್ಟರ್‌ಗಳಾದ ಚಂದ್ರಶೇಖರ್ ಮತ್ತು ಶಿಲ್ಪಾ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.


ಸುದ್ದಿ 2 ನಿಮಿಷ

'ಭದ್ರಾವತಿ ಶಾಸಕ ಮತಾಂತರವಾಗಲಿ'

ಬೆಂಗಳೂರು: 'ಭದ್ರಾವತಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಮುಂದಿನ ಜನ್ಮದಲ್ಲಿ ಮುಸ್ಲಿಮನಾಗಿ ಹುಟ್ಟುತ್ತೇನೆ ಎಂದಿದ್ದಾರೆ. ಮುಂದಿನ ಜನ್ಮದವರೆಗೆ ಕಾಯವುದು ಬೇಡ, ಈ ಜನ್ಮದಲ್ಲಿಯೇ ಮತಾಂತರವಾಗಿಬಿಡಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಮದ್ದೂರು ಚಲೊಗೂ ಮುನ್ನ ಇಲ್ಲಿ ಅವರು ಸುದ್ದಿಗಾರರ ಜತೆ ಮಾತನಾಡಿದರು. 'ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ ಅವರು ಮುಸ್ಲಿಮನಾಗಿ ಹುಟ್ಟಲು ಬಯಸುತ್ತೇನೆ' ಎಂದು ಹೇಳಿರುವ ಬಗ್ಗೆ ಸುದ್ದಿಗಾರರು ಪ್ರತಿಕ್ರಿಯೆ ಕೇಳಿದಾಗ ವಿಜಯೇಂದ್ರ ಮೇಲಿನಂತೆ ಪ್ರತಿಕ್ರಿಯಿಸಿದರು.

'ರಾಜ್ಯ ಸರ್ಕಾರದ ಕುಮ್ಮಕ್ಕಿನಿಂದಲೇ ಹಿಂದೂಗಳ ಮೇಲೆ ಕಲ್ಲು ತೂರಾಟ, ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ ನಡೆಯುತ್ತಿದೆ. ಅಂತಹ ದುಷ್ಟಶಕ್ತಿಗಳಿಗೆ ಪೂರಕವಾದ ವಾತಾವರಣವನ್ನು ರಾಜ್ಯ ಸರ್ಕಾರ ನಿರ್ಮಿಸಿದೆ. ಕಾಂಗ್ರೆಸ್ ನಾಯಕರ ಇಂತಹ ಮಾತುಗಳೂ ದಾಳಿಕೋರರಿಗೆ ಪ್ರಚೋದನೆ ನೀಡುತ್ತವೆ' ಎಂದರು.



'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಹಿಂದೂಗಳು ಗಣೇಶನ ಹಬ್ಬವನ್ನು ನೆಮ್ಮದಿಯಿಂದ ಆಚರಿಸಲು ಸಾಧ್ಯವಾಗಿಲ್ಲ. ಸರ್ಕಾರವು ಒಂದು ಸಮುದಾಯದ ಕಡೆ ವಾಲಿದೆ. ಧರ್ಮಸ್ಥಳದ ವಿಚಾರ, ಚಾಮುಂಡಿ ಬೆಟ್ಟ, ನಿನ್ನೆ ಮದ್ದೂರಿನ ಘಟನೆಗಳು ಇದನ್ನು ಸಾಬೀತುಪಡಿಸುವಂತಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'6 ತಿಂಗಳಲ್ಲಿ ಪ್ರಧಾನಿ ಬದಲಾವಣೆ'

ಕೋಲಾರ/ಚಿಕ್ಕಬಳ್ಳಾಪುರ: ಇನ್ನು ಆರು ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಬದಲಾವಣೆ ಆಗಲಿದ್ದಾರೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದ್ದಾರೆ.

'ಮುಖ್ಯಮಂತ್ರಿ ಬದಲಾವಣೆ ಆಗುತ್ತಾರೆಯೇ' ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ, 'ಮುಖ್ಯಮಂತ್ರಿ ಬದಲಾವಣೆ ಬಿಡಿ, ಆರು ತಿಂಗಳಲ್ಲಿ ಪ್ರಧಾನಿಯೇ ಬದಲಾವಣೆ ಅಗುತ್ತಾರೆ ನೋಡುತ್ತಿರಿ' ಎಂದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರಿಂದ ಈ ದೇಶದ ಹಿಂದೂಗಳು ಹಾಳಾಗಿದ್ದಾರೆಯೇ ಹೊರತು ಹಿಂದೂಗಳಿಗೆ ಬಿಜೆಪಿ ಏನು ಮಾಡಿದೆ ಎಂದು ಪ್ರಶ್ನಿಸಿದರು.

ಬಿಜೆಪಿ, ಹಿಂದುತ್ವ ಕಾರ್ಯಕರ್ತರ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾದ ಮೆರವಣಿಗೆ

ಗಣೇಶ ವಿಸರ್ಜನೆಗೆ ಸರ್ಪಗಾವಲು

● ಸಿದ್ದು ಆರ್.ಜಿ.ಹಳ್ಳಿ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದಲ್ಲಿ ಬುಧವಾರ ಬಿಜೆಪಿ ನೇತೃತ್ವದಲ್ಲಿ ಆಯೋಜಿಸಿದ್ದ 'ಸಾಮೂಹಿಕ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ'ಯು ಪೊಲೀಸ್ ಸರ್ಪಗಾವಲಿನಲ್ಲಿ ಶಾಂತಿಯುತವಾಗಿ ನಡೆಯಿತು. ಹಿಂದುತ್ವ ಪರವಾದ ಸಾವಿರಾರು ಕಾರ್ಯಕರ್ತರ ಶಕ್ತಿ ಪ್ರದರ್ಶನಕ್ಕೂ ಸಾಕ್ಷಿಯಾಯಿತು.

ಬಿಜೆಪಿ ಕಚೇರಿ ಮುಂಭಾಗ ಬೆಳಿಗ್ಗೆ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಗಣೇಶಮೂರ್ತಿಗೆ ಆರತಿ ಬೆಳಗಿ ಮೆರವಣಿಗೆಗೆ ಚಾಲನೆ ನೀಡಿದರು. ಜಾನಪದ ಕಲಾ ತಂಡಗಳು ಮೆರುಗು ನೀಡಿದವು.

ಕೇಸರಿ ಶಾಲುಗಳನ್ನು ಧರಿಸಿ, ಹನುಮಧ್ವಜ ಮತ್ತು ಕೇಸರಿ ಬಾವುಟಗಳನ್ನು ಹಾರಿಸಿ ಕಾರ್ಯಕರ್ತರು ಸಂಭ್ರಮಿಸಿದರು. ಡಿಜೆ ಸಂಗೀತಕ್ಕೆ ಕುಣಿಯುತ್ತಾ, 'ಜೈ ಶ್ರೀರಾಮ್, ಜೈ ಗಣೇಶ' ಘೋಷಣೆಗಳನ್ನು ಕೂಗಿದರು. ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಹರ್ಷೋದ್ಗಾರ ಮಾಡಿದರು. ವರ್ತಕರು ಅಂಗಡಿಗಳನ್ನು ಮುಚ್ಚಿ, ಸಂಭ್ರಮದಲ್ಲಿ ಮಿಂದೆದ್ದರು.

ಸಂಜೆ ಶಿಂಷಾ ನದಿಯಲ್ಲಿ ಸಾಮೂಹಿಕವಾಗಿ 14ಕ್ಕೂ ಹೆಚ್ಚಿನ ಮೂರ್ತಿಗಳನ್ನು ವಿಸರ್ಜಿಸಲಾಯಿತು. ಸುತ್ತಮುತ್ತಲ ಜಿಲ್ಲೆಗಳ ಕೆಎಸ್‌ಆರ್‌ಪಿ, ಡಿಎಆರ್, ಆರ್‌ಎಎಫ್, ಅರೆ ಸೇನಾ ತುಕಡಿಗಳು ಸೇರಿ ಸುಮಾರು 2 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು.



ಮದ್ದೂರು ಪಟ್ಟಣದಲ್ಲಿ ಬುಧವಾರ ಆಯೋಜಿಸಿದ್ದ ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಮೆರವಣಿಗೆಯಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌ಅಶೋಕ ಮಾತನಾಡಿದರು –ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಮುಲ್ಲಾಗಳ ಟೋಪಿ ಧರಿಸಿ, ಹಿಂದೂಗಳಿಗೆ ಟೋಪಿ ಹಾಕುತ್ತಾರೆ. ಮದ್ದೂರು ಜನ ನಿಮ್ಮ ತಲೆ ಮೇಲೆ ವಡೆ ತಟ್ಟಾರೆ. ಮಂಡ್ಯ ಜನರನ್ನು ಛತ್ರಿಗಳೆಂದಿದ್ದ ಡಿಸಿಎಂ ಕಡೆಯವರೇ 'ಛತ್ರಿ' ಕೆಲಸ ಮಾಡಿದ್ದಾರೆ
ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ನೇಪಾಳದಲ್ಲಿ ಯುವಜನ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯಲು ಯತ್ನಿಸಿದಂತೆ, ನೀವೂ ನಿಮಗೆ ಬೇಕಾದ ಸರ್ಕಾರವನ್ನು ಆಡಳಿತಕ್ಕೆ ತರಬಹುದು
ಸುಮಲತಾ ಅಂಬರೀಶ್, ಮಾಜಿ ಸಂಸದೆ

'ಭವಿಷ್ಯ ಹಾಳು ಮಾಡುತ್ತಿರುವ ಕಾಂಗ್ರೆಸ್'

'ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ 'ಕೇಸರಿ' ಕಂಡರೆ ಆಗಲ್ಲ, ಕಿತ್ತು ಬಿಸಾಕುತ್ತಾರೆ. ಅಲ್ಪಸಂಖ್ಯಾತರ ಓಲೈಕೆ ರಾಜಕಾರಣವೇ ರಾಜ್ಯದಲ್ಲಿ ಬೆಂಕಿ ಹಚ್ಚಲು ಕುಮ್ಮಕ್ಕು ನೀಡುತ್ತಿದೆ. ಅಯೋಗ್ಯ ಕಾಂಗ್ರೆಸ್ ನಾಯಕರ ಮಾತು ಕೇಳಿಕೊಂಡು ಮುಸ್ಲಿಂ ಯುವಕರು ಕಲ್ಲೆಸೆದು ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಮುಸ್ಲಿಂ ಧರ್ಮಗುರುಗಳು ಎಚ್ಚೆತ್ತುಕೊಳ್ಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಪಾದಿಸಿದರು.

'ಮಸೀದಿಯಲ್ಲಿ ಕಲ್ಲು ಸಂಗ್ರಹಿಸಿದಾಗಲೇ ಪೊಲೀಸರು ಎಚ್ಚೆತ್ತುಕೊಳ್ಳಬೇಕಿತ್ತು. ಶಾಂತಿ ಕದಡಿದ ದೇಶದ್ರೋಹಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಭದ್ರಾವತಿ ಶಾಸಕರ ಹೇಳಿಕೆ ಬೆಂಕಿಗೆ ತುಪ್ಪ ಸುರಿಯುವಂತಿದೆ. ಮದ್ದೂರು ಘಟನೆಯ ಹೊಣೆಯನ್ನು ಕಾಂಗ್ರೆಸ್ ಸರ್ಕಾರವೇ ಹೊರಬೇಕು. ಹಿಂದೂಗಳ ಮತ ಪಡೆಯದೆ ಅಧಿಕಾರಕ್ಕೆ ಬಂದಂತೆ ಸಿ.ಎಂ ವರ್ತಿಸುತ್ತಿದ್ದಾರೆ' ಎಂದು ಟೀಕಿಸಿದರು.

ಬಿಜೆಪಿಯಿಂದ ಪರಿಹಾರ

ಮದ್ದೂರಿನ ಘಟನೆಯಲ್ಲಿ ಗಾಯಗೊಂಡ ಅಜಯ್ ಸೇರಿ ಗಾಯಾಳುಗಳ ಮನೆಗಳಿಗೆ ಬಿಜೆಪಿ ನಾಯಕರು ಭೇಟಿ ನೀಡಿ, ಪರಿಹಾರ ವಿತರಿಸಿ, ಸಾಂತ್ವನ ಹೇಳಿದರು. ನಂತರ ಜಿಲ್ಲಾಧಿಕಾರಿ ಕುಮಾರ ಮತ್ತು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರಿಂದ ಬಿಜೆಪಿ, ಜೆಡಿಎಸ್ ಸತ್ಯಶೋಧನಾ ಸಮಿತಿಯು ಮಾಹಿತಿ ಸಂಗ್ರಹಿಸಿತು.

'ಮುಸ್ಲಿಮರಿಂದಲೇ ಗಲಭೆ ಆಗಿದೆ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಮಂಡ್ಯ ಜಿಲ್ಲೆಯ ಮದ್ದೂರು ಗಣಪತಿ ವಿಸರ್ಜನೆ ವೇಳೆ ನಡೆದ ಗಲಾಟೆ ಮುಸ್ಲಿಮರ ಕಡೆಯಿಂದಲೇ ಪೂರ್ಣ ಪ್ರಮಾಣ ದಲ್ಲಿ ಆಗಿದೆ. ಆದ್ದರಿಂದ ಹಿಂದೂಗಳನ್ನು ಬಂಧಿಸಿಲ್ಲ, ಯಾರ ವಿರುದ್ಧವೂ ಪ್ರಕರಣ ದಾಖಲಿಸಿಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.



ಚಲುವರಾಯ ಸ್ವಾಮಿ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '21 ಜನರನ್ನು ಬಂಧಿಸಲಾಗಿದೆ. ಕ್ರಮ ಆದರೂ ಬಿಜೆಪಿಯವರು ಸಭೆ ನಡೆಸಿದರೆ ಅರ್ಥವಿದೆಯೇ' ಎಂದು ಪ್ರಶ್ನಿಸಿದರು.

'ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆದಿರುವ ರಾಜ್ಯ ಬಿಜೆಪಿ ಮುಖಂಡರಿಗೆ ನಾಚಿಕೆಯಾಗಬೇಕು. ಅವರ ಆಡಳಿತದಲ್ಲಿ ಈ ರೀತಿ ಘಟನೆಗಳು ನಡೆದಿಲ್ಲವೇ? ಕಾಂಗ್ರೆಸ್ ಅಧಿಕಾರದಲ್ಲೇ ಗಲಭೆಯಾಗುತ್ತದೆ ಎಂಬುದು ಸುಳ್ಳು, ಒಮ್ಮೆ ಹಿಂದೆ ತಿರುಗಿ ನೋಡಲಿ' ಎಂದರು. 'ಸ್ವಲ್ಪ ಭದ್ರತಾ ವೈಫಲ್ಯ ಆಗಿರುವ ಅನುಮಾನ ಇದೆ. ಈ ಗಲಭೆ ಹಿಂದೆ ಯಾರಿದ್ದಾರೆ ಎಂಬುದರ ಕುರಿತೂ ತನಿಖೆ ನಡೆಯುತ್ತಿದೆ' ಎಂದರು.

'ನನಗಿರುವ ಮಾಹಿತಿ ಪ್ರಕಾರ ಸಾಮೂಹಿಕ ಗಣಪತಿ ಮೆರವಣಿಗೆಗೆ ನಾಲ್ಕೈದು ಗಣಪತಿಗಳು ಮಾತ್ರ ಇದ್ದವು. ಬೆಂಗಳೂರಿನಿಂದ ಖರೀದಿ ಮಾಡಿ ತಂದು ಸಂಖ್ಯೆ ಜಾಸ್ತಿ ಮಾಡಿಕೊಳ್ಳುವ ಪ್ರಯತ್ನವನ್ನು ಬಿಜೆಪಿ–ಜೆಡಿಎಸ್‌ನವರು ಮಾಡಿದರು' ಎಂದರು.

ಮೂಕಾಂಬಿಕೆಗೆ ವಜ್ರಖಚಿತ ಕಿರೀಟ ಅರ್ಪಿಸಿದ ಇಳಯರಾಜ

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ): ಸಂಗೀತ ನಿರ್ದೇಶಕ ಇಳಯರಾಜ ಅವರು ಕೊಲ್ಲೂರು ಮೂಕಾಂಬಿಕಾ ದೇವಿಗೆ ಕೋಟ್ಯಂತರ ಮೌಲ್ಯದ ವಜ್ರಖಚಿತ ಕಿರೀಟ, ಚಿನ್ನಾಭರಣವನ್ನು ಬುಧವಾರ ಅರ್ಪಿಸಿದ್ದಾರೆ.

ಈ ಹಿಂದೆ ದೇವಿಗೆ ವಜ್ರಖಚಿತ ಹಸ್ತ ನೀಡಿದ್ದ ಅವರು, ಈ ಬಾರಿ ವಜ್ರದ ಕಿರೀಟ, ಚಿನ್ನಾಭರಣ, ವೀರಭದ್ರ ದೇವರಿಗೆ ವಜ್ರಖಚಿತ ರಜತ ಕಿರೀಟ, ಬೆಳ್ಳಿ ಖಡ್ಗ ಸಮರ್ಪಿಸಿದ್ದಾರೆ.

ಪಂಚವಾದ್ಯಗಳೊಂದಿಗೆ ಕೊಲ್ಲೂರಿನ ಓಲಗ ಮಂಟಪದಿಂದ ರಥಬೀದಿಯಲ್ಲಿ ಪೂರ್ಣಕುಂಭ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಕಿರೀಟ, ಚಿನ್ನಾಭರಣ ತರಲಾಯಿತು. ಕ್ಷೇತ್ರದ ಅರ್ಚಕರು ಪೂಜಾ ವಿಧಿವಿಧಾನ ಪೂರೈಸಿದ ಬಳಿಕ ದೇವರಿಗೆ ಕಿರೀಟ, ಆಭರಣಗಳನ್ನು ಒಪ್ಪಿಸಲಾಯಿತು. ದೇವಸ್ಥಾನದ ವತಿಯಿಂದ ಇಳಯರಾಜ ಅವರನ್ನು ಗೌರವಿಸಲಾಯಿತು.

'ನನ್ನದೇನು ಇಲ್ಲ. ಎಲ್ಲಾ ಆ ಜಗನ್ಮಾತೆ ತಾಯಿ ಮೂಕಾಂಬಿಕೆಯ ಅನುಗ್ರಹ ಮತ್ತು ಆಶೀರ್ವಾದ' ಎಂದು ಇಳಯರಾಜ ಹೇಳಿದರು.

ಇಳಯರಾಜ ಅವರ ಪುತ್ರ ಕಾರ್ತಿಕ್ ಇಳಯರಾಜ, ಮೊಮ್ಮಗ ಯತೀಶ್ ಇಳಯರಾಜ, ಮುಖಂಡ ಕೆ. ಗೋಪಾಲ ಪೂಜಾರಿ, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ತಗ್ಗರ್ಸೆ, ಕಾರ್ಯನಿರ್ವಹಣಾ ಅಧಿಕಾರಿ ಪ್ರಶಾಂತ್ ಶೆಟ್ಟಿ, ಸಹಾಯ ಕಾರ್ಯನಿರ್ವಹಣಾ ಅಧಿಕಾರಿ ತುಂಬಗಿ, ಅರ್ಚಕರು, ವ್ಯವಸ್ಥಾಪನಾ ಸಮಿತಿ ಸದಸ್ಯರು ಭಾಗವಹಿಸಿದ್ದರು.




ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಗೆ ಇಳಯರಾಜ ವಜ್ರ ಕಿರೀಟ ಹಾಗೂ ಬೆಳ್ಳಿಯ ಕಿರೀಟ ಅರ್ಪಿಸಿದರು

'ತಮ್ಮ ಮಕ್ಕಳನ್ನು ಬೀದಿಗಿಳಿಸಿ ಪ್ರತಿಭಟಿಸಲಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಿಜೆಪಿ ನಾಯಕರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹಾಗೂ ಆರ್‌ಎಸ್‌ಎಸ್ ಮೆಚ್ಚಿಸಲು ಧರ್ಮಸ್ಥಳ ಚಲೋ, ಮದ್ದೂರು ಚಲೊ ನಡೆಸುತ್ತಿದ್ದಾರೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದರು.



ಪ್ರಿಯಾಂಕ್ ಖರ್ಗೆ

ಬಿಜೆಪಿ ನಿಯೋಗದಿಂದ ಮದ್ದೂರು ಚಲೊ ನಡೆಸುತ್ತಿರುವ ಕುರಿತು ಪತ್ರಕರ್ತರ ಪ್ರಶ್ನೆಗೆ ಪತ್ರಿಕ್ರಿಯಿಸಿದ ಅವರು, 'ಅಮಾಯಕರು, ಬಡವರನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ಪ್ರತಿಭಟನೆ, ಚಲೊಗಳನ್ನು ನಡೆಸುತ್ತಾರೆ. ಅದರ ಬದಲು ವಿದೇಶಗಳಲ್ಲಿರುವ, ಉದ್ಯೋಗ ಮಾಡುತ್ತಿರುವ ತಮ್ಮ ಮಕ್ಕಳನ್ನು ಕರೆಯಿಸಿ, ಮದ್ದೂರು ಚಲೋ ನಡೆಸಲಿ' ಎಂದು ಸವಾಲು ಹಾಕಿದರು.

'ಬಡವರು, ದಲಿತರು, ಅಮಾಯಕರನ್ನು ಪ್ರಚೋದಿಸಿ ಪ್ರತಿಭಟನೆ ಬಳಸುವ ಬದಲು, ನಿಮ್ಮ ಮಕ್ಕಳನ್ನು ಪ್ರತಿಭಟನೆ ನಡೆಸಲು ಬೀದಿಗಿಳಿಸಿ ನೋಡೋಣ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಬಿಜೆಪಿ ನಾಯಕರು ಕರಾವಳಿ ಪ್ರಯೋಗಾಲಯಗಳನ್ನು ಎಲ್ಲೆಡೆ ಸ್ಥಾಪಿಸುತ್ತಿದ್ದಾರೆ. ಬಿಜೆಪಿಯವರು ಧರ್ಮಸ್ಥಳ ಚಲೋ ನಡೆಸಿದ್ದು ಧರ್ಮಾಧಿಕಾರಿ ಪರವಾಗಿ ಅಲ್ಲವೇ? ಮತ್ತೆ ಸೌಜನ್ಯಾ ಮನೆಗೆ ಭೇಟಿ ಕೊಟ್ಟಿರುವುದು ಯಾರ ಪರವಾಗಿ? ಎರಡೂ ದೋಣಿಗಳಲ್ಲಿ ಕಾಲಿಟ್ಟು ಪಯಣಿಸುತ್ತಾರೆ' ಎಂದು ದೂರಿದರು.

'ಅನುದಾನ ಹಂಚಿಕೆ ಪ್ರಸ್ತಾವ ಸಲ್ಲಿಸಿ'

ಬೆಂಗಳೂರು: ವಿವಿಧ ವಸತಿ ಯೋಜನೆಗಳ ಅಡಿ ಮನೆಗಳ ನಿರ್ಮಾಣಕ್ಕೆ ಅಗತ್ಯ ಇರುವ ಅನುದಾನ ಹಂಚಿಕೆ ಕುರಿತು ಪ್ರಸ್ತಾವಗಳನ್ನು ಸಲ್ಲಿಸುವಂತೆ ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ವಸತಿ ಯೋಜನೆಗಳ ಪ್ರಗತಿ ಪರಿಶೀಲನೆ ಬುಧವಾರ ನಡೆಸಿದ ಅವರು, 'ಮನೆಗಳ ನಿರ್ಮಾಣವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಅರ್ಹ ಫಲಾನುಭವಿಗಳಿಗೆ ಶೀಘ್ರವಾಗಿ ಹಸ್ತಾಂತರಿಸಲು ಕ್ರಮಗಳನ್ನು ಕೈಗೊಳ್ಳಬೇಕು' ಎಂದು ನಿರ್ದೇಶನ ನೀಡಿದ್ದಾರೆ.

'ಹಿಂದೆ ನಮ್ಮ ಸರ್ಕಾರ ಇದ್ದಾಗ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ನಗರ) 43,874 ಮನೆಗಳು ಸೇರಿದಂತೆ ಒಟ್ಟು 47,848 ಮನೆಗಳನ್ನು ಮಂಜೂರು ಮಾಡಲಾಗಿತ್ತು. ಈ ಪೈಕಿ, 13,303 ಮನೆಗಳು ಬಹುತೇಕ ಪೂರ್ಣಗೊಂಡಿವೆ. ಒಟ್ಟು 25,815 ಮನೆಗಳು ನಿರ್ಮಾಣ ಹಂತದಲ್ಲಿವೆ. ಇದರಲ್ಲಿ ಫಲಾನುಭವಿಗಳ ವಂತಿಕೆ ₹134 ಕೋಟಿ ಸಂಗ್ರಹಿಸಲಾಗಿದೆ. ಮೊದಲ ಹಂತದಲ್ಲಿ 7,900 ಮನೆಗಳು ಬಹುತೇಕ ಪೂರ್ಣಗೊಂಡಿದ್ದು, ಫಲಾನುಭವಿಗಳ ವಂತಿಕೆ ಮೊತ್ತ ₹216 ಕೋಟಿ ಬಾಕಿಯಿದೆ. ಮನೆ ಹಂಚಿಕೆ ಮಾಡಲು ಸಾಧ್ಯವಾಗುವಂತೆ, ಈ ಬಾಕಿ ಮೊತ್ತದ ಪಾವತಿ ಬಗ್ಗೆ ಹುಡ್ಕೋದಿಂದ ಸಾಲ ಪಡೆಯುವುದು ಸೇರಿದಂತೆ ಸೂಕ್ತ ಪ್ರಸ್ತಾವ ಸಿದ್ಧಪಡಿಸಬೇಕು' ಎಂದೂ ಅಧಿಕಾರಿಗಳಿಗೆ ಸಿದ್ದರಾಮಯ್ಯ ಹೇಳಿದ್ದಾರೆ.

'ಬಜೆಟ್‌ನಲ್ಲಿ ಅಂಬೇಡ್ಕರ್ ವಸತಿ ಯೋಜನೆಯಡಿ (ಗ್ರಾಮೀಣ) ₹ 900 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ 94,939 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, 56,682 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ' ಎಂದು ಸಭೆಗೆ ಅಧಿಕಾರಿಗಳು ಮಾಹಿತಿ ನೀಡಿದರು.

'ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ (ಸ್ಲಂ ಬೋರ್ಡ್) ಅಡಿ 42 ಸಾವಿರ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಇಲ್ಲಿ ರಸ್ತೆ ಸೇರಿದಂತೆ ಮೂಲಸೌಲಭ್ಯಗಳನ್ನು ಕಲ್ಪಿಸಲು ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

ವಸತಿ ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಮತ್ತು ವಸತಿ ಇಲಾಖೆಯ ಅಧಿಕಾರಿಗಳು ಇದ್ದರು.

'3.65 ಲಕ್ಷ ಬಿಪಿಎಲ್ ಕಾರ್ಡ್ ರದ್ದು'

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ ಅನರ್ಹರಿಗೆ ನೀಡಲಾಗಿದ್ದ ಬಿಪಿಎಲ್ ಪಡಿತರ ಕಾರ್ಡ್‌ಗಳ ಪೈಕಿ 3.65 ಲಕ್ಷ ಕಾರ್ಡ್‌ಗಳನ್ನು ಪತ್ತೆ ಮಾಡಿ ರದ್ದುಪಡಿಸಲಾಗಿದೆ. ಇನ್ನೂ ಸಾಕಷ್ಟು ಮಂದಿ ಅನರ್ಹರು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದು, ಅವುಗಳನ್ನೂ ರದ್ದುಪಡಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಹಾರ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಅವರು, 'ಈ ಕಾರ್ಯಾಚರಣೆಯಲ್ಲಿ ಅರ್ಹರಿಗೆ ಯಾವುದೇ ತೊಂದರೆ ಆಗಬಾರದು. ಒಬ್ಬ ಅರ್ಹ ವ್ಯಕ್ತಿಯ ಬಿಪಿಎಲ್ ಕಾರ್ಡ್ ಸಹ ರದ್ದಾಗಬಾರದು. ಅರ್ಹರಿಗೆ ಈವರೆಗೆ ಬಿಪಿಎಲ್ ಕಾರ್ಡ್ ನೀಡಿಲ್ಲದೇ ಇದ್ದರೆ, ವಿತರಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು' ಎಂದು ತಾಕೀತು ಮಾಡಿದರು.

'ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಬೇಕು. ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್‌ಗಳನ್ನು ಅಳವಡಿಸಬೇಕು. ರಾಜ್ಯದಲ್ಲಿರುವ ಎಲ್ಲಾ ಗೋದಾಮುಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಬೇಕು' ಎಂದು ಸಿದ್ದರಾಮಯ್ಯ ಸೂಚಿಸಿದರು.

ಆಹಾರ ಕಿಟ್ ಪ್ರಸ್ತಾವಕ್ಕೆ ಸೂಚನೆ

'ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಅಕ್ಕಿಯ ಜತೆಗೆ ಪೌಷ್ಟಿಕ ಧಾನ್ಯ, ಅಗತ್ಯ ಆಹಾರ ಸಾಮಗ್ರಿಗಳನ್ನು ಒಳಗೊಂಡ ಕಿಟ್ ಒದಗಿಸುವ ಬಗ್ಗೆ ಪ್ರಸ್ತಾವ ಸಲ್ಲಿಸಿ' ಎಂದು ಆಹಾರ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.



'ಕನಿಷ್ಠ ಬೆಂಬಲ ಬೆಲೆ ಕಾರ್ಯಕ್ರಮದ ಅಡಿಯಲ್ಲಿ, ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಮತ್ತು ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ಆಹಾರ ಧಾನ್ಯಗಳನ್ನು ಖರೀದಿಸಬೇಕು' ಎಂದಿದ್ದಾರೆ.



ಆಹಾರ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳಲಾಗುವುದು. ಇದರಿಂದ ಇಲಾಖೆಯ ಕಾರ್ಯನಿರ್ವಹಣೆ ಇನ್ನಷ್ಟು ಉತ್ತಮಗೊಳ್ಳಲಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಬಿಸಿ ನರ್ಸಿಂಗ್ ಕಾಲೇಜು: ವಿದ್ಯಾರ್ಥಿನಿ ತಾಯಿ ಆರೋಪ

'ಬಾಕಿ ಶುಲ್ಕಕ್ಕೆ ತಾಳಿ, ಒಡವೆ ಕೇಳಿದರು'

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): 'ಬಾಕಿ ಶುಲ್ಕ ಪಾವತಿಸಬೇಕು ಎಂದು ಪಟ್ಟು ಹಿಡಿದ ನಗರದ ಬಿಬಿಸಿ ನರ್ಸಿಂಗ್ ಕಾಲೇಜಿನ ಚೇರ್ಮನ್ ಅವರು ನನ್ನ ತಾಳಿ, ಕಿವಿಯೋಲೆ ಸೇರಿ ಒಡವೆಗಳನ್ನು ಬಿಚ್ಚಿಸಿಕೊಂಡಿದ್ದಾರೆ' ಎಂದು ವಿದ್ಯಾರ್ಥಿನಿಯ ತಾಯಿ ಆರೋಪಿಸಿದ್ದಾರೆ.

ಕನಕಗಿರಿ ತಾಲ್ಲೂಕಿನ ಮುಸ್ಲಾಪುರ ಗ್ರಾಮದ ವಿದ್ಯಾರ್ಥಿನಿ ಕಾವೇರಿ ಹನುಮಂತಪ್ಪ ವಾಲಿಕರ ಅವರು ಮ್ಯಾನೇಜ್‌ಮೆಂಟ್ ಕೋಟಾದಡಿ ಬಿಬಿಸಿ ನರ್ಸಿಂಗ್ ಕಾಲೇಜಿನಲ್ಲಿ ಸೀಟು ಪಡೆದಿದ್ದರು. ಪ್ರಥಮ ವರ್ಷಕ್ಕೆ ₹10 ಸಾವಿರ ಪ್ರವೇಶ ಶುಲ್ಕ ಪಾವತಿಸಿದ್ದರು. ಉಳಿದ ₹90 ಸಾವಿರ ಶುಲ್ಕವನ್ನು ಹಂತ–ಹಂತವಾಗಿ ಪಾವತಿಸುವುದಾಗಿ ತಿಳಿಸಿದ್ದರು.

ಆದರೆ, ಆರ್ಥಿಕ ದುಸ್ಥಿತಿ ಮತ್ತು ಕೋರ್ಸ್‌ನ ವಿಷಯಗಳು ಕಷ್ಟಕರವಾದ ಕಾರಣಕ್ಕೆ ಕಾವೇರಿ ಅವರು ಬೇರೆ ನರ್ಸಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಮುಂದಾಗಿದ್ದರು. ವಿದ್ಯಾರ್ಥಿನಿಯು ಪಾಲಕರ ಜೊತೆಗೆ ಮಂಗಳವಾರ ಕಾಲೇಜಿನ ಚೇರ್ಮನ್ ಡಾ.ಸಿ.ಬಿ. ಚಿನಿವಾಲ ಅವರನ್ನು ಭೇಟಿ ಮಾಡಿ, ಟಿಸಿ, ಅಂಕಪಟ್ಟಿ ಹಿಂದಿರುಗಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

'ಕೋರ್ಸ್ ನಾಲ್ಕು ವರ್ಷಗಳ ಅವಧಿಗೆ ಇದೆ. ಬಾಕಿ ಇರುವ ಎಲ್ಲ ಹಣ ಪಾವತಿಸಿದರೆ ಮಾತ್ರ ದಾಖಲೆ ನೀಡುತ್ತೇವೆ. ನಿಮಗೆ ದಾಖಲೆಗಳು ಬೇಕಿದ್ದರೆ ಕೊರಳಲ್ಲಿರುವ ಚಿನ್ನದ ತಾಳಿ ಬಿಚ್ಚಿಕೊಡಿ' ಎಂದು ಚೇರ್ಮನ್ ರೇಗಾಡಿದರು. ಮಗಳ ಭವಿಷ್ಯದ ಹಿತದೃಷ್ಟಿಯಿಂದ ಪತಿಯ ಮುಂದೆಯೇ ತಾಳಿ, ಬೆಂಡೋಲೆ, ಬುಗುಡಿಕಟ್ಟಿಯನ್ನು ಬಿಚ್ಚಿ ಕೊಟ್ಟುಬಂದಿದ್ದೇನೆ' ಎಂದು ವಿದ್ಯಾರ್ಥಿನಿಯ ತಾಯಿ ರೇಣುಕಮ್ಮ ಕಣ್ಣೀರಿಟ್ಟರು.



ಗಂಗಾವತಿ ಬಿಬಿಸಿ ಕಾಲೇಜಿನಲ್ಲಿ ತಾಳಿ ಬಿಚ್ಚಿಕೊಟ್ಟು ಬಂದ ವಿದ್ಯಾರ್ಥಿನಿ ತಾಯಿ ರೇಣುಕಮ್ಮ, ತಂದೆ ಹನುಮಂತಪ್ಪ, ವಿದ್ಯಾರ್ಥಿನಿ ಕಾವೇರಿ

'ಶುಲ್ಕ ಕೇಳಿದ್ದಕ್ಕೆ ಒಡವೆ ಬಿಚ್ಚಿಟ್ಟರು'

'ಭಾವನಾತ್ಮಕವಾಗಿ ತಾಳಿ ಬಿಚ್ಚಿ ಕೊಟ್ಟಿದ್ದೇನೆಯೇ ಹೊರತು ತಾಳಿ ಕೊಡುವಂತೆ ಅವರು ಕೇಳಿಲ್ಲ ಎಂದು ವಿದ್ಯಾರ್ಥಿನಿಯ ಪಾಲಕರು ಪತ್ರ ಬರೆದು ಕೊಟ್ಟಿದ್ದಾರೆ. ಅವರಿಗೆ ಎಲ್ಲ ದಾಖಲೆಗಳನ್ನೂ ನೀಡಿದ್ದೇವೆ. ಘಟನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗೂ ಮಾಹಿತಿ ನೀಡಿದ್ದೇವೆ' ಎಂದು ಸಂಸ್ಥೆಯ ಚೇರ್ಮನ್ ಡಾ.ಸಿ.ಬಿ. ಚಿನಿವಾಲ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

'ವಿದ್ಯಾರ್ಥಿನಿ ಮ್ಯಾನೇಜ್‌ಮೆಂಟ್ ಕೋಟಾದಡಿ ಪ್ರವೇಶ ಪಡೆದಿದ್ದರು. ಬೇರೆ ಕಾಲೇಜಿಗೆ ಪ್ರವೇಶ ಪಡೆಯಲು ದಾಖಲೆಗಳನ್ನು ಕೇಳಿದ್ದರು. ಬಾಕಿ ಹಣ ಪಾವತಿಸುವಂತೆ ಕೇಳಿದ್ದಕ್ಕೆ ವಿದ್ಯಾರ್ಥಿನಿ ತಾಯಿ ಕಿವಿಯೋಲೆ ಬಿಚ್ಚಿ ಟೇಬಲ್ ಮೇಲೆ ಇಟ್ಟಿದ್ದರು. ನಾವೇನೂ ಒಡವೆ ನೀಡುವಂತೆ ಕೇಳಿಲ್ಲ' ಎಂದು ತಿಳಿಸಿದ್ದಾರೆ.

ಸರ್ಕಾರಿ ಕಾಲೇಜಿನಲ್ಲಿ ಶಿಕ್ಷಣ ಪಡೆಯಲು ಟಿಸಿ, ಅಂಕಪಟ್ಟಿ ನೀಡುವಂತೆ ಗೋಗರೆದರೂ ಕೊಡುತ್ತಿರಲಿಲ್ಲ. ಬಾಕಿ ಶುಲ್ಕ ಪಾವತಿಸುವಂತೆ ನಿಂದಿಸಿದ್ದಾರೆ
ಕಾವೇರಿ, ವಿದ್ಯಾರ್ಥಿನಿ, ಕನಕಗಿರಿ

ದಾಖಲೆಗಳು ಬೇಕಾದರೆ ತಾಳಿ ಬಿಚ್ಚಿಕೊಡುವಂತೆ ಕೇಳಿದ್ದರಿಂದ ಅನಿವಾರ್ಯವಾಗಿ ತಾಳಿ, ಬೆಂಡೋಲೆ, ಬುಗುಡುಕಟ್ಟಿ ಬಿಚ್ಚಿ ಚೇರ್ಮನ್‌ಗೆ ಕೊಟ್ಟಿದ್ದೇವೆ
ರೇಣುಕಮ್ಮ, ವಿದ್ಯಾರ್ಥಿನಿ ತಾಯಿ

---

69 ಕಡೆ 'ಲೋಕಾ' ಪರಿಶೀಲನೆ

ಬೀದರ್ ಪಶು ವಿ.ವಿ: ₹32.26 ಕೋಟಿ ಅಕ್ರಮ ಆರೋಪ

● ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್/ಬೆಂಗಳೂರು: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ರಾಜ್ಯದ ವಿವಿಧೆಡೆ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿ ಕಚೇರಿ, ಮನೆ ಹಾಗೂ ಮಳಿಗೆಗಳು ಸೇರಿ ಒಟ್ಟು 69 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಬುಧವಾರ ಏಕಕಾಲಕ್ಕೆ ಪರಿಶೀಲನೆ ನಡೆಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ದೂರು ನೀಡಿದ್ದರಿಂದ ಬೆಂಗಳೂರಿನ 31 ಕಡೆ, ಬೀದರ್ ಜಿಲ್ಲೆಯಲ್ಲಿ 24, ಕೊಪ್ಪಳ, ಚಿಕ್ಕಮಗಳೂರಿನಲ್ಲಿ ತಲಾ ಎರಡು ಕಡೆ, ರಾಮನಗರ, ಹಾಸನ, ಕೋಲಾರ, ಉಡುಪಿ ಸೇರಿದಂತೆ ವಿವಿಧ ಕಡೆಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ಲೋಕಾಯುಕ್ತ ಎಡಿಜಿಪಿ ಮನೀಷ್ ಖರ್ಬಿಕರ್ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

2018ರಿಂದ 2022ರ ಅವಧಿಯಲ್ಲಿ ಕೆಲಸ ನಿರ್ವಹಿಸಿದ ವಿವಿ ಕುಲಪತಿ, ಕುಲಸಚಿವರು, ವಿವಿಧ ನಿಕಾಯದ ಡೀನ್‌ಗಳು, ಅಧಿಕಾರಿಗಳು, ಎಂಜಿನಿಯರ್‌ಗಳು, ಗುತ್ತಿಗೆ ನೌಕರರು ಹಾಗೂ ಸಿಬ್ಬಂದಿಯ ಮನೆಯ ವಿಳಾಸವನ್ನು ಖಚಿತಪಡಿಸಿಕೊಳ್ಳಲು ಈ ಕಾರ್ಯಾಚರಣೆ ನಡೆಸಲಾಯಿತು ಎಂದು ಲೋಕಾಯುಕ್ತ ಮೂಲಗಳು ಖಚಿತಪಡಿಸಿವೆ.

ಪರಿಶೀಲನೆಗೆ ಒಳಪಟ್ಟ ಅಧಿಕಾರಿ–ಸಿಬ್ಬಂದಿಯನ್ನು ಆರೋಪಿಗಳು ಎಂದು ಪರಿಗಣಿಸಬೇಕಿಲ್ಲ. ತನಿಖೆಯ ಭಾಗ ವಾಗಿ ಅವರ ಇರುವಿಕೆ ಮತ್ತು ವಿಳಾಸಗಳನ್ನು ಪರಿಶೀಲಿಸಲಾಗಿದೆ ಅಷ್ಟೆ. ತನಿಖೆ ಮುಂದುವರೆದಂತೆ ಅವರನ್ನು ವಿಚಾರಣೆಗೆ ಒಳಪಡಿಸಬಹುದು ಇಲ್ಲವೇ ಸಾಕ್ಷಿಯಾಗಿ ಪರಿಗಣಿಸಬಹುದು ಎಂದು ಮೂಲಗಳು ವಿವರಿಸಿವೆ.

'ನಿವೃತ್ತ ನೌಕರರೊಬ್ಬರಿಗೆ ಸೇರಿದ ನಾಲ್ಕು ಟ್ರಕ್‌ಗಳು, ಕೆಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಕೆಲವು ಸಿಬ್ಬಂದಿಯನ್ನು ಇಡೀ ದಿನ ಪ್ರಶ್ನಿಸಲಾಗಿದೆ' ಎಂದು ಬೀದರ್ ಜಿಲ್ಲಾ ಲೋಕಾಯುಕ್ತ ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಆರೋಪವೇನು?

2018ರಿಂದ 2022ರವರೆಗಿನ ಅವಧಿಯಲ್ಲಿ ವಿಶ್ವವಿದ್ಯಾಲಯ ಹಾಗೂ ಅದರ ವ್ಯಾಪ್ತಿಯಲ್ಲಿರುವ ರಾಜ್ಯದ ವಿವಿಧ ಕಡೆಗಳಲ್ಲಿರುವ ಏಳು ಕಾಲೇಜುಗಳಿಗೆ ಪೀಠೋಪಕರಣ, ಕಂಪ್ಯೂಟರ್, ಪ್ರಯೋಗಾಲಯದ ಉಪಕರಣಗಳು ಸೇರಿದಂತೆ ಇತರೆ ವಸ್ತುಗಳ ಖರೀದಿಯಲ್ಲಿ ₹32.26 ಕೋಟಿ ಅಕ್ರಮ ಎಸಗಲಾಗಿದೆ ಎಂದು ಪೌಲ್ಟ್ರಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ವೆಂಕಟ್ ರೆಡ್ಡಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

ಈ ಅವಧಿಯಲ್ಲಿ ಎಚ್.ಡಿ. ನಾರಾಯಣಸ್ವಾಮಿ ಕುಲಪತಿಯಾಗಿದ್ದರು. ಹಾಲಿ ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಆಗ ಕುಲಸಚಿವರಾಗಿದ್ದರು. ನಿವೃತ್ತ ಹಣಕಾಸು ನಿಯಂತ್ರಣ ಅಧಿಕಾರಿ ಪ್ರೊ.ಕೆ.ಎಲ್. ಸುರೇಶ, ಸಹಾಯಕ ಹಣಕಾಸು ನಿಯಂತ್ರಣ ಅಧಿಕಾರಿ ಮೃತ್ಯುಂಜಯ, ಗುತ್ತಿಗೆ ನೌಕರ ಸುನೀಲ್ ಪಾಟೀಲ್ ಸೇರಿ 15 ಮಂದಿಯನ್ನು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

ಗುರುವಾರ, ಸೆಪ್ಟೆಂಬರ್ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 252 | ಪುಟ 14

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ
ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ರದ್ದುಪಡಿಸಬೇಕು ಎಂದು ಆಗ್ರಹಿಸಿ ಮೈಸೂರಿನಲ್ಲಿ ಬುಧವಾರ ಎಐಡಿಎಸ್‌ಒ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ ಯುವತಿಯೊಬ್ಬರು ಪಾಲ್ಗೊಂಡಿದ್ದರು



ಪ್ರಮಾಣ ವಚನ ನಾಳೆ?
ಉಪರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ಸಿ.ಪಿ. ರಾಧಾಕೃಷ್ಣನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ



ಸೆನ್ಸೆಕ್ಸ್ 81,425 | ನಿಫ್ಟಿ 24,973 | $/₹ 88.11 | ಚಿನ್ನ (Std. 10g) ₹1,14,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,31,700 (ಬೆಂಗಳೂರು)

ದೇಶದಾದ್ಯಂತ ಎಸ್‌ಐಆರ್‌ಗೆ ಸಿದ್ಧತೆ

ವಿವಿಧ ಸಿಇಒಗಳ ಜತೆ ಪರಿಶೀಲನಾ ಸಭೆ ನಡೆಸಿದ ಮುಖ್ಯ ಚುನಾವಣಾ ಆಯುಕ್ತ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ವರ್ಷಾಂತ್ಯದ ವೇಳೆಗೆ ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಲು ಮುಂದಾಗಿರುವ ಚುನಾವಣಾ ಆಯೋಗ, ಈ ಕುರಿತು ಶೀಘ್ರದಲ್ಲಿಯೇ ವೇಳಾಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ.

ಎಸ್‌ಐಆರ್ ಕುರಿತು ವಿವಿಧ ರಾಜ್ಯಗಳ ಚುನಾವಣಾ ಅಧಿಕಾರಿಗಳೊಂದಿಗೆ ಆಯೋಗದ ಹಿರಿಯ ಅಧಿಕಾರಿಗಳು ಬುಧವಾರ ದಿನವಿಡೀ ಮಹತ್ವದ ಸಭೆಗಳನ್ನು ನಡೆಸಿದರು.

ರಾಷ್ಟ್ರದಾದ್ಯಂತ ಎಸ್‌ಐಆರ್ ನಡೆಸಲು ಕೈಗೊಂಡಿರುವ ಸಿದ್ಧತಾ ಕಾರ್ಯಗಳ ಕುರಿತು ಸಭೆಯಲ್ಲಿ ಪರಿಶೀಲನೆ ನಡೆಸಲಾಯಿತು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು, ವಿವೇಕ್ ಜೋಶಿ ಅವರೂ ಪಾಲ್ಗೊಂಡಿದ್ದರು.

ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ವಿನೋದ್ ಸಿಂಗ್ ಗುಂಜಿಯಾಲ್ ಅವರು, ವಿವಾದಗಳ ನಡುವೆಯೂ ರಾಜ್ಯದಲ್ಲಿ ಎಸ್‌ಐಆರ್ ಜಾರಿಗೆ ಅಳವಡಿಸಿಕೊಂಡ ಕಾರ್ಯತಂತ್ರ, ನಿಯಮಗಳು, ನಡೆಸಿದ ಕಸರತ್ತಿನ ವಿವರವನ್ನು ಪ್ರಾತ್ಯಕ್ಷಿಕೆ ಮೂಲಕ ನೀಡಿದರು.

ಮುಂದಿನ ವರ್ಷದ (2026) ಏಪ್ರಿಲ್–ಮೇ ತಿಂಗಳಲ್ಲಿ ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಬೇಕಿದ್ದು, ಅದಕ್ಕೂ ಮುನ್ನವೇ, ಈ ವರ್ಷಾಂತ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ನೀಡುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸಭೆಯಲ್ಲಿ ಹಾಜರಿದ್ದ ಸಿಇಒಗಳು ತಮ್ಮ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಒಟ್ಟಾರೆ ಮತದಾರರ ಸಂಖ್ಯೆ, ಹಿಂದೆ ನಡೆದಿದ್ದ ಎಸ್‌ಐಆರ್ ಮತ್ತು ಮತದಾರರ ಪಟ್ಟಿಯ ಕುರಿತು ವಿವರವಾದ ಮಾಹಿತಿಯನ್ನು ಪ್ರಸ್ತುತಪಡಿಸಿದರು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ದೇಶದಾದ್ಯಂತ ಎಸ್‌ಐಆರ್ ನಡೆಸಲು ಚುನಾವಣಾ ಆಯೋಗ ಜೂನ್ 24ರಂದು ನಿರ್ಧರಿಸಿತ್ತು. ಅಕ್ಟೋಬರ್–ನವೆಂಬರ್‌ನಲ್ಲಿ ಚುನಾವಣೆ ನಡೆಯಲಿರುವ ಬಿಹಾರದಿಂದ ಅದನ್ನು ಪ್ರಾರಂಭಿಸುವುದಾಗಿ ತಿಳಿಸಿತ್ತು. ದೇಶದ ಇತರ ಭಾಗಗಳಿಗೆ ಮುಂದಿನ ದಿನಗಳಲ್ಲಿ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದೂ ಆಯೋಗ ಹೇಳಿತ್ತು.

‘ದೇಶದಲ್ಲಿ 2003ರಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆಸಲಾಗಿತ್ತು. ನಗರೀಕರಣ, ಹೆಚ್ಚುತ್ತಿರುವ ವಲಸೆಯಿಂದಾಗಿ ಮತದಾರರ ಪಟ್ಟಿಯಲ್ಲಿ ಪದೇ ಪದೇ ಬದಲಾವಣೆಗಳು ಆಗುತ್ತಿವೆ. ಹೀಗಾಗಿ ಎಸ್‌ಐಆರ್ ಅಗತ್ಯವಾಗಿದೆ’ ಎಂದು ಚುನಾವಣಾ ಆಯೋಗ ಪ್ರತಿಪಾದಿಸಿತ್ತು.

ಬಾಂಗ್ಲಾ ಮತ್ತು ಮ್ಯಾನ್ಮಾರ್ ಅಕ್ರಮ ವಲಸಿಗರನ್ನು ಹಲವು ರಾಜ್ಯಗಳಲ್ಲಿ ಪತ್ತೆ ಮಾಡಿದ ನಂತರ ವಿದೇಶಿ ಅಕ್ರಮ ವಲಸಿಗರನ್ನು ಪಟ್ಟಿಯಿಂದ ತೆಗೆಯುವುದು ಈ ವಿಶೇಷ ಪರಿಷ್ಕರಣೆಯ ಪ್ರಾಥಮಿಕ ಉದ್ದೇಶ. ಚುನಾವಣಾ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿ ಪರಿಶೀಲಿಸುವ ಮೂಲಕ ದೋಷಮುಕ್ತ ಮತದಾರರ ಪಟ್ಟಿ ರಚನೆಯ ಕ್ರಮ ವಹಿಸಲಿದ್ದಾರೆ ಎಂದು ಆಯೋಗದ ಅಧಿಕಾರಿಗಳು ಹೇಳಿದ್ದರು. ಎಸ್‌ಐಆರ್ ಅನ್ನು ವಿರೋಧಿಸುತ್ತಿರುವ ವಿರೋಧ ಪಕ್ಷಗಳು, ‘ಬಿಜೆಪಿಗೆ ಲಾಭ ಮಾಡುವ ಉದ್ದೇಶದಿಂದಲೇ ಮತದಾರರ ಮಾಹಿತಿ ತಿರುಚುವ ಕೆಲಸವನ್ನು ಆಯೋಗ ಮಾಡುತ್ತಿದೆ’ ಎಂದು ದೂರಿವೆ.

ಹೊರರಾಜ್ಯಗಳಲ್ಲಿ ನೆಲಸಿರುವವರಿಗೆ ‘ಘೋಷಣಾ ಅರ್ಜಿ’

ಹೊರರಾಜ್ಯಗಳಲ್ಲಿ ನೆಲಸಿರುವವರಿಗಾಗಿಯೇ ಹೆಚ್ಚುವರಿಯಾಗಿ ‘ಘೋಷಣಾ ಅರ್ಜಿ’ಯೊಂದನ್ನು ಪರಿಚಯಿಸಲು ಆಯೋಗ ಮುಂದಾಗಿದೆ. 1987ರ ಜುಲೈ 1 ಮತ್ತು 2004ರ ಡಿಸೆಂಬರ್ 2ರ ಮಧ್ಯೆ ಭಾರತದಲ್ಲಿ ಜನಿಸಿರುವ ಬಗ್ಗೆ ಅವರೆಲ್ಲ ದೃಢಪಡಿಸಬೇಕು. ಜನ್ಮದಿನಾಂಕ ಮತ್ತು ವಾಸಸ್ಥಳದ ದೃಢೀಕರಣ ಪತ್ರಗಳನ್ನು ಸಲ್ಲಿಸಬೇಕು.

ಯಾವುದೇ ಅರ್ಹ ನಾಗರಿಕ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಲು ಈಗಾಗಲೇ ಬಿಹಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆಯೋಗಕ್ಕೆ ಸೂಚನೆ ನೀಡಿದೆ. ಕೆಲವು ರಾಜ್ಯಗಳು 2002 ಮತ್ತು 2004ರ ಮಧ್ಯೆ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಿದ್ದವು.

ಆಧಾರ್ ಪರಿಗಣನೆಗೆ ಸೂಚನೆ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮತದಾರರ ಗುರುತಿನ ದಾಖಲೆಯಾಗಿ ಆಧಾರ್ ಕಾರ್ಡ್ ಅನ್ನು ಪರಿಗಣಿಸುವಂತೆ ಚುನಾವಣಾ ಆಯೋಗವು ಬಿಹಾರದ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಸುಪ್ರೀಂ ಕೋರ್ಟ್ ಆದೇಶದ ಬೆನ್ನಲ್ಲೇ ಈ ನಿರ್ದೇಶನ ನೀಡಿದೆ. ಈ ಸಂಬಂಧ ರಾಜ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿರುವ ಆಯೋಗವು, ‘ಮತದಾರರ ಗುರುತಿಗೆ ಗೊತ್ತುಪಡಿಸಲಾದ 11 ದಾಖಲೆಗಳ ಜೊತೆಗೆ 12ನೇ ದಾಖಲೆಯಾಗಿ ಆಧಾರ್ ಕಾರ್ಡ್ ಅನ್ನು ಪರಿಗಣಿಸಬಹುದು’ ಎಂದು ತಿಳಿಸಿದೆ.



ಒಳಮೀಸಲಾತಿ ವರ್ಗೀಕರಣದಲ್ಲಿ ಆಗಿರುವ ತಾರತಮ್ಯ ಸರಿಪಡಿಸುವಂತೆ ಆಗ್ರಹಿಸಿ ಬಂಜಾರ, ಭೋವಿ, ಕೊರಚ, ಕೊರವ ಮೀಸಲಾತಿ ಒಕ್ಕೂಟದಿಂದ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಯುವಕರು ಬ್ಯಾರಿಕೇಡ್ ಹತ್ತಿ ಆಕ್ರೋಶ ವ್ಯಕ್ತಪಡಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಒಳಮೀಸಲು ಪ್ರತಿಭಟನಾ ಕಿಚ್ಚು

ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನ • ಪೊಲೀಸರಿಂದ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣ ಅವೈಜ್ಞಾನಿಕವಾಗಿದ್ದು, ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳಿಗೆ ಕನಿಷ್ಠ ಶೇ 5ರಷ್ಟು ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಬೃಹತ್ ಪ್ರತಿಭಟನೆ ತೀವ್ರ ಸ್ವರೂಪ ಪಡೆದು, ಪ್ರತಿಭಟನಕಾರರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದ ಘಟನೆ ನಡೆಯಿತು.

‘ಬೆಂಗಳೂರು ಚಲೊ’ಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಒಳಮೀಸಲಾತಿ ಕಲ್ಪಿಸುವ ವೇಳೆ ತಾರತಮ್ಯ ಮಾಡಲಾಗಿದೆ ಎಂದು ಆಪಾದಿಸಿ, ಪ್ರತಿಕೃತಿ ದಹಿಸಿದರು. ಮಧ್ಯಾಹ್ನದವರೆಗೂ ಶಾಂತ ರೀತಿಯಲ್ಲಿ ಸಾಗುತ್ತಿದ್ದ ಪ್ರತಿಭಟನೆಯು ಆ ಬಳಿಕ ಉಗ್ರ ಸ್ವರೂಪ ಪಡೆಯಿತು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿ ತೆರಳಿದ ಬಳಿಕ ಪ್ರತಿಭಟನಕಾರರು ರಸ್ತೆಗಿಳಿದು ವಾಹನಗಳನ್ನು ತಡೆದರು.

3B

ಸರ್ಕಾರಕ್ಕೆ ಒಂದು ವಾರದ ಗಡುವು

ರಾಜ್ಯ ಸರ್ಕಾರಕ್ಕೆ ಹೋರಾಟಗಾರರು ವಾರದ ಗಡುವು ನೀಡಿದ್ದಾರೆ. ಅಷ್ಟರಲ್ಲಿ ಒಳಮೀಸಲಾತಿ ಜಾರಿಯಲ್ಲಿ ಆಗಿರುವ ತಾರತಮ್ಯ ಸರಿಪಡಿಸಬೇಕು. ಸರಿಪಡಿಸದೇ ಇದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸೈಬರ್ ಕಮಾಂಡ್ ಘಟಕ ರಚನೆ

ಪ್ರಜಾವಾಣಿ ವಾರ್ತೆ

ದೇಶದಲ್ಲೇ ಮೊದಲು

ಬೆಂಗಳೂರು: ‘ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ಗಮನದಲ್ಲಿರಿಸಿಕೊಂಡು ರೂಪಿಸಲಾಗಿರುವ ದೇಶದ ಮೊದಲ ಸೈಬರ್ ಕಮಾಂಡ್ ಘಟಕವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಬೇಕು’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ನಗರದ ‘ನ್ಯೂಸ್ಪೇಸ್ ರಿಸರ್ಚ್ ಆ್ಯಂಡ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿ’ಯ ಅಧಿಕೃತ ಪ್ರತಿನಿಧಿ ಭಾವನಾ ವಿಜಯಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಪ್ರಕರಣದಲ್ಲಿ ಇಂತಹದೊಂದು ಸ್ವತಂತ್ರ ಘಟಕವನ್ನು ಸ್ಥಾಪಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು.

ಈ ಆದೇಶದ ಅನುಪಾಲನೆಯನ್ನು ಪರಿಗಣಿಸಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರನ್ನು ತೆರೆದ ಕೋರ್ಟ್ ಹಾಲ್‌ಗೆ ಬರಮಾಡಿಕೊಂಡ ನ್ಯಾಯಪೀಠ, ಸೈಬರ್ ಕಮಾಂಡ್ ಘಟಕ ಅಥವಾ ಸೈಬರ್ ಕಮಾಂಡ್ ಸೆಂಟರ್ (ಸಿಸಿಸಿ) ರಚನೆಯ ಆದೇಶ ಕೇವಲ ಕಾಗದದಲ್ಲಿ ಉಳಿಯುವಂತಾಗಬಾರದು ಎಂದು ಹೇಳಿತು.

3B

ಮುಖ್ಯಾಂಶಗಳು

- ಬಾಹ್ಯ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು
- 24ಕ್ಕೆ ವಿಚಾರಣೆ ಮುಂದೂಡಿಕೆ

‘ಒಂದೇ ಸೂರಿನಡಿ ಬರಲಿ...’

ಸೈಬರ್ ಅಪರಾಧಗಳ ತನಿಖೆಯಲ್ಲಿನ ಪ್ರಗತಿ ಅಥವಾ ಎಲ್ಲಾ ಮಾಹಿತಿ ಮತ್ತು ತಂತ್ರಜ್ಞಾನ ಪ್ರಕರಣಗಳನ್ನು ಒಂದೇ ಸೂರಿನಡಿ ತರಬೇಕು. ಸಿಸಿಸಿಯ ಇಂತಹ ಏಕೀಕರಣವನ್ನು ತೋರಿಸುವ ನಿಮ್ಮ ವರದಿಯನ್ನು ಅಮಿಕಸ್ ಕ್ಯೂರಿ ಮೂಲಕ ಈ ನ್ಯಾಯಪೀಠಕ್ಕೆ ಸಲ್ಲಿಸಬೇಕು. ಕೇಂದ್ರದ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅದಕ್ಕಾಗಿ ಕ್ರಮ ತೆಗೆದುಕೊಳ್ಳುವುದು ಸಿಸಿಸಿಯ ಆದ್ಯ ಕರ್ತವ್ಯವಾಗಿರುತ್ತದೆ ಎಂದು ನ್ಯಾಯಪೀಠ ಹೇಳಿದೆ.

ನೇಪಾಳ: ಮಧ್ಯಂತರ ಸರ್ಕಾರಕ್ಕೆ ಯತ್ನ

ಕಠ್ಮಂಡು (ಪಿಟಿಐ/ರಾಯಿಟರ್ಸ್): ಯುವ ಸಮುದಾಯದ ಪ್ರತಿಭಟನೆ, ಹಿಂಸಾಚಾರದಿಂದಾಗಿ ಅರಾಜಕತೆ ಮನೆ ಮಾಡಿರುವ ನೇಪಾಳದಲ್ಲಿ ಮಧ್ಯಂತರ ಸರ್ಕಾರ ರಚನೆ ಕುರಿತಂತೆ ಪ್ರಯತ್ನಗಳು ಬುಧವಾರ ನಡೆದಿವೆ.

ಇನ್ನೊಂದೆಡೆ, ಘರ್ಷಣೆಯನ್ನು ಹತ್ತಿಕ್ಕುವ ಸಲುವಾಗಿ ನೇಪಾಳ ಸೇನೆಯು ರಾಷ್ಟ್ರದಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿದ್ದು, ದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದೆ.

ಮಧ್ಯಂತರ ಸರ್ಕಾರ ಮುನ್ನಡೆಸಲು, ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕಾರ್ಕಿ, ಕಠ್ಮಂಡು ಮೇಯರ್ ಬಾಲೇಂದ್ರ ಶಾ ಹಾಗೂ ವಿದ್ಯುತ್ ಮಂಡಳಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕ ಕುಲಮಾನ್ ಘೀಸಿಂಗ್ ಅವರ ಹೆಸರುಗಳನ್ನು ಪ್ರತಿಭಟನೆ ನಡೆಸುತ್ತಿರುವ ಜೆನ್–ಝೀ ಯುವ ಸಮುದಾಯ ಪರಿಗಣಿಸುತ್ತಿದೆ. ಈ ಸಂಬಂಧ ಸಂಘಟನೆಯ ಮುಖಂಡರು ಆನ್‌ಲೈನ್ ಮೂಲಕ ವ್ಯಾಪಕ ಸಮಾಲೋಚನೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಇನ್ನಷ್ಟು ಸುದ್ದಿಗಳು 8

ಸೂರ್ಯೋದಯ: 6:09 ಸೂರ್ಯಾಸ್ತ : 6:25 ಚಂದ್ರೋದಯ: ರಾ. 8:23 ಚಂದ್ರಾಸ್ತ: ಬೆ. 8:18 | ಬುಧವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 21°

ಗುರುವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ ಶುಕ್ರವಾರ 28° : 20° ಶನಿವಾರ 28° : 20° ಭಾನುವಾರ 28° : 20°

ಗುರುವಾರ • ಸೆಪ್ಟೆಂಬರ್ 11, 2025 ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

ಪುನೀತ್ ಕೆರೆಹಳ್ಳಿ ಬಂಧನ

ಪ್ರಜಾವಾಣಿ ವಾರ್ತೆ


ಪುನೀತ್

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತಿರುವ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ಅವರನ್ನು ಬಸವನಗುಡಿ ಠಾಣೆಯ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ.

ಪುನೀತ್ ಅವರು ಇದುವರೆಗೂ 14 ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ಬಿಎನ್‌ಎಸ್‌ಎಸ್ ಸೆಕ್ಷನ್ 127ರ ಅಡಿ ಪ್ರಕರಣ ದಾಖಲಿಸಿಕೊಂಡು ಬೆಂಗಳೂರು ದಕ್ಷಿಣ ವಿಭಾಗದ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿ ಎದುರು ಹಾಜರು ಪಡಿಸಲಾಯಿತು.

ಇನ್ನ ಮುಂದೆ ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಡಲು ನಿರಾಕರಿಸಿದ್ದರಿಂದ ದಂಡಾಧಿಕಾರಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದ್ದಾರೆ.

ಜಂಕ್ಷನ್: ರಸ್ತೆ ಸುಸ್ಥಿತಿಗೆ ಸೂಚನೆ

200 ಮೀಟರ್ ವ್ಯಾಪ್ತಿಯಲ್ಲಿ ಗುಂಡಿ ಇರಬಾರದು: ರಾಜೇಂದ್ರ ಚೋಳನ್

ಪ್ರಜಾವಾಣಿ ವಾರ್ತೆ



ಪ್ರಮುಖ ಜಂಕ್ಷನ್‌ಗಳಲ್ಲಿ ಸುಗಮ ಸಂಚಾರ ಇರಬೇಕು. ರಸ್ತೆಗಳನ್ನು ಪಟ್ಟಿ ಮಾಡಿ, ಪೇ ಆ್ಯಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸಬೇಕು
ರಾಜೇಂದ್ರ ಚೋಳನ್
ನಗರ ಪಾಲಿಕೆ ಆಯುಕ್ತ

ಬೆಂಗಳೂರು: ಸುಗಮ ಸಂಚಾರಕ್ಕೆ ಅನುವಾಗುವಂತೆ ಜಂಕ್ಷನ್‌ಗಳ ಸುತ್ತ-ಮುತ್ತಲಿನ 200 ಮೀಟರ್ ರಸ್ತೆಗಳು ಸುಸ್ಥಿತಿಯಲ್ಲಿರುವಂತೆ ನಿರ್ವಹಣೆ ಮಾಡಬೇಕು ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಸೂಚಿಸಿದರು.

ಜಂಕ್ಷನ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ 200 ಮೀಟರ್ ದೂರದ ವರೆಗೂ ಗುಂಡಿಗಳು ಇರಬಾರದು. ಮೇಲ್ಮೈ ಪದರ ಹಾಳಾಗಿರಬಾರದು ಹಾಗೂ ಯಾವುದೇ ಅಸಮತೋಲನ-ಗಳಿಲ್ಲದಂತೆ ನಿರ್ವಹಣೆ ಮಾಡಬೇಕು ಎಂದು ಬುಧವಾರ ಪರಿಶೀಲನೆ ಸಂದರ್ಭದಲ್ಲಿ ಅಧಿಕಾರಿಗಳಿಗೆ ಆದೇಶಿಸಿದರು.

ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ ಮತ್ತು ಜಸ್ಮಾ ಭವನ ರಸ್ತೆಗಳಲ್ಲಿ ಕಾರು ನಿಲುಗಡೆ ಮಾಡಿರುವುದನ್ನು ಗಮನಿಸಿದ ರಾಜೇಂದ್ರ ಚೋಳನ್, ‘ಇಂತಹ ರಸ್ತೆಗಳ ಪಟ್ಟಿ ಮಾಡಿಕೊಳ್ಳಬೇಕು. ಪೇ ಆ್ಯಂಡ್ ಪಾರ್ಕ್ ವ್ಯವಸ್ಥೆಯನ್ನು ಜಾರಿಗೊಳಿಸಬೇಕು’ ಎಂದರು.

ಜಸ್ಮಾ ಭವನ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ನ ಅಡುಗೆ ಕೋಣೆಗೆ ಭೇಟಿ ನೀಡಿ, ‘ಅಡುಗೆ ಮಾಡುವ ಕಂಟೇನರ್‌ಗಳನ್ನು ನಿತ್ಯ ಮುಚ್ಚಿಡಬೇಕು. ಶುಚಿತ್ವ ಕಾಯ್ದುಕೊಳ್ಳ-ಬೇಕು’ ಎಂದು ಸೂಚನೆ ನೀಡಿದರು.

ತುಂಬಾ ದಿನಗಳಿಂದ ರಸ್ತೆ ಬದಿಯೇ ನಿಂತಿರುವಂತಹ ಅನಾಥ (ವಾರಸುದಾ-ರರಿಲ್ಲದ) ವಾಹನಗಳ ಬಗ್ಗೆ ಸಂಚಾರ ವಿಭಾಗದ ಪೊಲೀಸರ ಗಮನಕ್ಕೆ ತಂದು ತೆರವುಗೊಳಿಸಬೇಕು. ಪಾದಚಾರಿ ಮಾರ್ಗವನ್ನು ಹಾನಿಗೊಳಿಸಿದವರಿಗೆ ದಂಡ ವಿಧಿಸಲು ಹೇಳಿದರು.

ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ ಉಪಸ್ಥಿತರಿದ್ದರು.

ಪ್ರವಾಹ ತಪ್ಪಿಸಿ: ಹೆಬ್ಬಾಳ ಮೇಲ್ಸೇತುವೆ ವಿಮಾನ ನಿಲ್ದಾಣ ಮಾರ್ಗದ ಡೌನ್ ರ‍್ಯಾಂಪ್ ಬಳಿ ಜಲಾವೃತವಾಗದಂತೆ ಕಾಮಗಾರಿ ನಡೆಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರು ಸೂಚಿಸಿದರು.

ದಾಸರಹಳ್ಳಿ ವ್ಯಾಪ್ತಿಯಲ್ಲಿ ಆಟೊ ಟಿಪ್ಪರ್ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ, ಸ್ವಚ್ಛತಾ ಸಿಬ್ಬಂದಿಗೆ ಶೂಗಳನ್ನು ವಿತರಿಸಿದರು. ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿ, ರಿಜಿಸ್ಟರ್ ಪುಸ್ತಕವನ್ನು ಪರಿಶೀಲಿಸಿದರು. ಆಹಾರದ ಗುಣಮಟ್ಟ ಕಾಪಾಡಿಕೊಂಡು, ಕ್ಯಾಂಟೀನ್ ಸುತ್ತಲೂ ಸ್ವಚ್ಛತೆ ಕಾಪಾಡಿಕೊಳ್ಳಲು ಸೂಚಿಸಿದರು.

ಕೆರೆ ಒತ್ತುವರಿ ತೆರವಿಗೆ ಸೂಚನೆ


ರಮೇಶ್

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ 46 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯಾಚರಣೆ ಆರಂಭಿಸಬೇಕು ಎಂದು ಆಯುಕ್ತ ಡಿ.ಎಸ್. ರಮೇಶ್ ಸೂಚಿಸಿದರು.

‘ಬೃಹತ್ ನೀರುಗಾಲುವೆಗಳು ಎಲ್ಲೆಲ್ಲಿ ಒತ್ತುವರಿಯಾ-ಗಿವೆ ಎಂಬುದನ್ನು ಪಟ್ಟಿ ಮಾಡಿಕೊಂಡು ಭೂಮಾಪನ ಇಲಾಖೆ ಅಧಿಕಾರಿಗಳ ಸಹಯೋಗದೊಂದಿಗೆ ಸಮೀಕ್ಷೆ, ಮಾರ್ಕಿಂಗ್ ಮಾಡಿ ಹಾಗೂ ನೋಟೀಸ್ ನೀಡಿ ಒತ್ತುವರಿ ತೆರವು ಕಾರ್ಯವನ್ನು ಪರಿಣಾಮಕಾರಿಯಾಗಿ ನಡೆಸಬೇಕು’ ಎಂದು ಹೇಳಿದರು. ಪೂರ್ವ ಪಾಲಿಕೆಯ ವ್ಯಾಪ್ತಿಯಲ್ಲಿ ತೋಟಗಾರಿಕಾ ವಿಭಾಗಕ್ಕೆ 38 ಉದ್ಯಾನಗಳು ಬರಲಿವೆ. ಜೊತೆಗೆ ರಸ್ತೆ ಮಧ್ಯಭಾಗದಲ್ಲಿ ಸಸಿಗಳನ್ನು ನೆಟ್ಟು ಪೋಷಣೆ ಮಾಡಬೇಕು ಎಂದರು. ವಲಯ ಜಂಟಿ ಆಯುಕ್ತೆ ಡಾ. ದಾಕ್ಷಾಯಿಣಿ ಉಪಸ್ಥಿತರಿದ್ದರು.

ಮುನಿಸಿನ ಬೆನ್ನಲ್ಲೆ ಜೊತೆಯಾದ ಹೊರಟ್ಟಿ – ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿ ಸಭಾಪತಿ ಬಸವರಾಜ ಹೊರಟ್ಟಿ ಪತ್ರ ಬರೆದು ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೆ, ಖಾದರ್ ಅವರು ಹೊರಟ್ಟಿ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದ್ದಾರೆ. ಆ ಮೂಲಕ, ಹೊರಟ್ಟಿಯವರ ಮುನಿಸು ತಣಿದಿದೆ.

‘ವಿಧಾನಸೌಧದಲ್ಲಿ ಪುಸ್ತಕ ಮೇಳ ಆಯೋಜನೆ, ವಿಧಾನಸೌಧಕ್ಕೆ ಬೆಳಕಿನ ವ್ಯವಸ್ಥೆ ಹಾಗೂ ಇತರ ಕಾರ್ಯಕ್ರ-ಮಗಳನ್ನು ನಡೆಸುವ ಸಂದರ್ಭದಲ್ಲಿ ಯಾವುದನ್ನೂ ಗಮನಕ್ಕೆ ತಂದಿಲ್ಲ’ ಎಂದು ತಮ್ಮ ಪತ್ರದಲ್ಲಿ ಹೊರಟ್ಟಿ ಆರೋಪಿಸಿದ್ದರು.

ಈ ಬೆಳವಣಿಗೆಯ ನಡುವೆಯೇ, ಶಿವಾನಂದ ವೃತ್ತದ ಬಳಿ ಇರುವ ಸಭಾಪತಿ ಅವರ ಸರ್ಕಾರಿ ನಿವಾಸಕ್ಕೆ ಬುಧವಾರ ಬೆಳಿಗ್ಗೆ ತೆರಳಿದ ಖಾದರ್, ಕೆಲಹೊತ್ತು ಮಾತುಕತೆ ನಡೆಸಿದ್ದಾರೆ.

‘ಈಗ ಎಲ್ಲವೂ ಸರಿ ಹೋಗಿದೆ’ ಎಂದು ಇಬ್ಬರೂ ಸುದ್ದಿಗಾರರಿಗೆ ತಿಳಿಸಿದರು.

ವಾಣಿಜ್ಯ ತೆರಿಗೆ ಅಧಿಕಾರಿ ಬಂಧನ

ಬೆಂಗಳೂರು: ದೂರುದಾರರ ಪರವಾಗಿ ಆದೇಶ ನೀಡಲು ₹25,000 ಲಂಚ ಪಡೆಯುತ್ತಿದ್ದ ವೇಳೆ ವಾಣಿಜ್ಯ ತೆರಿಗೆ ಅಧಿಕಾರಿ ಶ್ರೀರಾಮಾನುಜ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಶ್ರೀರಾಮಪುರ ನಿವಾಸಿ, ವಕೀಲ ಡಿ.ಎಚ್.ಗುರುಪ್ರಸಾದ್ ಅವರು ವಾಣಿಜ್ಯ ತೆರಿಗೆ ಇಲಾಖೆಯ ಶಾಂತಿನಗರ ಕಚೇರಿಯಲ್ಲಿ ದೂರು ದಾಖಲಿಸಿದ್ದರು. ಅದಕ್ಕೆ ಸಂಬಂಧಿಸಿದಂತೆ ಆದೇಶ ನೀಡಲು ಶ್ರೀರಾಮಾನುಜ ಅವರು ₹75,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಗುರುಪ್ರಸಾದ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಕಾರ್ಯಾಚರಣೆ ರೂಪಿಸಿ, ಅದರಂತೆ ದೂರುದಾರರು ಆರೋಪಿಯ ಕಚೇರಿಗೆ ತೆರಳಿ ₹25,000 ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಅವರನ್ನು ಬಂಧಿಸಲಾಯಿತು. ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿದಿದೆ ಎಂದು ಮಾಹಿತಿ ನೀಡಿದ್ದಾರೆ.

ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಸಂಬಂಧಿಸಿದ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸ-ಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಮುನ್ನೋಟ

ತಿತ್ತಿತ್ತೈ–ಯಕ್ಷ ಪರ್ವ 13ಕ್ಕೆ


ಬಳ್ಕೂರು ಕೃಷ್ಣ ಯಾಜಿ

ಬೆಂಗಳೂರು: ಟೀಮ್ ತಿತ್ತಿತ್ತೈ ವತಿಯಿಂದ ಸೆ.13ರಂದು (ಶನಿವಾರ) ರಾತ್ರಿ 9.10ರಿಂದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ‘ತಿತ್ತಿತ್ತೈ–ಯಕ್ಷ ಪರ್ವ’ ಶೀರ್ಷಿಕೆಯಡಿ ಮೂರು ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

‘ದಮಯಂತಿ ಪುನಃ ಸ್ವಯಂವರ’ ಪ್ರಥಮ ಪ್ರಸಂಗದಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ (ಬಾಹುಕ), ಬಳ್ಕೂರು ಕೃಷ್ಣಯಾಜಿ (ಋತುಪರ್ಣ) ಪ್ರಮುಖ ಪಾತ್ರಗಳಲ್ಲಿ ರಂಗವೇರುತ್ತಾರೆ. ದಮಯಂತಿಯಾಗಿ ನೀಲ್ಕೋಡ್ ಶಂಕರ ಹೆಗಡೆ, ಸುದೇವ ಬ್ರಾಹ್ಮಣನಾಗಿ ಸಿದ್ದಾಪುರ ಅಶೋಕ್ ಭಟ್, ಚೇದಿರಾಣಿಯಾಗಿ ಪಂಜು ಕುಮಾರ್ ಬಗ್ವಾಡಿ ಕಾಣಿಸಿಕೊಳ್ಳಲಿದ್ದಾರೆ. ಭಾಗವತಿಕೆಯಲ್ಲಿ ಕೊಳಗಿ ಕೇಶವ ಹೆಗಡೆ ಮತ್ತು ಮೂಡುಬೆಳ್ಳೆ, ವಾದ್ಯದಲ್ಲಿ ಫಾಟಕ್-ಕುಂಜತ್ತಾಯರು ಜೋಡಿಯಾಗಲಿದ್ದಾರೆ.

‘ಭೃಗು ಶಾಪ’ ಪ್ರಸಂಗವನ್ನು ಶ್ರೀಧರ್ ಡಿ.ಎಸ್. ರಚಿಸಿದ್ದು, ಪ್ರಸಂಗದಲ್ಲಿ ವಿದ್ಯಾಧರ ಜಲವಳ್ಳಿ, ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ಪ್ರದೀಪ್ ಸಾಮಗ, ವಿಶ್ವನಾಥ್ ಹೊನ್ನಾಬೈಲ್, ದಿನೇಶ್ ಶೆಟ್ಟಿ ಕಾವಳಕಟ್ಟೆ ಹಾಗೂ ಸೀತಾರಾಮ ಕುಮಾರ್ ಪಾತ್ರವಹಿಸಿದ್ದಾರೆ.

ಮೂರನೆ ಪ್ರಸಂಗವಾದ ‘ಕೃಷ್ಣ ಸಂಕಲ್ಪ’ದಲ್ಲಿ ತೀರ್ಥಹಳ್ಳಿ ಗೋಪಾಲ್ ಆಚಾರ್ ಮತ್ತು ಕೊಳಲಿ ಕೃಷ್ಣ ಶೆಟ್ಟಿ ಅವರ ಜೋಡಿ ರಂಗವೇರಲಿದ್ದು, ಭಾಮಿನಿ ವೇಷ, ಪದ್ಯ–ಚಂಡೆಯ ಜುಗಲ್‌ಬಂದಿ ವಿಶೇಷ ಆಕರ್ಷಣೆಯಾಗಲಿದೆ. ಬೆಳಿಗ್ಗೆ 5.30ರವರೆಗೂ ಈ ಪ್ರದರ್ಶನಗಳು ನಡೆಯಲಿವೆ. ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 6362673283

‘ಪುಕ್ಕಟೆ ಸಲಹೆ’ ಪ್ರದರ್ಶನ


‘ಪುಕ್ಕಟೆ ಸಲಹೆ’ ನಾಟಕದ ದೃಶ್ಯ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡವು ಇದೇ ಭಾನುವಾರ ಸಂಜೆ 5 ಗಂಟೆ ಮತ್ತು 7.30ಕ್ಕೆ ಬನಶಂಕರಿಯ ಸುಚಿತ್ರ ಫಿಲ್ಮ್ ಸೊಸೈಟಿ ಆವರಣದಲ್ಲಿರುವ ಬಾನು ನೆನಪಿನ ನಾಣಿ ಅಂಗಳದಲ್ಲಿ ‘ಪುಕ್ಕಟೆ ಸಲಹೆ’ ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಎಚ್. ಡುಂಡಿರಾಜ್ ಅವರು ರಚಿಸಿದ್ದು, ಅಶೋಕ್ ಬಿ. ನಿರ್ದೇಶಿಸಿದ್ದಾರೆ. ದಿನವಿಡೀ ಎಲ್ಲ ಟಿ.ವಿಗಳಲ್ಲಿ ವಿಜೃಂಭಿಸುವ ಜ್ಯೋತಿಷಿಗಳ ಹಾವಳಿ, ಅವರ ನಿಜಬಣ್ಣ, ಅವಾಂತರಗಳನ್ನು ಹಾಸ್ಯದ ಮೂಲಕ ನಾಟಕ ಕಟ್ಟಿಕೊಡಲಿದೆ. ಸತತ ಒಂದೂವರೆ ಗಂಟೆಗಳ ಕಾಲದ ಈ ಪ್ರದರ್ಶನ, ಪ್ರೇಕ್ಷಕರು ನಗೆಗಡಲಲ್ಲಿ ತೇಲುವಂತೆ ಮಾಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿವರಕ್ಕೆ: 9945977184

13ಕ್ಕೆ ‘ರಾಮ ಶಾಮ ಡ್ರಾಮ’

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 13ರಂದು ಸಂಜೆ 7 ಗಂಟೆಗೆ ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ. ಅಶ್ವತ್ಥ್ ಕಲಾ ಭವನದಲ್ಲಿ ‘ರಾಮ ಶಾಮ ಡ್ರಾಮ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ಅವರು ಈ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ದೇವರೇ ಗತಿ ಆ್ಯಕ್ಸಿಡೆಂಟ್ ಆ್ಯಂಡ್ ಎಮರ್ಜೆನ್ಸಿ ಸೆಂಟರ್‌ನಲ್ಲಿ ಕೆಲಸ ಮಾಡುವ ವೈದ್ಯ ರಾಮ್, ಸಹಾಯಕ ಶಾಮ ಮತ್ತು ಸ್ವಾಗತಕಾರ ಭಾಮ ಹಾಗೂ ಚಿತ್ರ ವಿಚಿತ್ರ ಸಮಸ್ಯೆಗಳನ್ನು ಹೊತ್ತು ಆಸ್ಪತ್ರೆಗೆ ಬರುವ ರೋಗಿಗಳ ನಡುವೆ ನಡೆಯುವ ಹಾಸ್ಯ ಸನ್ನಿವೇಶಗಳೇ ನಾಟಕದ ಕಥಾವಸ್ತು. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯವೆಂದು ಪ್ರಕಟಣೆ ತಿಳಿಸಿದೆ.

ವಿವರಕ್ಕೆ: 9945977184

ಸಂಪ್ರದಾಯ ಉತ್ಸವ ನಾಳೆ

ಬೆಂಗಳೂರು: ನೃತ್ಯಾಂಗನಾ ಇನ್‌ಸ್ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಇದೇ ಶುಕ್ರವಾರ ಸಂಜೆ 6 ಗಂಟೆಗೆ ಮಲ್ಲೇಶ್ವರದ ಸೇವಾ ಸದನದಲ್ಲಿ ‘ಸಂಪ್ರದಾಯ–ಎ ಫೆಸ್ಟಿವಲ್ ಆಫ್ ಡಾನ್ಸ್ ಟ್ರೆಡಿಷನ್ಸ್’ ಶೀರ್ಷಿಕೆಯಡಿ ನೃತ್ಯ ಸಂಭ್ರಮ ಹಮ್ಮಿಕೊಂಡಿದೆ.

ಈ ಉತ್ಸವದಲ್ಲಿ ಕಲಾವಿದರಾದ ಸೌರವ್ ರಾಯ್ ಅವರು ಕಥಕ್, ಸರಿತಾ ಮಿಶ್ರಾ ಅವರು ಒಡಿಸ್ಸಿ ಹಾಗೂ ಸ್ವಪ್ನ ರಾಜೇಂದ್ರಕುಮಾರ್ ಅವರು ಮೋಹಿನಿಯಾಟ್ಟಂ ನೃತ್ಯ ಪ್ರದರ್ಶಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಕಾಡೆಮಿ ಆಫ್ ಭರತನಾಟ್ಯಂ ನಿರ್ದೇಶಕಿ ಗಾಯತ್ರಿ ಕೇಶವನ್ ಹಾಗೂ ಸಾಹಿತಿ ಸುಧಾಕರನ್ ರಾಮಂತಳಿ ಪಾಲ್ಗೊಳ್ಳುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಟಿಕೆಟ್‌ಗಳಿಗೆ: 8355996919

ಬೆಂಗಳೂರು ಪುಸ್ತಕ ಉತ್ಸವ

ಬೆಂಗಳೂರು: ಭಾರತೀಯ ಮಾಲ್ ಆಫ್ ಬೆಂಗಳೂರು ಇದೇ 11ರಿಂದ 28ರವರೆಗೆ ಬೆಂಗಳೂರು ಪುಸ್ತಕ ಉತ್ಸವ ಹಮ್ಮಿಕೊಂಡಿದೆ.

ಥಣಿಸಂದ್ರ ಮುಖ್ಯ ರಸ್ತೆಯ ಭಾರತೀಯ ನಗರದಲ್ಲಿರುವ ಮಾಲ್‌ನಲ್ಲಿ ಈ ಉತ್ಸವ ನಡೆಯಲಿದೆ. ಸಾಹಿತ್ಯದ ವಿವಿಧ ಪ್ರಕಾರ-ಗಳಲ್ಲಿ ಸಾವಿರಾರು ಪುಸ್ತಕಗಳು ಇರಲಿದ್ದು, ಹೆಸರಾಂತ ಲೇಖಕರ ಜತೆಗೆ ಸಂವಹನ ನಡೆಸಲೂ ಸಾಧ್ಯವಾಗಲಿದೆ. ಈ ಉತ್ಸವಕ್ಕೆ ಪ್ರವೇಶ ಉಚಿತವೆಂದು ಪ್ರಕಟಣೆ ತಿಳಿಸಿದೆ.

‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in ಕಳುಹಿಸಿ

ಎಐ: ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಇಂದಿನಿಂದ

ಬೆಂಗಳೂರು: ಬಹುಶಿಸ್ತೀಯ ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ (ಎಐ) ಬಳಕೆ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಸೆಪ್ಟೆಂಬರ್ 11 ಮತ್ತು 12ರಂದು ವಿಜಯ ಕಾಲೇಜಿನಲ್ಲಿ ನಡೆಯಲಿದೆ.

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ.ಎಸ್. ರಂಗಪ್ಪ, ಪ್ರಾಧ್ಯಾಪಕ ಜಿ. ವಿಶ್ವನಾಥಪ್ಪ, ಬಿಎಚ್‌ಎಸ್‌ಎಚ್‌ಇಎಸ್‌ನ ಕಾರ್ಯದರ್ಶಿ ಟಿ.ಎ. ಬಾಲಕೃಷ್ಣ, ಜಂಟಿ ಕಾರ್ಯದರ್ಶಿ ಟಿ.ಎಸ್. ಶ್ರೀಧರ್, ಕೆಎಂಎಫ್ ನಿರ್ದೇಶಕ ಜೆ. ಜೈಕುಮಾರ್, ವಿಜಯ ಕಾಲೇಜಿನ ಪ್ರಾಂಶುಪಾಲ ಎಂ. ಸುಬ್ರಮಣ್ಯ ಭಟ್, ಉಪ ಪ್ರಾಂಶುಪಾಲೆ ಜೈಬಾ ನಿಶಾತ್ ಬಾನು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕಾನ್‌ಸ್ಟೆಬಲ್ ಸೇರಿ ಇಬ್ಬರ ಬಂಧನ

ಬಾಂಗ್ಲಾದೇಶದ ಪ್ರಜೆಗಳನ್ನು ಬಂಧಿಸುವುದಾಗಿ ಬೆದರಿಸಿ ಹಣ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಅಪರಾಧ ವಿಭಾಗದ(ಸಿಸಿಬಿ) ಪೊಲೀಸ್ ಸಿಬ್ಬಂದಿ ಎಂದು ಹೇಳಿಕೊಂಡು ಬಾಂಗ್ಲಾದೇಶದ ಪ್ರಜೆಗಳಿಂದ ಹಣ ಸುಲಿಗೆ ಮಾಡುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಪೊಲೀಸ್ ವಿಭಾಗದ ಕಾನ್‌ಸ್ಟೆಬಲ್ ಪ್ರಶಾಂತ್ ನಾವಿ ಹಾಗೂ ಅವರ ಸ್ನೇಹಿತ ನಾಸೀರ್ ಖಾನ್ ಬಂಧಿತರು.

ಜನ ಸದ್ಭಾವನಾ ಸಂಘಟನೆಯ ಸದಸ್ಯರು ನೀಡಿದ ದೂರಿನ ಮೇರೆಗೆ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಗೊತ್ತಾಗಿದೆ.

‘ನಗರದ ವಿವಿಧೆಡೆ ಬಾಂಗ್ಲಾ ಪ್ರಜೆಗಳು ನೆಲಸಿದ್ದು, ಅವರು ಕಸ ಸಂಗ್ರಹಿಸುವ ಕೆಲಸ ಮಾಡಿಕೊಂಡಿದ್ದಾರೆ. ಅವರನ್ನೇ ಗುರಿಯಾಗಿಸುತ್ತಿದ್ದ ಆರೋಪಿಗಳು, ಬಂಧಿಸುವ ಬೆದರಿಕೆ ಹಾಕಿ ಹಣ ವಸೂಲಿ ಮಾಡುತ್ತಿದ್ದರು. ಕೆಲವರನ್ನು ಬಂಧನದ ನೆಪದಲ್ಲಿ ಕರೆದೊಯ್ದು, ಹಣ ವಸೂಲಿ ಮಾಡಿರುವುದು ಸಹ ತನಿಖೆ ವೇಳೆ ಕಂಡುಬಂದಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಆರೋಪಿ ಪ್ರಶಾಂತ್ ನಾವಿ ಈ ಹಿಂದೆ ರಾಜ್ಯದ ಆಂತರಿಕ ಭದ್ರತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರನ್ನು ಕರ್ತವ್ಯಲೋಪದ ಆರೋಪದಡಿ ಅಮಾನತು ಮಾಡಲಾಗಿತ್ತು. ಬಳಿಕ, ಬೆಂಗಳೂರು ಗ್ರಾಮಾಂತರ ಪೊಲೀಸ್ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ಗ್ರಾಮಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗ ನಾಸೀರ್ ಖಾನ್ ಎಂಬಾತ ಪ್ರಶಾಂತ್ ನಾವಿಗೆ ಪರಿಚಯವಾಗಿದ್ದ. ಇಬ್ಬರೂ ಸೇರಿಕೊಂಡು ಬಾಂಗ್ಲಾದೇಶದ ಪ್ರಜೆಗಳನ್ನು ಪತ್ತೆಹಚ್ಚಿ ಬೆದರಿಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಎರಡನೇ ಪತ್ನಿ ಕೊಂದು ಪರಾರಿ ಆಗಿದ್ದ ಪತಿಯ ಸೆರೆ


ಸೈದುಲ್ಲಾ

ಎರಡನೇ ಪತ್ನಿಯನ್ನು ಕೊಂದು ಆಂಧ್ರಪ್ರದೇಶಕ್ಕೆ ಪರಾರಿಯಾಗಿದ್ದ ಪತಿಯನ್ನು ಯಲಹಂಕ ನ್ಯೂಟೌನ್ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸೈದುಲ್ಲಾ ಬಂಧಿತ ಆರೋಪಿ. ಆಂಧ್ರಪ್ರದೇಶದ ರಾಜಮಂಡ್ರಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘2019ರಲ್ಲಿ ಸೈದುಲ್ಲಾ ಮೊದಲನೇ ಮದುವೆ ಆಗಿದ್ದ. ಮೊದಲನೇ ಪತ್ನಿಗೆ ವಿಷಯ ತಿಳಿಯದಂತೆ ಅಮೀನಾ ಅವರನ್ನು ಪ್ರೀತಿಸಿದ್ದ. ಅವರೊಂದಿಗೆ ಎರಡನೇ ಮದುವೆ ಆಗಿದ್ದ. ಮೊದಲನೇ ಮದುವೆ ವಿಚಾರವನ್ನು ಅಮೀನಾ ಅವರು ತಿಳಿದುಕೊಂಡಿದ್ದರು. ಈ ವಿಚಾರಕ್ಕೆ ಮನೆಯಲ್ಲಿ ನಿತ್ಯ ಗಲಾಟೆ ನಡೆಯುತ್ತಿತ್ತು. ಸೆ.2ರಂದು ಜಗಳವು ವಿಕೋಪಕ್ಕೆ ಹೋಗಿತ್ತು. ಅಮೀನಾ ಕುಟುಂಬಸ್ಥರು ಮನೆಗೆ ಬಂದು ಸಂಧಾನ ನಡೆಸಿದ್ದರು. ಮರುದಿನ ಬೆಳಿಗ್ಗೆ ಅಮೀನಾ ಅವರಿಗೆ ಮರದ ತುಂಡಿನಿಂದ ಹಲ್ಲೆ ನಡೆಸಿ, ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಎಲೆಕ್ಟ್ರಿಷಿಯನ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ


ತಿಮ್ಮೇಗೌಡ

ನೆಲಮಂಗಲ: ತಾಲ್ಲೂಕಿನ ಟಿ.ಬೇಗೂರಿನ ಸಿದ್ದಾರ್ಥ ವೈದ್ಯಕೀಯ ಕಾಲೇಜಿನಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದ ತಿಮ್ಮೇಗೌಡ(38) ಅವರು ನೇಣುಹಾಕಿಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುಬ್ಬಿಯ ತಿಮ್ಮೇಗೌಡ ಅವರು ಎಂಟು ವರ್ಷಗಳಿಂದ ಕಾಲೇಜಿನಲ್ಲಿ ಕೆಲಸ ಮಾಡಿಕೊಂಡಿದ್ದರು. ಕಾಲೇಜಿನ ಇತರೆ ಉದ್ಯೋಗಿಗಳ ಜೊತೆ ವಸತಿಗೃಹದಲ್ಲಿ ವಾಸವಾಗಿದ್ದರು. ಪತ್ನಿ ಮತ್ತು ಮಕ್ಕಳು ಗುಬ್ಬಿಯಲ್ಲಿದ್ದರು.

ಬುಧವಾರ ಮಧ್ಯಾಹ್ನ 12.30ರ ಸುಮಾರಿಗೆ ತಿಮ್ಮೇಗೌಡ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿತ್ತು. ಸಿಬ್ಬಂದಿಯು ಪೊಲೀಸರಿಗೆ ತಿಳಿಸಿದ್ದರು. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ.

ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಗೊತ್ತಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಎಸ್‌ಐ ನೇಮಕಾತಿ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್–ಪುರುಷ ಹಾಗೂ ಮಹಿಳಾ) ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿಯನ್ನು ಪೊಲೀಸ್ ಇಲಾಖೆಯ ನೇಮಕಾತಿ ವಿಭಾಗವು ಪ್ರಕಟಿಸಿದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿ 402 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗಿದೆ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ಶೀಘ್ರ ನೇಮಕಾತಿ ಆದೇಶ ನೀಡಬೇಕು ಎಂದು ಆಗ್ರಹಿಸಿ ರಾಜ್ಯ ವಿದ್ಯಾರ್ಥಿಗಳ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆದಿತ್ತು.

ಅಪಘಾತ: ಪತ್ರಿಕಾ ವಿತರಕಿ ಸಾವು


ಅಶ್ವಿನಿ


ಯಲಹಂಕ: ರಾಜಾನುಕುಂಟೆ–ಮಧುರೆ ರಸ್ತೆಯ ಸೀತಕೆಂಪನಹಳ್ಳಿ ಗೇಟ್ ಬಳಿ ಕಾರು ಹಾಗೂ ದ್ವಿಚಕ್ರ ವಾಹನದ ನಡುವೆ ಸಂಭವಿಸಿದ್ದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಪತ್ರಿಕಾ ವಿತರಕಿ ಅಶ್ವಿನಿ (33) ಅವರು ಮೃತಪಟ್ಟಿದ್ದಾರೆ.

ಸೆ.3ರಂದು ಬೆಳಗಿನ ಜಾವ ಪತ್ರಿಕೆ ವಿತರಣೆ ಮಾಡಲು ದ್ವಿಚಕ್ರ ವಾಹನದಲ್ಲಿ ವಿತರಕ ವಿಜಿಕುಮಾರ್ ಅವರ ಪತ್ನಿ ಅಶ್ವಿನಿ ಅವರು ತೆರಳುತ್ತಿದ್ದರು. ದಿಬ್ಬೂರು ಕಡೆಯಿಂದ ವೇಗವಾಗಿ ಬಂದ ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಯಲಹಂಕದ ಸ್ಪರ್ಶ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಸೋಮವಾರ (ಸೆ.8) ಮೃತಪಟ್ಟಿದ್ದಾರೆ.

ದಂಪತಿಗೆ 12 ಹಾಗೂ 10 ವರ್ಷದ ಇಬ್ಬರು ಮಕ್ಕಳಿದ್ದಾರೆ. ವಿಜಿಕುಮಾರ್ ಅವರು ಈ ಭಾಗದ ಹತ್ತಾರು ಹಳ್ಳಿಗಳಿಗೆ ಪತ್ರಿಕೆ ವಿತರಣೆ ಮಾಡುತ್ತಿದ್ದಾರೆ. ಅಶ್ವಿನಿ ಅವರೂ ದ್ವಿಚಕ್ರ ವಾಹನದಲ್ಲಿ ಸುತ್ತಮುತ್ತಲ ಮನೆಗಳಿಗೆ ಪತ್ರಿಕೆ ವಿತರಿಸುತ್ತಿದ್ದರು ಎಂದು ಯಲಹಂಕ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ವೀರಭದ್ರ ಹಾಗೂ ಯಲಹಂಕ ಮಾಧ್ಯಮ ಕೇಂದ್ರದ ಪದಾಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಬಿಬಿಎಂಪಿ ಮಾಜಿ ಸದಸ್ಯ ಎಂ.ಸತೀಶ್



ಯಲಹಂಕ: ಉಪನಗರ ವಾರ್ಡಿನ ಬಿಬಿಎಂಪಿ ಮಾಜಿ ಸದಸ್ಯ ಹಾಗೂ ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷ ಎಂ.ಸತೀಶ್(56) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಮೃತರಿಗೆ ಪತ್ನಿ ಹಾಗೂ ಒಬ್ಬ ಪುತ್ರ ಇದ್ದಾರೆ. ದಿನಪತ್ರಿಕೆ ವಿತರಕರಾಗಿ ಹಾಗೂ ಪತ್ರಿಕಾ ಏಜೆಂಟರಾಗಿ ಕಾರ್ಯನಿರ್ವಹಿಸಿದ್ದ ಅವರು, ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷರಾಗಿದ್ದರು. ನಂತರ ಯಲಹಂಕ ಉಪನಗರ ವಾರ್ಡ್‌-4ರ ಬಿಬಿಎಂಪಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಯಲಹಂಕ ಉಪನಗರ ಬಿಜೆಪಿ ಘಟಕದ ಅಧ್ಯಕ್ಷರಾಗಿ ಹಾಗೂ ಎರಡು ಬಾರಿ ಯಲಹಂಕ ನಗರ ಮಂಡಲದ ಅಧ್ಯಕ್ಷರಾಗಿದ್ದರು.

ಯಲಹಂಕ ಉಪನಗರದ ಸೋಮೇಶ್ವರ ನಗರದ ಸ್ವಗೃಹದ ಬಳಿ ಗುರುವಾರ ಬೆಳಿಗ್ಗೆ 11.30 ಗಂಟೆಯವರೆಗೆ ಮೃತದೇಹವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಮಾರಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 3.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

371 ಮರ: 'ಜೀವವೈವಿಧ್ಯ ಪಾರಂಪರಿಕ ತಾಣ'

ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿನ 8.61 ಎಕರೆ ಪ್ರದೇಶದಲ್ಲಿನ ವೃಕ್ಷಗಳಿಗೆ ರಕ್ಷಣೆ • ಈಡೇರಿದ ಅರಣ್ಯ ಸಚಿವರ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ ಎಂಟು ಎಕರೆಗೂ ಹೆಚ್ಚು ಪ್ರದೇಶವನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' ಎಂದು ಘೋಷಿಸಿ, ಅರಣ್ಯ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ.

ವಸಂತನಗರದಲ್ಲಿರುವ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಕೇಂದ್ರ ಅಭಿವೃದ್ಧಿಗೆ 368 ಮರ ತೆರವುಗೊಳಿಸುವುದಕ್ಕೆ ಪರಿಸರ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದರು. ಇದಕ್ಕಾಗಿ ಹೋರಾಟವನ್ನೂ ನಡೆಸಿದ್ದರು. ಪರಿಸರ ಕಾರ್ಯಕರ್ತರ ಒತ್ತಾಸೆ ಹಾಗೂ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರ ಭರವಸೆಯಂತೆ ಈ ಪ್ರದೇಶವು 'ಜೀವವೈವಿಧ್ಯ ಪಾರಂಪರಿಕ ತಾಣ'ವಾಗಿದೆ.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದ 167 ಎಕರೆಯನ್ನು ಈ ಹಿಂದೆ 'ಜೀವವೈವಿಧ್ಯ ಪಾರಂಪರಿಕ ತಾಣ' ಎಂದು ಘೋಷಿಸಲಾಗಿತ್ತು. ಇದರ ನಂತರ, ರೈಲ್ವೆ ಕಂಟೋನ್ಮೆಂಟ್ ಕಾಲೊನಿ ಈ ಹೆಗ್ಗಳಿಕೆಗೆ ಪಾತ್ರವಾಗಿದೆ.

ರಾಜ್ಯ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರೂ ಆಗಿರುವ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಬುಧವಾರ ಮಂಡಳಿಯ ವಿಶೇಷ ಸಭೆ ನಡೆಯಿತು. ಬೆಂಗಳೂರಿನ ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಹೊಂದಿಕೊಂಡಿರುವ 8.61 ಎಕರೆ ಪ್ರದೇಶವನ್ನು ಹಸಿರು ವಲಯವನ್ನಾಗಿ ಪರಿಗಣಿಸಿ, ಸಂರಕ್ಷಣೆಯ ಅಗತ್ಯವನ್ನು ಮನಗಂಡು, ಜೀವ ವೈವಿಧ್ಯ ಕಾಯ್ದೆ–2002 ನಿಬಂಧನೆಗಳ ಅಡಿಯಲ್ಲಿ ಈ ಸ್ಥಳವನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' (ಬಿಎಚ್‌ಎಸ್) ಎಂದು ಘೋಷಿಸಲು ತೀರ್ಮಾನಿಸಲಾಯಿತು.

ರಾಜಧಾನಿಯ ಹೃದಯ ಭಾಗದಲ್ಲಿ 50 ಜಾತಿಯ 371 ಮರಗಳಿದ್ದು, ರಮಣೀಯ ಸೌಂದರ್ಯ, ಹಕ್ಕಿಗಳ ಚಿಲಿಪಿಲಿಯ ಹಸಿರು ತಾಣವಾಗಿದೆ. ನಗರದ ವಾಸಯೋಗ್ಯತೆಯನ್ನು ಉತ್ತಮಪಡಿಸಿ, ಹವಾಮಾನ ... ಈ ಪ್ರದೇಶ ಹೆಗ್ಗುರುತಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹೊರಡಿಸಿರುವ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.



ನಗರದ ವಾಯು ಗುಣಮಟ್ಟವು ಕುಸಿದಿದೆ. ಹಸಿರು ಹೊದಿಕೆ ಕ್ಷೀಣಿಸಿದೆ. ಈ ಸಂದರ್ಭದಲ್ಲಿ 371 ಮರಗಳನ್ನು ಸಂರಕ್ಷಿಸುವ ನಿರ್ಧಾರ ಐತಿಹಾಸಿಕವಾದುದು
ಈಶ್ವರ ಬಿ. ಖಂಡ್ರೆ, ಅರಣ್ಯ ಸಚಿವ



ಮುಂದಿನ ಪೀಳಿಗೆಗೆ ಹಸಿರನ್ನು ಉಳಿಸಿಕೊಟ್ಟ ಸಚಿವ ಈಶ್ವರ ಖಂಡ್ರೆ ಅವರಿಗೆ ಧನ್ಯವಾದಗಳು. ಮರ ಬೆಳೆಸಿ, ಹಸಿರು ಉಳಿಸಲು ಎಲ್ಲರೂ ಪ್ರಯತ್ನಪಡಬೇಕು
ಎ.ಟಿ. ರಾಮಸ್ವಾಮಿ, ಅಧ್ಯಕ್ಷ, 'ಪರಿಸರಕ್ಕಾಗಿ ನಾವು' ಸಂಘಟನೆ



ರೈಲ್ವೆ ಕಾಲೊನಿಯಲ್ಲಿ ಮರಗಳಿರುವ ಪ್ರದೇಶ

ಷರತ್ತುಗಳು ಏನು?

- ಸೂಕ್ತ ಅನುಮೋದಿತ ನಿರ್ವಹಣಾ ಯೋಜನೆಯಂತೆ ಪಾರಂಪರಿಕ ತಾಣವನ್ನು ನಿರ್ವಹಿಸಬೇಕು
- ಸ್ಥಳೀಯರ ಹಕ್ಕುಗಳು ಮತ್ತು ಸವಲತ್ತುಗಳು ಸದಾ ಅಸ್ತಿತ್ವದಲ್ಲಿರುತ್ತವೆ
- ಪಾರಂಪರಿಕ ತಾಣದ ನಿರ್ವಹಣೆಯಲ್ಲಿ ಸ್ಥಳೀಯ ಜನರಿಗೆ ಪಾಲ್ಗೊಳ್ಳಲು ಅವಕಾಶ ಇರಬೇಕು
- ಜೀವವೈವಿಧ್ಯತೆಯ ಸಂರಕ್ಷಣೆಗೆ ವಿರುದ್ಧವಾದ ಯಾವುದೇ ಚಟುವಟಿಕೆಗಳಿಗೆ ಅವಕಾಶ ಇಲ್ಲ

15 ಸಾವಿರ ಜನರ ಬೆಂಬಲ: ಈಶ್ವರ ಖಂಡ್ರೆ

'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ 8.61 ಎಕರೆ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸುವಂತೆ 15 ಸಾವಿರಕ್ಕೂ ಹೆಚ್ಚು ಜನರು ಬೆಂಬಲ ವ್ಯಕ್ತಪಡಿಸಿದ್ದರು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

'50-60 ವರ್ಷಗಳಿಂದ ಬೆಳೆದ ಬೃಹತ್ ಮರಗಳಿರುವ ಈ ಸುಂದರ ಪ್ರದೇಶವನ್ನು ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರ ಖಾಸಗಿ ಸಂಸ್ಥೆಯೊಂದಕ್ಕೆ 60 ವರ್ಷಗಳ ದೀರ್ಘಾವಧಿಗೆ ಗುತ್ತಿಗೆ ನೀಡಿತ್ತು. ಆ ಸಂಸ್ಥೆ ಇಲ್ಲಿರುವ 368 ಮರಗಳನ್ನು ಕಡಿಯಲು ಅನುಮತಿ ಕೋರಿತ್ತು. ಮರಗಳ ಹನನಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು' ಎಂದರು.

'368 ಮರ ಕಡಿಯದಂತೆ ಪರಿಸರ ಕಾರ್ಯಕರ್ತರು ಮನವಿ ಮಾಡಿದ್ದರು. ಇಲ್ಲಿ ಸಮೀಕ್ಷೆ ನಡೆಸಿದಾಗ 371 ಮರಗಳಿರುವುದು ದೃಢಪಟ್ಟಿತು' ಎಂದರು.

ಸುದ್ದಿ 2 ನಿಮಿಷ

ಬಿದರಹಳ್ಳಿ- ಕಿತ್ತಗನೂರು ರಸ್ತೆ ಪರಿಶೀಲಿಸಿದ ಅಧಿಕಾರಿಗಳ ತಂಡ

ಕೆ.ಆರ್.ಪುರ: ಬಿದರಹಳ್ಳಿ-ಕಿತ್ತಗನೂರು ಮುಖ್ಯರಸ್ತೆಯನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತ್ ಕುಮಾರ್ ಅವರು ಬುಧವಾರ ಪರಿಶೀಲನೆ ನಡೆಸಿದರು.

'ಬಿದರಹಳ್ಳಿ- ಕಿತ್ತಗನೂರು ರಸ್ತೆ ಕೆಸರುಮಯ' ಎಂಬ ವರದಿ 'ಪ್ರಜಾವಾಣಿ'ಯ ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ವರದಿಗೆ ಸ್ಪಂದಿಸಿದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಅಭಿವೃದ್ಧಿಪಡಿಸಲು ಸ್ಥಳೀಯ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಮುಖ್ಯರಸ್ತೆಯ ಅಕ್ಕಪಕ್ಕದಲ್ಲಿನ ಜಮೀನು ಮಾಲೀಕರ ಖಾಸಗಿ ಸ್ವತ್ತುಗಳಿಗೆ ಸಂಬಂಧಿಸಿದ ವ್ಯಾಜ್ಯ ಇರುವುದರಿಂದ ರಸ್ತೆ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ವಸಂತ್ ಕುಮಾರ್ ಮಾತನಾಡಿ, 'ಬಿದರಹಳ್ಳಿ- ಕಿತ್ತಗನೂರು ಮುಖ್ಯರಸ್ತೆ ಅಭಿವೃದ್ಧಿಪಡಿಸಲು ಎಂಟು ಗುಂಟೆ ಜಮೀನಿಗೆ ಟಿಡಿಆರ್ ನೀಡಬೇಕಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ಮಾಡಿ ಜಮೀನು ವಶಪಡಿಸಿಕೊಂಡು ರಸ್ತೆ ಅಭಿವೃದ್ಧಿಪಡಿಸಲಾಗುವುದು' ಎಂದು ತಿಳಿಸಿದರು.

ಕಿತ್ತಗನೂರು ಗ್ರಾಮ ಪಂಚಾಯಿತಿ ಸದಸ್ಯ ಕೆ.ವಿ.ನಾಗರಾಜ್, ಬಿದರಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂ.ಎನ್.ಲೋಹಿತ್, ಕಾರ್ಯದರ್ಶಿ ಎನ್.ಮುನಿರಾಜು, ಸ್ಥಳೀಯ ಮುಖಂಡ ವಿ.ಪಿ.ಕೃಷ್ಣ ಇದ್ದರು.

ಒತ್ತುವರಿ: ಬಿಜೆಪಿ ಪ್ರತಿಭಟನೆ



ಬೆಂಗಳೂರು: ನಗರದ ಬ್ಯಾಟರಾಯನಪುರ ಕ್ಷೇತ್ರದ ಕೋಗಿಲು ಲೇಔಟ್‌ನ ಸರ್ವೆ ನಂ. 18, 22, 99, 100ರಲ್ಲಿನ ಸರ್ಕಾರಿ ಜಾಗದ ಒತ್ತುವರಿ ತೆರವು ಗೊಳಿಸಿ ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಆಗ್ರಹಿಸಿ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಯಲಹಂಕ ಮಿನಿ ವಿಧಾನಸೌಧದ ಎದುರು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ಎಚ್.ಸಿ.ತಮ್ಮೇಶ್ ಗೌಡ ಮಾತನಾಡಿ, 'ಕಂದಾಯ ಸಚಿವರ ಸ್ವಕ್ಷೇತ್ರದಲ್ಲೇ ಈ ರೀತಿಯಲ್ಲಿ ಸರ್ಕಾರಿ ಜಮೀನು ಒತ್ತುವರಿ ಆಗಿರುವುದು ವಿಷಾದಕರ ಸಂಗತಿ. ಒತ್ತುವರಿ ವಿರುದ್ಧ ದೂರು ನೀಡಿದ್ದರೂ ಸಹ ಅಧಿಕಾರಿಗಳು ತೆರವು ಮಾಡದಿರುವುದು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ' ಎಂದು ಆರೋಪಿಸಿದರು.

ಮಾತಿನ ಚಕಮಕಿ: ಪ್ರತಿಭಟನೆಗೆ ಅವಕಾಶವಿಲ್ಲ ಎಂದು ಹೇಳಿ ಕಾರ್ಯಕರ್ತರನ್ನು ತಡೆಯಲು ಪೊಲೀಸರು ಮುಂದಾದರು. ಆಗ ಬಿಜೆಪಿ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರ ಮೂಲಕ ಹೋರಾಟ ಹತ್ತಿಕ್ಕಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದ ಬಿಜೆಪಿ ಕಾರ್ಯಕರ್ತರು, ಕಂದಾಯ ಅಧಿಕಾರಿಗಳು ಮತ್ತು ಸಚಿವರ ವಿರುದ್ಧ ಘೋಷಣೆ ಕೂಗಿದರು. ಆಗ ಪೊಲೀಸರು ಯಲಹಂಕ ತಾಲ್ಲೂಕು ಕಚೇರಿಯ ಗೇಟ್ ಬಂದ್ ಮಾಡಿ, ಪ್ರತಿಭಟನಕಾರರು ಒಳ ಪ್ರವೇಶಿಸದಂತೆ ತಡೆದರು. ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ನಂತರ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಬ್ಯಾಟರಾಯನಪುರ ಗ್ರಾಮಾಂತರ ಮಂಡಲ ಅಧ್ಯಕ್ಷ ಹನುಮಂತಗೌಡ, ನಗರ ಮಂಡಲ ಅಧ್ಯಕ್ಷ ಕೃಷ್ಣಮೂರ್ತಿ, ಗ್ರಾಮಾಂತರ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಸ್.ಅನಿಲ್ ಕುಮಾರ್, ಬೇಗೂರು ಮಹೇಶ್, ಪ್ರತಾಪ್, ಕೋಗಿಲು ವಾರ್ಡ್ ಅಧ್ಯಕ್ಷ ಕೆ.ಎ.ಅನಿಲ್ ಪಾಲ್ಗೊಂಡಿದ್ದರು.

'ಆತ್ಮಹತ್ಯೆಯತ್ನ: ಯುವಜನರೇ ಅಧಿಕ'

ನಿಮ್ಹಾನ್ಸ್‌ನ ಎನ್–ಸ್ಪೈಟ್ ಕೇಂದ್ರದಿಂದ 'ಉಷಾಸ್' ಯೋಜನೆಯಡಿ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವವರಲ್ಲಿ ಹೆಚ್ಚಿನವರು ಯುವಜನರೇ ಆಗಿದ್ದು, ಹಲವರು ಮದ್ಯ ಮತ್ತು ತಂಬಾಕು ಉತ್ಪನ್ನಗಳ ಸೇವನೆಯ ದುಶ್ಚಟ ಹೊಂದಿದ್ದಾರೆ' ಎನ್ನುವುದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಎನ್–ಸ್ಪ್ರೈಟ್ ಕೇಂದ್ರ ನಡೆಸಿದ ಅಧ್ಯನದಿಂದ ದೃಢಪಟ್ಟಿದೆ.

ವಿಶ್ವ ಆತ್ಮಹತ್ಯೆ ತಡೆ ದಿನದ ಪ್ರಯುಕ್ತ ಸಂಸ್ಥೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಅಧ್ಯಯನ ವರದಿಯನ್ನು ಬಿಡುಗಡೆ ಮಾಡಲಾಯಿತು. ಈ ಕೇಂದ್ರವು ಆತ್ಮಹತ್ಯೆ ತಡೆಗಟ್ಟುವಿಕೆ, ಸಂಶೋಧನೆ, ತರಬೇತಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರವು ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಸಹಯೋಗದಲ್ಲಿ 'ಉಷಾಸ್' (ನಗರ ಸ್ವಯಂ-ಹಾನಿ ಅಧ್ಯಯನ) ಯೋಜನೆ ಕೈಗೊಂಡಿದ್ದು, ಈ ಯೋಜನೆಯಡಿ ಆತ್ಮಹತ್ಯೆಗೆ ಪ್ರಯತ್ನಿಸಿದವರ ಅಧ್ಯಯನ ಕೈಗೊಳ್ಳಲಾಗಿದೆ.

11 ಜಿಲ್ಲೆಗಳ 16 ಸರ್ಕಾರಿ ಆಸ್ಪತ್ರೆಗಳಲ್ಲಿ 'ಉಷಾಸ್' ಯೋಜನೆಯನ್ನು 2022ರಿಂದ ಜಾರಿ ಮಾಡಲಾಗಿದೆ. ಆತ್ಮಹತ್ಯೆಗೆ ಪ್ರಯತ್ನ ಮಾಡಿದವರಿಗೆ ಆತ್ಮಸ್ಥೈರ್ಯ ತುಂಬಿ, ಅವರಿಗೆ ಬೆಂಬಲ ಒದಗಿಸುವುದು ಯೋಜನೆಯ ಉದ್ದೇಶವಾಗಿದೆ. ಆತ್ಮಹತ್ಯೆಗೆ ಪ್ರಯತ್ನ ಮಾಡಿದವರಲ್ಲಿ, ಈವರೆಗೆ 20,861 ಮಂದಿ ಯೋಜನೆಯಡಿ ಹೆಸರು ನೋಂದಾಯಿಸಿದ್ದಾರೆ. ಅವರಲ್ಲಿ ಹೆಚ್ಚಿನವರು 25ರಿಂದ 39 ವರ್ಷದೊಳಗಿನವರು (ಶೇ 44.37) ಆಗಿದ್ದಾರೆ. 18ರಿಂದ 24 ವರ್ಷದೊಳಗಿನವರೂ (ಶೇ 28.87) ಅಧಿಕ ಸಂಖ್ಯೆಯಲ್ಲಿ ಇದ್ದಾರೆ.



ವಿಶ್ವ ಆತ್ಮಹತ್ಯೆ ತಡೆ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಯುವಜನರು

ಮುಖ್ಯಾಂಶಗಳು


- 11 ಜಿಲ್ಲೆಗಳ 16 ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಜನೆ ಜಾರಿ
- ಮದ್ಯ ಮತ್ತು ತಂಬಾಕು ಉತ್ಪನ್ನಗಳ ಸೇವನೆಯ ಇತಿಹಾಸ
- 20,861 ಮಂದಿ ಯೋಜನೆಯಡಿ ಹೆಸರು ನೋಂದಣಿ

ಪುರುಷರೇ ಅಧಿಕ: 'ಉಷಾಸ್' ಯೋಜನೆಯಡಿ ನೋಂದಾಯಿತರಾದವರಲ್ಲಿ ಶೇ 55.76ರಷ್ಟು ಮಂದಿ ಪುರುಷರಾದರೆ, ಶೇ 44.15ರಷ್ಟು ಮಂದಿ ಮಹಿಳೆಯರಾಗಿದ್ದಾರೆ. ಶೇ 0.09ರಷ್ಟು ಮಂದಿ ಲಿಂಗತ್ವ ಅಲ್ಪಸಂಖ್ಯಾತರಾಗಿದ್ದಾರೆ. 20,861 ವ್ಯಕ್ತಿಗಳಲ್ಲಿ 16,264 ಮಂದಿ ಜತೆಗೆ ನಿರಂತರ ಸಂಪರ್ಕ ಸಾಧಿಸಲಾಗಿದೆ. ಇದರಿಂದಾಗಿ ಕೇವಲ 194 ವ್ಯಕ್ತಿಗಳು (ಶೇ 1.19) ಮಾತ್ರ ಆತ್ಮಹತ್ಯೆಗೆ ಪುನಃ ಪ್ರಯತ್ನಿಸಿದ್ದಾರೆ. ಅವರಲ್ಲಿ 37 ಮಂದಿ ಮಾತ್ರ (ಶೇ 0.2) ಮರು ಪ್ರಯತ್ನದಿಂದ ಮೃತಪಟ್ಟರು ಎಂದು ಎನ್–ಸ್ಪ್ರೈಟ್ ಕೇಂದ್ರದ ಮುಖ್ಯಸ್ಥ ಡಾ. ಅನೀಶ್ ವಿ. ಚೆರಿಯನ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ಆತ್ಮಹತ್ಯೆ ಪ್ರಯತ್ನದ ನಂತರ ಆಸ್ಪತ್ರೆಗಳ ತುರ್ತು ಚಿಕಿತ್ಸಾ ವಿಭಾಗಕ್ಕೆ ಭೇಟಿ ನೀಡುವ ವ್ಯಕ್ತಿಗಳ ವಿವರವನ್ನು ದಾಖಲಿಸಲು 'ಉಷಾಸ್' ಯೋಜನೆ ಅಡಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಅವರ ಗುಣಲಕ್ಷಣಗಳನ್ನು ಅಧ್ಯಯನ ಮಾಡಲಾಗುತ್ತದೆ. ಭವಿಷ್ಯದಲ್ಲಿ ಮತ್ತೆ ಆತ್ಮಹತ್ಯೆ ಪ್ರಯತ್ನಕ್ಕೆ ಮುಂದಾಗದಂತೆ ನೋಡಿಕೊಳ್ಳಲು ದೂರವಾಣಿ ಮೂಲಕ ಸಂಪರ್ಕ ಕಾಯ್ದುಕೊಳ್ಳಲಾಗುತ್ತದೆ. ಇದರಿಂದಾಗಿ ಆತ್ಮಹತ್ಯೆಯ ಮರು ಪ್ರಯತ್ನ ಗಣನೀಯವಾಗಿ ಕಡಿಮೆಯಾಗಿದೆ' ಎಂದು ಹೇಳಿದರು.

ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್, ಆರೋಗ್ಯ ಇಲಾಖೆಯ ಉಪ ನಿರ್ದೇಶಕಿ (ಮಾನಸಿಕ ಆರೋಗ್ಯ) ಡಾ. ರಜನಿ ಪಾರ್ಥಸಾರಥಿ ಹಾಗೂ ವಿವಿಧ ವೈದ್ಯಕೀಯ ಕಾಲೇಜುಗಳ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

ಆತ್ಮಹತ್ಯೆ ಪ್ರಮಾಣ ಅಧಿಕ



ಕರ್ನಾಟಕದ ಆತ್ಮಹತ್ಯೆ ಪ್ರಮಾಣವು (ಶೇ 20.2) ರಾಷ್ಟ್ರೀಯ ಸರಾಸರಿಕ್ಕಿಂತ (ಶೇ 12.4) ಅಧಿಕವಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ, ರಾಜ್ಯದಲ್ಲಿ ವಾರ್ಷಿಕ 13,606 ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಅಧಿಕ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿರುವ ದೇಶದ ಮಹಾನಗರಗಳಲ್ಲಿ, ಬೆಂಗಳೂರು ಮೂರನೇ ಸ್ಥಾನದಲ್ಲಿದೆ ಎಂದು ಕಾರ್ಯಕ್ರಮ ದಲ್ಲಿ ಪಾಲ್ಗೊಂಡಿದ್ದ ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಇಂದು

'ವೈಬ್ರಂಟ್ ಅಡ್ವೊಕೆಸಿ ಫಾರ್ ಅಡ್ವಾನ್ಸ್‌ಮೆಂಟ್ ಆ್ಯಂಡ್ ನರ್ಚರಿಂಗ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್' ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಅನಿಲ್ ಜೋಸೆಫ್ ಪಿಂಟೊ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಬೆಳಿಗ್ಗೆ 9.30

ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಅತಿಥಿ: ಸುಧಾ ಮೂರ್ತಿ, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿಐಟಿ ಆವರಣ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಳಿಗ್ಗೆ 10

ಬೆಳ್ಳಿಹಬ್ಬದ ಸಂಭ್ರಮ–2025, 'ಡಾ. ರಾಜ್‌ಕುಮಾರ್ ಪುರಸ್ಕಾರ', ಡಾ. ರಾಜ್‌ಕುಮಾರ್ ಕನ್ನಡ ಪ್ರತಿಭಾ ಚೇತನ ವಿದ್ಯಾರ್ಥಿ ಪುರಸ್ಕಾರ: ಬೆಳಿಗ್ಗೆ 10.30ಕ್ಕೆ ಉದ್ಘಾಟನೆ: ಮಧು ಬಂಗಾರಪ್ಪ, ಪ್ರತಿಭಾ ಪುರಸ್ಕಾರ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಪಿ.ಸಿ. ಮೋಹನ್, ಎಂ. ನರಸಿಂಹಲು, ಅಧ್ಯಕ್ಷತೆ: ಎಂ. ಪರಮೇಶ್, ಸಂಜೆ 5.30ಕ್ಕೆ ಅಂತರರಾಷ್ಟ್ರೀಯ ಡಾ. ರಾಜ್‌ಕುಮಾರ್ ಜನ್ಮ ಶತಮಾನೋತ್ಸವ ಸಮಿತಿಗೆ ಚಾಲನೆ: ಸಿದ್ದರಾಮಯ್ಯ, ರಾಮಲಿಂಗಾರೆಡ್ಡಿ, 'ಡಾ. ರಾಜ್‌ಕುಮಾರ್ ಪುರಸ್ಕಾರ' ಪ್ರದಾನ: ದಿನೇಶ್ ಗುಂಡೂರಾವ್, ಯು.ಟಿ. ಖಾದರ್, ಪುರಸ್ಕಾರ ಸ್ವೀಕರಿಸುವವರು: ಶ್ರೀನಾಥ್, ಜಯಮಾಲಾ, ಕೆ.ಎಂ. ಗಂಗಾಧರ್, ಸತ್ಯನಾರಾಯಣ ಗಾಯಕ್‌ವಾಡ್, ಕೆ.ಎಸ್. ರಾಜಣ್ಣ, ಸಂತೋಷ್ ಆನಂದರಾಮ್, ಆಯೋಜನೆ: ಡಾ. ರಾಜ್‌ಕುಮಾರ್ ರಂಗಭೂಮಿ ಚಲನಚಿತ್ರ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ.



ಶಿಕ್ಷಕರ ದಿನಾಚರಣೆ: ಅತಿಥಿಗಳು: ರಮಣಿ ಹರಿಹರನ್, ವೈ. ರಾಜರೆಡ್ಡಿ, ಆಯೋಜನೆ ಮತ್ತು ಸ್ಥಳ: ಆರ್.ಆರ್. ಇನ್‌ಸ್ಟಿಟ್ಯೂಷನ್ಸ್, ಚಿಕ್ಕಬಾಣಾವರ, ಮಧ್ಯಾಹ್ನ 2

'ಸಾಹಿತ್ಯ ಎಂದರೇನು? ಏಕೆ ಬೇಕು?' ಉಪನ್ಯಾಸ: ಟಿ.ಎಸ್. ಗುರುರಾಜ ಶೆಟ್ಟಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಒಡನಾಡಿ ಬಂಧು ಸಿಜಿಕೆ–75 'ಹರಕೆಯ ಕುರಿ' ನಾಟಕ ಪ್ರದರ್ಶನ: ನಿರ್ದೇಶನ: ದೀಪಕ್ ಮೈಸೂರು, ಆಯೋಜನೆ: ಸಂಚಲನ ಮೈಸೂರು, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ರಾಷ್ಟ್ರೀಯ ಸಿನಿಮಾ ದಿನದ ಅಂಗವಾಗಿ 'ಸಿನೆಮೇಟ್ಸ್': ಅತಿಥಿಗಳು: ಎನ್. ವಿನಾಯಕ್, ದಿನೇಶ್ ನೀಲಕಾಂತ್, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ಮುಖ್ಯರಸ್ತೆ, ಬೆಳಿಗ್ಗೆ 9

ಸಮನ್ವಯ ಸೌರಭ: ಉದ್ಘಾಟನೆ: ಶಿವರಾಜ ವಿ. ಪಾಟೀಲ, ಜಿ.ಎಸ್. ಜಯದೇವ, ಡಿ.ಆರ್. ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಶೇಷಾದ್ರಿಪುರಂ ಸಮೂಹ ಸಂಸ್ಥೆಗಳು, ವಿವೇಕ ಪಥ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 9.30ರಿಂದ

ನಗರದ ಹಲವೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಬುಧವಾರ ರಾತ್ರಿ ಭಾರಿ ಮಳೆಯಾಯಿತು.

ಎರಡು ದಿನಗಳಿಂದ ಮಳೆ ಬಿಡುವು ನೀಡಿದ್ದರಿಂದ, ನಗರದಲ್ಲಿ ಉಷ್ಣಾಂಶ ಹೆಚ್ಚಾಗಿತ್ತು. ಬುಧವಾರ ಮಧ್ಯಾಹ್ನದ ನಂತರ ಮೋಡ ಕವಿದ ವಾತಾವರಣವಿತ್ತು. ರಾತ್ರಿ 8ರ ವೇಳೆಯಲ್ಲಿ ಭಾರಿ ಮಳೆ ಸುರಿದು, ತಡರಾತ್ರಿಯವರೆಗೂ ತುಂತುರು ಮುಂದುವರಿದಿತ್ತು.

ಕಸ್ತೂರಿನಗರದಿಂದ ಹೆಬ್ಬಾಳ, ವಿಂಡ್ಸರ್ ಮ್ಯಾನರ್ ಕೆಳಸೇತುವೆ, ಕೋನಪ್ಪನ ಅಗ್ರಹಾರದಿಂದ ಹೊಸೂರು ರಸ್ತೆ, ಮೈಸೂರು ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಕಾಮಾಕ್ಷಿ ಪಾಳ್ಯ ಬಸ್ ನಿಲ್ದಾಣದ ಬಳಿ ಮರವೊಂದು ರಸ್ತೆಗೆ ಉರುಳಿ ಬಿದ್ದಿದ್ದರಿಂದ ಸುಮನಹಳ್ಳಿ ಕಡೆಗೆ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು.

ಹೆಚ್ಚು ಮಳೆ: ಹಂಪಿ ನಗರದಲ್ಲಿ 3.7 ಸೆಂ.ಮೀ, ಪುಲಿಕೇಶಿನಗರದಲ್ಲಿ 2.8 ಸೆಂ.ಮೀ, ಬಸವೇಶ್ವರನಗರದಲ್ಲಿ 2.5 ಸೆಂ.ಮೀ, ಸಂಪಂಗಿರಾಮ ನಗರದಲ್ಲಿ 2 ಸೆಂ.ಮೀ, ಪೂರ್ವ ಮನೋರಾಯನಪಾಳ್ಯ, ವಿದ್ಯಾಪೀಠದಲ್ಲಿ ತಲಾ 1.9 ಸೆಂ.ಮೀ, ವಿಶ್ವೇಶ್ವರಪುರ, ದೊರೆಸಾನಿ ಪಾಳ್ಯ ವಿ.ನಾಗೇನಹಳ್ಳಿ, ವನ್ನಾರ್‌ಪೇಟೆ, ರಾಜಮಹಲ್ ಗುಟ್ಟಹಳ್ಳಿಯಲ್ಲಿ ತಲಾ 1.3 ಸೆಂ.ಮೀ, ಪೂರ್ವ ಬಾಣಸವಾಡಿ, ಮಾರತ್‌ಹಳ್ಳಿ, ರಾಜಾಜಿನಗರ, ಬಸವನಪುರ, ಕೊಡಿಗೇಹಳ್ಳಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಜಲಮಂಡಳಿ: ಫೋನ್ ಇನ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ.ರಾಮಪ್ರಸಾತ್ ಮನೋಹರ್ ಅವರ ನೇರ ಫೋನ್ ಇನ್ ಕಾರ್ಯಕ್ರಮವನ್ನು ಸೆ.12ರ ಶುಕ್ರವಾರ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 9.30 ರಿಂದ 10.30ರವರೆಗೆ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರ ಬರುತ್ತಿರುವುದು, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

ಸಾರ್ವಜನಿಕರು ದೂರವಾಣಿ ಸಂಖ್ಯೆ 080-22945119 ಮತ್ತು 080-22229639 ಸಂಪರ್ಕಿಸಬಹುದು.ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಬೇಕು ಎಂದು ಕೋರಲಾಗಿದೆ.

ಸಂಚಾರ ದಟ್ಟಣೆ

ಪ್ರಜಾವಾಣಿ ಚಿತ್ರ
ಪ್ರಶಾಂತ್ ಎಚ್.ಜಿ.



ಒಳಮೀಸಲಾತಿ ವರ್ಗೀಕರಣದಲ್ಲಿ ಆಗಿರುವ ತಾರತಮ್ಯ ಸರಿಪಡಿಸುವಂತೆ ಆಗ್ರಹಿಸಿ ಬಂಜಾರ, ಭೋವಿ, ಕೊರಚ, ಕೊರವ ಮೀಸಲಾತಿ ಒಕ್ಕೂಟದಿಂದ ಬೆಂಗಳೂರಿನಲ್ಲಿ ಬುಧವಾರ ನಡೆದ ಪ್ರತಿಭಟನೆಯಿಂದಾಗಿ ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ದಟ್ಟಣೆ ಉಂಟಾಗಿತ್ತು

'ಮೆಜೆಸ್ಟಿಕ್: ಸುರಕ್ಷತೆಗಿಲ್ಲ ಕ್ಯಾಮೆರಾ'

ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಸಾರಿಗೆಯ ಜೀವನಾಡಿಯಾಗಿರುವ ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಮಕ್ಕಳ ಹಾಗೂ ಮಹಿಳೆಯರ ಸುರಕ್ಷತೆಗೆ ಸಿಸಿಟಿವಿ ಕ್ಯಾಮೆರಾಗಳಿಲ್ಲದಿದ್ದರೆ ಹೇಗೆ? ಇಲ್ಲಿ ನಿತ್ಯ ಸಾವಿರಾರು ಪ್ರಯಾಣಿಕರು ಸಂಚರಿಸುತ್ತಾರೆ. ಇಂತಹ ಜನನಿಬಿಡ ಪ್ರದೇಶದಲ್ಲಿ ಸಾರ್ವಜನಿಕರ ಭದ್ರತೆಗೆ ಆದ್ಯತೆ ನೀಡಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು ಬಿಎಂಟಿಸಿ ಅಧಿಕಾರಿಗಳಿಗೆ ಸೂಚಿಸಿದರು.

ಮೆಜೆಸ್ಟಿಕ್‌ನಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಬುಧವಾರ ಭೇಟಿ ನೀಡಿದ ಅವರು ಬಸ್ ನಿಲ್ದಾಣದಲ್ಲಿ ಮೂಲಸೌಲಭ್ಯಗಳ ಕೊರತೆ ಇರುವುದನ್ನು ಗಮನಿಸಿ, ಬಿಎಂಟಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ 2018ರಿಂದ ಸಿಸಿಟಿವಿ ಕ್ಯಾಮೆರಾಗಳಿಲ್ಲ ಎಂದು ಬಿಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಇಂತಹ ಜನದಟ್ಟಣೆ ಪ್ರದೇಶಗಳಲ್ಲಿ ಮಾನವ ಕಳ್ಳಸಾಗಣೆ ಆಗುವ ಸಾಧ್ಯತೆ ಹೆಚ್ಚಿದ್ದು, ಮಹಿಳೆಯರ ಹಾಗೂ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕೂಡಲೇ ನಿಲ್ದಾಣದ ಎಲ್ಲ ಭಾಗಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು' ಎಂದು ಬಿಎಂಟಿಸಿ ನಿರ್ದೇಶಕರಿಗೆ ಸೂಚನೆ ನೀಡಿದರು.

'ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರು, ಕಸದ ಬುಟ್ಟಿಗಳನ್ನು ಇಡಬೇಕು, ಶೌಚಾಲಯದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸಮಸ್ಯೆಗಳು ಬಗೆಹರಿದ ನಂತರ ಛಾಯಾಚಿತ್ರಗಳ ಸಹಿತ ಆಯೋಗಕ್ಕೆ ವರದಿ ಸಲ್ಲಿಸಬೇಕು' ಎಂದರು.

ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೂ ಭೇಟಿ ನೀಡಿ ಅವರು ಪರಿಶೀಲಿಸಿದರು. 'ನಿಲ್ದಾಣದಲ್ಲಿ 37 ಸಿಸಿಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕ್ಯಾಮೆರಾಗಳು 20 ದಿನಗಳವರೆಗೆ ದೃಶ್ಯಾವಳಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ತುರ್ತು ಸಹಾಯವಾಣಿ ಸಂಖ್ಯೆಗಳನ್ನು ನಿಲ್ದಾಣದ ಗೋಡೆಗಳ ಮೇಲೆ ದೊಡ್ಡ ಅಕ್ಷರಗಳಲ್ಲಿ ಬರೆಯುವುದರ ಜೊತೆಗೆ ಅಲ್ಲಲ್ಲಿ ಫಲಕಗಳನ್ನು ಅಳವಡಿಸಬೇಕು' ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಹೇಳಿದರು.



ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರೊಂದಿಗೆ ಡಾ. ನಾಗಲಕ್ಷ್ಮೀ ಚೌಧರಿ ಚರ್ಚಿಸಿದರು

'ಗರ್ಭಿಣಿಯರಿಗಿಲ್ಲ ಶುದ್ಧ ಕುಡಿಯುವ ನೀರು'



ಗೋವಿಂದರಾಜನಗರದಲ್ಲಿ ಇರುವ ರೆಫರಲ್ ಆಸ್ಪತ್ರೆಗೆ ಭೇಟಿ ನೀಡಿದ ನಾಗಲಕ್ಷ್ಮೀ ಚೌಧರಿ ಅವರು, 'ಇಲ್ಲಿಗೆ ಬರುವ ಗರ್ಭಿಣಿಯರಿಗೆ, ಬಾಣಂತಿಯರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಶೌಚಾಲಯದಲ್ಲಿ ಸ್ವಚ್ಛತೆ ಇಲ್ಲ. ರೋಗಿಗಳು ಬೆಳಿಗ್ಗೆ 8 ಗಂಟೆಗೆ ಬಂದು ಟೋಕನ್ ಪಡೆದುಕೊಂಡು ಹೋಗುವ ಪರಿಸ್ಥಿತಿ ಇದೆ' ಎಂದು ಹೇಳಿದರು.

'ಬೆಳಿಗ್ಗೆ 10 ಗಂಟೆಯ ನಂತರ ಆಸ್ಪತ್ರೆಯಲ್ಲಿ ಹೊರ ರೋಗಿಗಳ ವಿಭಾಗವನ್ನೇ ಬಂದ್ ಮಾಡಲಾಗುತ್ತದೆ. ಮಾತ್ರೆ ಹಾಗೂ ಔಷಧಿಗಳನ್ನು ಹೊರಗಿನ ಔಷಧಿ ಅಂಗಡಿಗಳಿಂದ ತರುವಂತೆ ವೈದ್ಯರು ಸೂಚಿಸುತ್ತಿರುವುದು ಸರಿಯಲ್ಲ. ಈ ಎಲ್ಲ ಸಮಸ್ಯೆಗಳನ್ನು ಒಂದು ವಾರದಲ್ಲಿ ಬಗೆಹರಿಸಿ, ಆಯೋಗಕ್ಕೆ ವರದಿ ನೀಡಬೇಕು' ಎಂದು ಆಸ್ಪತ್ರೆಯ ಅಧೀಕ್ಷಕರಿಗೆ ಸೂಚಿಸಿದರು.

ಚುಟುಕೆ ಸುದ್ದಿ

ಇಟಲಿ ಪ್ರಧಾನಿ ಜತೆ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರೊಂದಿಗೆ ದೂರವಾಣಿಯಲ್ಲಿ ಬುಧವಾರ ಮಾತುಕತೆ ನಡೆಸಿದರು.

'ಪ್ರಧಾನಿ ಜಾರ್ಜಿಯಾ ಮೆಲೊನಿ ಅವರೊಂದಿಗೆ ಉತ್ತಮ ಸಂಭಾಷಣೆ ನಡೆಸಿದೆ. ಭಾರತ-ಇಟಲಿ ಕಾರ್ಯತಂತ್ರ ಪಾಲುದಾರಿಕೆಯನ್ನು ಇಮ್ಮಡಿಗೊಳಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದೇವೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಶೀಘ್ರವಾಗಿ ಕೊನೆಗೊಳಿಸಬೇಕೆಂಬ ಕುರಿತೂ ಮಾತನಾಡಿದೆವು' ಎಂದು ಮೋದಿ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಭಾರತ-ಯುರೋಪ್ ಒಕ್ಕೂಟದ ವ್ಯಾಪಾರ ಒಪ್ಪಂದ ಮತ್ತು 'ಭಾರತ-ಮಧ್ಯಪ್ರಾಚ್ಯ- ಯುರೋಪ್ ಆರ್ಥಿಕ ಕಾರಿಡಾರ್' (ಐಎಂಇಇಸಿ) ಅನುಷ್ಠಾನ-ಕುರಿತು ಬೆಂಬಲ ನೀಡಿದ್ದಕ್ಕಾಗಿ ಮೆಲೊನಿ ಅವರಿಗೆ ಧನ್ಯವಾದ ತಿಳಿಸುತ್ತೇನೆ' ಎಂದೂ ಹೇಳಿದ್ದಾರೆ. ಭಾರತ ಮತ್ತು ಯುರೋಪ್ ಒಕ್ಕೂಟವು ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಬಲಗೊಳಿಸುವತ್ತ ಮುಂದುವರಿದಿವೆ.

ಮಾರಿಷಸ್ ಪ್ರಧಾನಿ–ಮೋದಿ ಭೇಟಿ ಇಂದು

ನವದೆಹಲಿ (ಪಿಟಿಐ): ಭಾರತ ಪ್ರವಾಸದಲ್ಲಿರುವ ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗುಲಾಂ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ವಾರಾಣಸಿಯಲ್ಲಿ ಭೇಟಿಯಾಗಲಿದ್ದು, ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಉಭಯ ದೇಶಗಳ ನಡುವೆ ನಾಗರಿಕ ಮತ್ತು ಆಧ್ಯಾತ್ಮಿಕ ಸಂಬಂಧಗಳ ನಂಟಿದೆ. ಆರೋಗ್ಯ, ಶಿಕ್ಷಣ, ವಿಜ್ಞಾನ-ತಂತ್ರಜ್ಞಾನ, ಇಂಧನ, ಮೂಲಸೌಕರ್ಯ ಸೇರಿದಂತೆ ಅಭಿವೃದ್ಧಿ ಪಾಲುದಾರಿಕೆ ಬಲಪಡಿಸುವ ನಿಟ್ಟಿನಲ್ಲಿ ಎರಡೂ ದೇಶಗಳ ಮುಖಂಡರು ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಮಗುಲಾಂ ಅವರು ಸೆ.9ರಂದು ಮುಂಬೈಗೆ ಬಂದಿದ್ದು, ಸೆ.16ರ-ವರೆಗೆ ಅವರು ಭಾರತದಲ್ಲಿ ಇರಲಿದ್ದಾರೆ. ಪ್ರಧಾನಿ ಮೋದಿ ಅವರು ಕಳೆದ ಮಾರ್ಚ್‌ನಲ್ಲಿ ಮಾರಿಷಸ್‌ಗೆ ಭೇಟಿ ನೀಡಿದ ನಂತರ ಉಭಯ ದೇಶಗಳ ನಡುವಿನ ಸಹಕಾರ ಸಂಬಂಧಗಳಿಗೆ ಮತ್ತಷ್ಟು ಬಲ ಬಂದಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮೋದಿ ಜತೆ ಮಾತುಕತೆಗೆ ಟ್ರಂಪ್ ಇಂಗಿತ

ಉಭಯ ದೇಶಗಳ ವ್ಯಾಪಾರ ಮಾತುಕತೆ ಕುರಿತು ಶೀಘ್ರವೇ ಅಂತಿಮ ನಿರ್ಣಯ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): 'ಆತ್ಮೀಯ ಗೆಳೆಯ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮುಂಬರುವ ವಾರಗಳಲ್ಲಿ ಮಾತುಕತೆಗೆ ಎದುರು ನೋಡುತ್ತಿದ್ದೇನೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ.

'ಭಾರತ-ಅಮೆರಿಕ ನಡುವಣ ವ್ಯಾಪಾರ ನಿರ್ಬಂಧಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಉಭಯ ದೇಶಗಳ ಮಧ್ಯೆ ಮಾತುಕತೆ ಮುಂದುವರಿದಿದೆ ಎಂದು ಹೇಳಲು ಸಂತಸವಾಗುತ್ತಿದೆ' ಎಂದು ಟ್ರಂಪ್ ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರುತ್ ಸೋಷಿಯಲ್'ನಲ್ಲಿ ಮಂಗಳವಾರ ಬರೆದುಕೊಂಡಿದ್ದಾರೆ.

'ವ್ಯಾಪಾರ ಮಾತುಕತೆ ಕುರಿತು ಭಾರತ ಮತ್ತು ಅಮೆರಿಕ ದೇಶಗಳು ಶೀಘ್ರವೇ ಅಂತಿಮ ನಿರ್ಣಯ ಕೈಗೊಳ್ಳಲಿವೆ' ಎಂದೂ ಅವರು ತಿಳಿಸಿದ್ದಾರೆ.



ನರೇಂದ್ರ ಮೋದಿ ಮತ್ತು ಡೊನಾಲ್ಡ್ ಟ್ರಂಪ್ (ಸಂಗ್ರಹ ಚಿತ್ರ)

ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸುವ ಟ್ರಂಪ್ ನಿರ್ಧಾರದಿಂದ ಉಭಯ ದೇಶಗಳ ನಡುವಣ ಸಂಬಂಧವನ್ನು ಹದಗೆಡಿಸಿದೆ. ಆದರೆ, ಈ ಮಧ್ಯೆಯೇ ಟ್ರಂಪ್ ಅವರ ಈ ರೀತಿಯ ಹೇಳಿಕೆಗಳು ಉಭಯ ದೇಶಗಳ ನಡುವಿನ ಅಸಮಾಧಾನವನ್ನು ಶಮನ ಮಾಡುವ ದಿಸೆಯಲ್ಲಿ ಮಹತ್ವದ ಹೆಜ್ಜೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಾತುಕತೆಗೆ ಉತ್ಸುಕ: ಮೋದಿ

ನವದೆಹಲಿ: ಟ್ರಂಪ್ ಅವರ ಹೇಳಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ಟ್ರಂಪ್ ಅವರೊಂದಿಗೆ ಮಾತುಕತೆಗೆ ಉತ್ಸುಕನಾಗಿದ್ದೇನೆ' ಎಂದು ಬುಧವಾರ ಹೇಳಿದರು.

ಭಾರತ ಮತ್ತು ಅಮೆರಿಕ ಮಧ್ಯೆ ಉತ್ತಮ ಬಾಂಧವ್ಯವಿದ್ದು, ಸ್ವಾಭಾವಿಕ ಪಾಲುದಾರಿಕೆಯನ್ನು ಹೊಂದಿವೆ. ವ್ಯಾಪಾರ ಮಾತುಕತೆ ಕುರಿತು ಶೀಘ್ರದಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲು ಉಭಯ ದೇಶಗಳು ಶ್ರಮಿಸುತ್ತಿವೆ. ಉಭಯ ದೇಶಗಳ ಜನರಿಗೆ ಉಜ್ವಲ, ಸಮೃದ್ಧ ಭವಿಷ್ಯ ಖಚಿತಪಡಿಸಲು ಭಾರತ-ಅಮೆರಿಕ ಒಟ್ಟಿಗೆ ಕೆಲಸ ಮಾಡಲಿವೆ ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದರು.

'ಕೈ' ಟೀಕೆ: 'ಉಭಯ ದೇಶಗಳ ನಡುವಿನ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ವಿಚಾರವನ್ನು ಮುಂದಿರಿಸುವ ಮೂಲಕ, ಭಾರತ ಮತ್ತು ಪಾಕಿಸ್ತಾನ ನಡುವೆ ಮೇನಲ್ಲಿ ನಡೆದ ಯುದ್ಧವನ್ನು ನಿಲ್ಲಿಸಿದ್ದಾಗಿ ಡೊನಾಲ್ಡ್ ಟ್ರಂಪ್ 35ಕ್ಕೂ ಹೆಚ್ಚು ಬಾರಿ ಹೇಳಿದ್ದಾರೆ' ಎಂದಿರುವ ಕಾಂಗ್ರೆಸ್, ಇದೇ ವಿಷಯವನ್ನು ಮುಂದಿಟ್ಟುಕೊಂಡು ಪ್ರಧಾನಿ ಮೋದಿ ವಿರುದ್ಧ ಟೀಕಾಪ್ರಹಾರ ನಡೆಸಿದೆ. 'ಭಾರತ ಮತ್ತು ಅಮೆರಿಕ ಸಹಜ ಪಾಲುದಾರ ರಾಷ್ಟ್ರಗಳು' ಎಂಬುದಾಗಿ ಹೇಳಿರುವ ಪ್ರಧಾನಿ ಮೋದಿ ಅವರ ಮಾತಿಗೆ ಕಾಂಗ್ರೆಸ್ ಈ ಪ್ರತಿಕ್ರಿಯೆ ನೀಡಿದೆ.

'ಭಾರತ ಮತ್ತು ಅಮೆರಿಕ ಸಹಜ ಪಾಲುದಾರ ರಾಷ್ಟ್ರಗಳು ಎಂದು ಮೋದಿ ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ತಾವು ನಿಲ್ಲಿಸಿದ್ದಾಗಿ ಟ್ರಂಪ್ 35ಕ್ಕೂ ಹೆಚ್ಚು ಬಾರಿ ಹೇಳುವ ಮಟ್ಟಿಗೆ ಪಾಲುದಾರ ರಾಷ್ಟ್ರ ಆಗಿದೆಯೇ' ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಭಾರತ, ಚೀನಾ ಮೇಲೆ 100% ಸುಂಕ ವಿಧಿಸಿ: ಟ್ರಂಪ್

ವಾಷಿಂಗ್ಟನ್ (ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಮೇಲೆ ಒತ್ತಡ ಹೇರುವ ಕಾರ್ಯತಂತ್ರದ ಭಾಗವಾಗಿ ಭಾರತ ಮತ್ತು ಚೀನಾದ ಮೇಲೆ ಶೇ 100ರಷ್ಟು ಸುಂಕ ವಿಧಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಐರೋಪ್ಯ ಒಕ್ಕೂಟವನ್ನು ಒತ್ತಾಯಿಸಿದ್ದಾರೆ ಎಂದು ಅಮೆರಿಕದ ಅಧಿಕಾರಿ ಮತ್ತು ಯುರೋಪಿಯನ್ ಒಕ್ಕೂಟದ ರಾಜತಾಂತ್ರಿಕರೊಬ್ಬರು ಹೇಳಿದ್ದಾರೆ.

'ಚೀನಾ ಮತ್ತು ಭಾರತ, ರಷ್ಯಾದಿಂದ ತೈಲ ಖರೀದಿಸುವ ಪ್ರಮುಖ ರಾಷ್ಟ್ರಗಳಾಗಿವೆ. ಹೀಗಾಗಿ ರಷ್ಯಾದ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಉಭಯ ರಾಷ್ಟ್ರಗಳು ಪ್ರಮುಖ ಪಾತ್ರವಹಿಸುತ್ತಿವೆ. ಇದರಿಂದಾಗಿಯೇ 2022ರಿಂದ ಉಕ್ರೇನ್ ಮೇಲೆ ರಷ್ಯಾ ನಿರಂತರವಾಗಿ ದಾಳಿ ಮಾಡುತ್ತಿದೆ. ಈಗ ಉಕ್ರೇನ್ ಮೇಲಿನ ಯುದ್ಧವನ್ನು ಅಂತ್ಯಗೊಳಿಸುವುದಕ್ಕಾಗಿ ಪುಟಿನ್ ಮೇಲೆ ಒತ್ತಡ ಹೇರಬೇಕು. ಇದಕ್ಕಾಗಿ ಚೀನಾ ಮತ್ತು ಭಾರತದ ಮೇಲೆ ಶೇ100ರಷ್ಟು ಸುಂಕ ವಿಧಿಸಬೇಕು' ಎಂದು ಟ್ರಂಪ್ ಒತ್ತಾಯಿಸಿರುವುದಾಗಿ ಅವರು ಹೇಳಿದ್ದಾರೆ.

ಬಿಆರ್‌ಎಸ್‌ಗೆ ಅಧಿಕ ಆದಾಯ

ದೇಶದ 60 ಪ್ರಾದೇಶಿಕ ಪಕ್ಷಗಳ ಪೈಕಿ 40 ಪಕ್ಷಗಳು 2023-24ನೇ ಸಾಲಿನಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ತಮ್ಮ ಆದಾಯ, ವೆಚ್ಚಗಳ ಮಾಹಿತಿಯನ್ನು ಸಂಗ್ರಹಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತನ್ನ ವರದಿಯನ್ನು ಬುಧವಾರ ಬಿಡುಗಡೆ ಮಾಡಿದೆ. ದಕ್ಷಿಣ ಭಾರತದ ಪ್ರಾದೇಶಿಕ ಪಕ್ಷಗಳೇ ಅಧಿಕ ಆದಾಯ ಬರುವ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಬಿಆರ್‌ಎಸ್ ಪಕ್ಷವೇ ಅಧಿಕ ಆದಾಯ ಪಡೆದ ಪಕ್ಷವಾಗಿ ಹೊರಹೊಮ್ಮಿದೆ. ನಂತರದ ಸ್ಥಾನದಲ್ಲಿ ಟಿಎಂಸಿ ಇದೆ

₹2,532.09 ಕೋಟಿ 40 ಪ್ರಾದೇಶಿಕ ಪಕ್ಷಗಳ ಒಟ್ಟು ಆದಾಯದ ಮೊತ್ತ


ಟಿಡಿಪಿ ಆದಾಯ 4 ಪಟ್ಟು ಹೆಚ್ಚಳ (ಕೋಟಿಗಳಲ್ಲಿ)

ಪಕ್ಷ	2022-23	2023-24
ಬಿಆರ್‌ಎಸ್	₹737.67	₹685.51
ಟಿಎಂಸಿ	₹333.45	₹646.39
ಬಿಜೆಡಿ	₹181.05	₹297.80
ಟಿಡಿಪಿ	₹63.99	₹285.07
ವೈಎಸ್‌ಆರ್ ಕಾಂಗ್ರೆಸ್	₹74.78	₹191.04

ಎಲ್ಲ 40 ಪ್ರಾದೇಶಿಕ ಪಕ್ಷಗಳ ಒಟ್ಟು ಆದಾಯದಲ್ಲಿ ಮೊದಲ 5 ಪಕ್ಷಗಳ ಆದಾಯದ ಒಟ್ಟು ಮೊತ್ತವೇ ₹2,105.82 ಕೋಟಿ (ಶೇ 83.17ರಷ್ಟಿದೆ) ಇದೆ

ಬಾಂಡ್ ಮೂಲಕವೇ ಆದಾಯ

ಹೆಚ್ಚಿನ ಪ್ರಾದೇಶಿಕ ಪಕ್ಷಗಳಿಗೆ ತಮ್ಮ ಒಟ್ಟು ಆದಾಯದಲ್ಲಿ ಶೇ 50ಕ್ಕಿಂತ ಹೆಚ್ಚಿನ ಆದಾಯವು ಚುನಾವಣಾ ಬಾಂಡ್ ಮೂಲಕವೇ ಬಂದಿದೆ. ಟಿಎಂಸಿ ಪಕ್ಷಕ್ಕೆ ಬಂದ ಒಟ್ಟು ಆದಾಯದಲ್ಲಿ ಶೇ 94.74ರಷ್ಟು ಆದಾಯವು ಚುನಾವಣಾ ಬಾಂಡ್ ಮೂಲಕವೇ ಬಂದಿದೆ. ನಂತರದ ಸ್ಥಾನದಲ್ಲಿ ಬಿಆರ್‌ಎಸ್ ಇದೆ. ಡಿಎಂಕೆ, ಸಮಾಜವಾದಿ ಪಕ್ಷ ಸೇರಿ ಕೆಲವು ಪಕ್ಷಗಳು ಇದಕ್ಕೆ ಹೊರತಾಗಿದೆ. ಸಮಾಜವಾದಿ ಪಕ್ಷಕ್ಕೆ ಬಾಂಡ್ ಮೂಲಕ ಆದಾಯವೇ ಬಂದಿಲ್ಲ (ಕೋಟಿಗಳಲ್ಲಿ)



ಟಿಎಂಸಿ	ಬಿಆರ್‌ಎಸ್	ಬಿಜೆಡಿ	ಟಿಡಿಪಿ	ವೈಎಸ್‌ಆರ್ ಕಾಂಗ್ರೆಸ್
₹612.42	₹495.52	₹245.50	₹174.08	₹121.50

ಜೆಡಿಎಸ್ ಆದಾಯ: ಸುಮಾರು 40 ಪಟ್ಟು ಹೆಚ್ಚಳ

₹1.47 ಕೋಟಿ 2022-23

₹44.18 ಕೋಟಿ 2023-24

2022-23 ಮತ್ತು 2023-24ನೇ ಆರ್ಥಿಕ ವರ್ಷದ ಹೋಲಿಕೆಯಲ್ಲಿ ಜೆಡಿಎಸ್ ಪಕ್ಷದ ಆದಾಯವು ಸುಮಾರು 40 ಪಟ್ಟು ಏರಿಕೆಯಾಗಿದೆ. ಇದರಲ್ಲಿ ಸುಮಾರು ಶೇ 99ರಷ್ಟು ಆದಾಯವು ಚುನಾವಣಾ ಬಾಂಡ್ ಮೂಲಕವೇ ಬಂದಿದೆ

* ₹44.18 ಕೋಟಿ ಆದಾಯದಲ್ಲಿ ₹41 ಕೋಟಿಯಷ್ಟು ಆದಾಯವು ಚುನಾವಣಾ ಬಾಂಡ್ ಮೂಲಕ ಬಂದಿದೆ

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

'ಸೀಟು ಹಂಚಿಕೆಯಲ್ಲಿ ಸಮತೋಲನ ಇರಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಈ ಬಾರಿಯ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತನಗೆ ಕಡಿಮೆ ಸ್ಥಾನಗಳು ದೊರೆತರೂ ಚಿಂತೆಯಿಲ್ಲ. ಆದರೆ ಸೋಲುವ ಕ್ಷೇತ್ರಗಳ ಕಸದ ತೊಟ್ಟಿಯಾಗಲು ತಾನು ಸಿದ್ಧವಿಲ್ಲ' ಎಂದು ಮಿತ್ರಪಕ್ಷಗಳಿಗೆ ಸ್ಪಷ್ಟ ಸಂದೇಶ ಕಳುಹಿಸಿರುವ ಕಾಂಗ್ರೆಸ್, 'ಸೀಟು ಹಂಚಿಕೆಯಲ್ಲಿ ಮಿಶ್ರಣ ಮತ್ತು ಸಮ ತೋಲನ ಕಾಯ್ದುಕೊಳ್ಳಬೇಕು' ಎಂದು ಸಲಹೆ ನೀಡಿದೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ನಡೆಸುತ್ತಿರುವ 'ಮತದಾರರ ಅಧಿಕಾರ ಯಾತ್ರೆ'ಯಿಂದ ಹಲವು ಹೊಸ ಪಕ್ಷಗಳು ಆಕರ್ಷಿತವಾ-ಗಿವೆ. ಅಲ್ಲದೆ ಅವು ರಾಜ್ಯದಲ್ಲಿ ಆರ್‌ಜೆಡಿ ನೇತೃತ್ವದ 'ಮಹಾಘಟಬಂಧನ್'ಗೆ ಸೇರುವ ತವಕದಲ್ಲಿವೆ. ಆದರೆ, ಐದು ವರ್ಷಗಳ ಹಿಂದೆ ಅವರು ಸ್ಪರ್ಧಿಸಿದ್ದ ಸ್ಥಾನಗಳನ್ನೇ ಈ ಬಾರಿಯೂ ನೀಡಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಎಲ್ಲ ಮಿತ್ರ ಪಕ್ಷಗಳು ಸೀಟುಗಳ ಹಂಚಿಕೆ ಖಚಿತಪಡಿಸಿಕೊಳ್ಳುವಾಗ ಹೊರೆಯನ್ನು ಸಮಾನವಾಗಿ ಹಂಚಿಕೊಳ್ಳಬೇಕು. ಒಕ್ಕೂಟದಿಂದ ಗೆಲ್ಲಲು ಆಗದ ಸ್ಥಾನಗಳನ್ನು ದೊಡ್ಡ ಸಂಖ್ಯೆಯಲ್ಲಿ ತನಗಷ್ಟೇ ವಹಿಸುವುದು ಸರಿಯಲ್ಲ

> **ಇಂಡಿಯಾ ಮೈತ್ರಿಕೂಟವು ಒಗ್ಗಟ್ಟಾಗಿ ಮುನ್ನಡೆದರೆ, ಪರಿಣಾಮಕಾರಿಯಾಗಿ ಸಂಘಟಿತವಾದರೆ ದೇಶದ ಪ್ರಜಾಪ್ರಭುತ್ವದ ಭೀಕರ ಅವನತಿಯನ್ನು ತಡೆಯಬಹುದು**
> **ಮಣಿಶಂಕರ್ ಅಯ್ಯರ್**, ಕಾಂಗ್ರೆಸ್ ನಾಯಕ

ಎಂದೂ ಕಾಂಗ್ರೆಸ್ ಹೇಳಿದೆ. 'ಗೆಲ್ಲುವ ಸ್ಥಾನಗಳಂತೆಯೇ ಗೆಲ್ಲಲು ಕಷ್ಟವಿರುವ ಸ್ಥಾನಗಳ ಮೇಲೂ ಗಮನಹರಿಸಬೇಕು. ಎಲ್ಲ ಪಕ್ಷಗಳಿಗೂ ಸೀಟು ಹಂಚಿಕೆ ವೇಳೆ ಗೆಲ್ಲುವ ಮತ್ತು ಗೆಲ್ಲಲು ಕಷ್ಟವಿರುವ ಕ್ಷೇತ್ರಗಳನ್ನು ಹಂಚಬೇಕು. ಹೀಗೆ ಸೀಟು ಹಂಚಿಕೆಯು ಮಿಶ್ರಣ ಮತ್ತು ಸಮತೋಲನದಿಂದ ಕೂಡಿರಬೇಕು' ಎಂದು ಬಿಹಾರದ ಕಾಂಗ್ರೆಸ್ ಉಸ್ತುವಾರಿ ಕೃಷ್ಣ ಅಲ್ಲವರು ಬುಧವಾರ ಪ್ರತಿಕ್ರಿಯಿಸಿದರು.

2020ರ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ್ದ 70 ಸ್ಥಾನಗಳ ಪೈಕಿ ಗೆಲುವು ಕಂಡಿದ್ದು 19ರಲ್ಲಿ ಮಾತ್ರ. ಅಂದರೆ ದಶಕದಿಂದ ಮೈತ್ರಿಕೂಟದ ಮಿತ್ರ ಪಕ್ಷಗಳು ಗೆಲ್ಲಲು ಸಾಧ್ಯವಾಗದ ಕ್ಷೇತ್ರವನ್ನು ಕಾಂಗ್ರೆಸ್‌ಗೆ ನೀಡಲಾಗಿತ್ತು ಎಂಬುದು ಸ್ಪಷ್ಟವಾಗಿದೆ ಎಂದರು.

ಪಕ್ಷವು ಹೆಚ್ಚಿನ ಸಂಖ್ಯೆಯ ಸ್ಥಾನಗಳನ್ನು ಪಡೆಯುವ ಗುರಿ ಹೊಂದುವ ಬದಲು, ಗೆಲ್ಲಬಹುದಾದ ಕ್ಷೇತ್ರಗಳನ್ನು ಪಡೆಯಲು ಪ್ರಯತ್ನಿಸಬೇಕು ಎಂದು ಅವರು ಹೇಳಿದರು. ಈ ಬಾರಿ ಪಕ್ಷಕ್ಕೆ 57ರಿಂದ 60 ಸ್ಥಾನಗಳು ದೊರೆಯಬಹುದು ಎಂದು ಕಾಂಗ್ರೆಸ್ ಮೂಲಗಳು ಅಂದಾಜಿಸಿವೆ. ಆದರೆ ಈ ಸೂತ್ರವನ್ನು ಇತರ ಪಕ್ಷಗಳು ಎಷ್ಟರ ಮಟ್ಟಿಗೆ ಒಪ್ಪುತ್ತವೆ ಎಂಬ ಪ್ರಶ್ನೆಯಿದೆ. ಕಳೆದ ಬಾರಿ 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 12ರಲ್ಲಿ ಗೆದ್ದಿದ್ದ ಸಿಪಿಐ (ಎಂಎಲ್), ಈ ಬಾರಿ 40 ಸ್ಥಾನಗಳಿಗೆ ಬೇಡಿಕೆಯಿಟ್ಟಿದೆ.

ಎರಡು ಪ್ರಮುಖ ಯೋಜನೆಗಳಿಗೆ ಅಸ್ತು

ನವದೆಹಲಿ: ಚುನಾವಣೆ ಸಮೀ-ಪಿಸುತ್ತಿರುವ ಬಿಹಾರಕ್ಕೆ ಸುಮಾರು ₹7,500 ಕೋಟಿ ಮೊತ್ತದ ರಸ್ತೆ ಮತ್ತು ರೈಲ್ವೆಯ ಪ್ರಮುಖ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಮೇಲಿನ ಸಂಪುಟ ಸಮಿತಿಯು (ಸಿಸಿಇಎ) ಈ ಮಹತ್ವದ ಮೂಲ ಸೌಕರ್ಯ ಯೋಜನೆಗಳಿಗೆ ಒಪ್ಪಿಗೆ ಕೊಟ್ಟಿದೆ.

ಬಿಹಾರದ ಬಕ್ಸಾರ್– ಭಾಗಲ್ಪುರ ಹೈಸ್ಪೀಡ್ ಕಾರಿಡಾರ್‌ನ 4 ಪಥದ ಮೊಕಾಮಾ–ಮುಂಗೇರ್ ವಿಭಾಗದ ನಿರ್ಮಾಣಕ್ಕೆ ಒಟ್ಟು ₹4,447.38 ಕೋಟಿ ಹಾಗೂ ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳಕ್ಕೆ ಸಂಪರ್ಕಿಸುವ ಭಾಗಲ್ಪುರ– ದುಮ್ಕಾ-ರಾಮಪುರಹಾಟ್ ಏಕಪಥ ರೈಲು ಹಳಿ ಮಾರ್ಗದಲ್ಲಿ ದ್ವಿಪಥ ಹಳಿ ನಿರ್ಮಾಣ ಯೋಜನೆಯನ್ನು ₹3,169 ಕೋಟಿ ವೆಚ್ಚದಲ್ಲಿ ಕೈಗೆತ್ತಿ-ಕೊಳ್ಳಲು ಸಿಸಿಇಎ ಅನುಮೋದನೆ ನೀಡಿದೆ.

'ಮತಕಳವು ಅಭಿಯಾನಕ್ಕೆ ಭಾರಿ ಮನ್ನಣೆ'

ರಾಯಬರೇಲಿ (ಉತ್ತರ ಪ್ರದೇಶ) (ಪಿಟಿಐ): 'ಮತಕಳ್ಳರೇ, ಅಧಿಕಾರದ ಗದ್ದುಗೆ ಬಿಡಿ' ಎಂಬ ಘೋಷಣೆಯೊಂದಿಗೆ ನಡೆಸಿದ ಅಭಿಯಾನಕ್ಕೆ ದೇಶದಾದ್ಯಂತ ಭಾರಿ ಮನ್ನಣೆ ದೊರೆತಿದೆ' ಎಂದಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ಕಾಂಗ್ರೆಸ್ ಪಕ್ಷವು ಅದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜನರ ಬಳಿಗೆ ತೆಗೆದುಕೊಂಡು ಹೋಗಲಿದೆ' ಎಂದು ಬುಧವಾರ ಸುದ್ದಿಗಾರರಿಗೆ ಹೇಳಿದರು.

ಮತಪಟ್ಟಿಯಲ್ಲಿ ಹೆಸರು: ತೀರ್ಪು ಕಾಯ್ದಿಟ್ಟ ಕೋರ್ಟ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಭಾರತದ ಪೌರತ್ವ ಪಡೆಯುವ ಮೂರು ವರ್ಷ ಮೊದಲೇ ಅವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿತ್ತು ಎಂಬ ಆರೋಪಕ್ಕೆ ಸಂಬಂಧಿಸಿದ ತೀರ್ಪನ್ನು ದೆಹಲಿಯ ಕೋರ್ಟ್ ಬುಧವಾರ ಕಾಯ್ದಿರಿಸಿದೆ.



ಸೋನಿಯಾ ಗಾಂಧಿ

ಹೆಚ್ಚುವರಿ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ವೈಭವ್ ಚೌರಾಸಿಯಾ ಅವರು, 'ತೀರ್ಪನ್ನು ಕಾಯ್ದಿರಿಸುವೆ' ಎಂದು ಹೇಳಿದರು.

1980ರಲ್ಲಿ ಸೋನಿಯಾ ಗಾಂಧಿ ಅವರ ಹೆಸರನ್ನು ನವದೆಹಲಿ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿತ್ತು. ಆದರೆ ಆ ಸಮಯದಲ್ಲಿ ಅವರು ಭಾರತ ಪ್ರಜೆಯೇ ಆಗಿರಲಿಲ್ಲ ಎಂದು ದೂರುದಾರ ವಿಕಾಸ್ ತ್ರಿಪಾಠಿ ಅವರ ಪರ ಹಿರಿಯ ವಕೀಲ ಪವನ್ ನಾರಂಗ್ ನ್ಯಾಯಾಲಯಕ್ಕೆ ತಿಳಿಸಿದರು.

ಸೋನಿಯಾ ಅವರು ಭಾರತದ ಪ್ರಜೆಯಾಗಿದ್ದರೆ 1982ರಲ್ಲಿ ಅವರ ಹೆಸರನ್ನು ತೆಗೆದುಹಾಕಿದ್ದು ಏಕೆ? ಮತ್ತು 1983ರಲ್ಲಿ ಮತ್ತೆ ಸೇರ್ಪಡೆ ಮಾಡಿದ್ದು ಏಕೆ ಎಂದು ಪ್ರಶ್ನಿಸಿದರು.

ಧರ್ಮಸ್ಥಳ: ಕಾಡಿನಲ್ಲಿ ಬುರುಡೆ ಸಿಕ್ಕ ಸ್ಥಳಕ್ಕೆ ಮತ್ತೊಮ್ಮೆ ತೆರಳಿದ ಎಸ್‌ಐಟಿ

ವಿಠಲ ಗೌಡ ಸಮ್ಮುಖದಲ್ಲಿ ಮರು ಮಹಜರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡವು (ಎಸ್‌ಐಟಿ) ಪಾಂಗಾಳದ ವಿಠಲ ಗೌಡ ಅವರನ್ನು ನೇತ್ರಾವತಿ ಸ್ನಾನಘಟ್ಟ ಪಕ್ಕದ ಕಾಡಿನೊಳಗೆ ಬುಧವಾರ ಮತ್ತೊಮ್ಮೆ ಕರೆದೊಯ್ದು ಮಹಜರು ನಡೆಸಿತು.

ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಬೆಳಿಗ್ಗೆ ಹಾಜರಾಗಿದ್ದ ವಿಠಲ ಗೌಡ (ಕೊಲೆಯಾಗಿರುವ ಸೌಜನ್ಯಾ ಅವರ ಮಾವ) ಅವರಿಂದ ಎಸ್‌ಐಟಿ ಅಧಿಕಾರಿಗಳು ಹೇಳಿಕೆ ದಾಖಲಿಸಿಕೊಂಡರು. ಸಾಕ್ಷಿ ದೂರುದಾರ ತಂದೊಪ್ಪಿಸಿದ್ದ ಬುರುಡೆ ಸಿಕ್ಕಿದ್ದ ಜಾಗಕ್ಕೆ ಅವರನ್ನು ಸಿ.ಎ. ಸೈಮನ್ ನೇತೃತ್ವದ ತಂಡವು ಸಂಜೆ ವೇಳೆ ಕರೆದೊಯ್ಯಿತು.

ಮಹಜರು ನಡೆಸಿದ ಅಧಿಕಾರಿಗಳು ಕಾಡಿನಿಂದ ಒಂದು ಗಂಟೆ ಬಳಿಕ ಹೊರಬಂದರು. ಕಂದಾಯ ಇಲಾಖೆ ಉಪವಿಭಾಗಾಧಿಕಾರಿ, ತಹಶೀಲ್ದಾರ್, ವಿಧಿವಿಜ್ಞಾನ ತಜ್ಞರು ಇರಲಿಲ್ಲ.

'ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಬುರುಡೆ ಇದ್ದ ಜಾಗವನ್ನು ವಿಠಲ ಗೌಡ ಅವರೇ ಸಾಕ್ಷಿದೂರುದಾರನಿಗೆ ತೋರಿಸಿದ್ದರು. ಅಲ್ಲಿಂದ ತೆಗೆದ ಬುರುಡೆಯನ್ನೇ ಸಾಕ್ಷಿ ದೂರುದಾರ ಪೊಲೀಸರ ವಶಕ್ಕೆ ಒಪ್ಪಿಸಿದ್ದ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ. ಬುರುಡೆ ಸಿಕ್ಕಿದ ಜಾಗವನ್ನು ಎಸ್‌ಐಟಿ ಅಧಿಕಾರಿಗಳು ಸೆ.6ರಂದು ಮಹಜರು ನಡೆಸಿದ್ದರು. ಈ ವೇಳೆ ಆ ಪ್ರದೇಶದಲ್ಲಿ ಮೃತದೇಹ ಅವಶೇಷಗಳು ನೆಲದ ಮೇಲೆಯೇ ಕಂಡುಬಂದಿದ್ದವು.



ಧರ್ಮಸ್ಥಳದ ಸ್ನಾನಘಟ್ಟ ಪಕ್ಕದ ಕಾಡಿನಲ್ಲಿ ಬುರುಡೆ ಸಿಕ್ಕಿದ ಸ್ಥಳದ ಮಹಜರು ನಡೆಸಿದ ಸಿ.ಎ ಸೈಮನ್ ನೇತೃತ್ವದ ಎಸ್‌ಐಟಿ ಅಧಿಕಾರಿಗಳ ತಂಡವು ವಿಠಲ ಗೌಡ ಅವರನ್ನು ಕಾಡಿನಿಂದ ಹೊರಗೆ ಕರೆತಂದಿತು

'ಈ ಹಿಂದೆ ಮಹಜರು ನಡೆಸಿದ ವೇಳೆ ಕತ್ತಲಾವರಿಸಿದ್ದರಿಂದ ಆ ಪ್ರದೇಶವನ್ನು ಕೂಲಂಕಷವಾಗಿ ಪರಿಶೀಲಿಸುವುದು ಸಾಧ್ಯವಾಗಿರಲಿಲ್ಲ. ಹಾಗಾಗಿ ಹೆಚ್ಚಿನ ಮಾಹಿತಿ ಕಲೆ ಹಾಕಲು ವಿಠಲ ಗೌಡ ಅವರನ್ನು ಮತ್ತೊಮ್ಮೆ ಅಲ್ಲಿಗೆ ಕರೆ-ದೊಯ್ಯಲಾಯಿತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮಾತಿನ ಚಕಮಕಿ: ವಿಠಲ ಗೌಡ ಅವರನ್ನು ಎಸ್‌ಐಟಿಯವರು ಮಹಜರಿಗೆ ಕರೆದೊಯ್ಯುವುದನ್ನು ವರದಿ ಮಾಡಲು ಬಂದಿದ್ದ 'ಕುಡ್ಲ ರಾಂಪೇಜ್' ಯೂಟ್ಯೂಬ್ ಚಾನೆಲ್‌ನ ಅಜಯ್ ಜೊತೆ ಸ್ಥಳೀಯ ಯುವಕರ ಗುಂಪು 'ಆಧಾರರಹಿತ ಸುದ್ದಿ ಪ್ರಕಟಿಸುತ್ತೀರಿ' ಎಂದು ಆರೋಪಿಸಿ ಮಾತಿನ ಚಕಮಕಿ ನಡೆಸಿತು. ಸ್ಥಳದಲ್ಲಿದ್ದ ಧರ್ಮಸ್ಥಳ ಠಾಣೆಯ ಪಿಎಸ್‌ಐ, ಸ್ಥಳೀಯರನ್ನು ದೂರಕ್ಕೆ ಕಳುಹಿಸಿದರು.

ಹಲವರ ವಿಚಾರಣೆ: ಕೇರಳದ ಯೂಟ್ಯೂಬರ್ ಮುನಾಫ್, 'ಯುನೈಟೆಡ್ ಮಿಡಿಯಾ' ಯೂಟ್ಯೂಬ್ ವಾಹಿನಿಯ ಅಭಿಷೇಕ್, ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ., ಗಿರೀಶ ಮಟ್ಟೆಣ್ಣವರ ಅವರನ್ನು ಅಧಿಕಾರಿಗಳು ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ಕರೆಸಿಕೊಂಡು ಬುಧವಾರವೂ ವಿಚಾರಣೆಗೆ ಒಳಪಡಿಸಿದರು.

ಮೊಬೈಲ್ ವಶಕ್ಕೆ: 'ಈ ಪ್ರಕರಣಕ್ಕೆ ಸಂಬಂಧಿಸಿದ ಅನೇಕ ವಿಚಾರಗಳ ಕುರಿತು ಪ್ರಶ್ನೆ ಕೇಳಿದ್ದಾರೆ. ನನಗೆ ತಿಳಿದ ಸತ್ಯ ವಿಚಾರ ಅವರಿಗೆ ತಿಳಿಸಿದ್ದೇನೆ. ನನ್ನ ಮೂರು ಮೊಬೈಲ್‌ಗಳನ್ನು ಅವರ ವಶಕ್ಕೆ ಒಪ್ಪಿಸಿದ್ದೇನೆ' ಎಂದು ಜಯಂತ್ ಟಿ. ತಿಳಿಸಿದರು.

ಕೇರಳದ ಯೂಟ್ಯೂಬರ್ ಮುನಾಫ್, 'ಹಲವು ಯೂಟ್ಯೂಬರ್‌ಗಳು ಪ್ರಕರಣ ಕುರಿತು ಸುದ್ದಿ ಮಾಡಿದ್ದರೂ, ನನ್ನನ್ನೇ ಏಕೆ ವಿಚಾರಣೆಗೆ ಕರೆದರೋ ಗೊತ್ತಿಲ್ಲ. ನಾನು ಯೂಟ್ಯೂಬ್ ಚಾನೆಲ್ ಆರಂಭಿಸಿ ವರ್ಷವಷ್ಟೇ ಆಗಿದೆ. ಜನರಿಗೆ ಸತ್ಯಾಂಶ ತಿಳಿಸಲು ನಾನು ವಿಡಿಯೊ ಮಾಡುತ್ತೇನೆ' ಎಂದರು.

ಜೋಡಿ ಕೊಲೆ: ಎಸ್‌ಐಟಿಗೆ ದೂರು

ಧರ್ಮಸ್ಥಳ ಗ್ರಾಮದ ಬೂರ್ಜೆಯಲ್ಲಿ ನಡೆದಿದ್ದ ಜೋಡಿ ಕೊಲೆ ಕುರಿತು ಮರು ತನಿಖೆ ನಡೆಸಬೇಕು ಎಂದು ಒತ್ತಾಯಿಸಿ, ಕೊಲೆಯಾದ ನಾರಾಯಣ ಅವರ ಪುತ್ರ ಬೆಳ್ತಂಗಡಿ ತಾಲ್ಲೂಕು ಮೇಲಂತಬೆಟ್ಟುವಿನ ಗಣೇಶ ಅವರು ಬುಧವಾರ ಎಸ್‌ಐಟಿ ಕಚೇರಿಗೆ ಮತ್ತೊಂದು ದೂರು ಅರ್ಜಿ ಸಲ್ಲಿಸಿದರು.

ಬೂರ್ಜೆಯಲ್ಲಿ ವಾಸವಿದ್ದ ಆನೆ ಮಾವುತ ನಾರಾಯಣ ಮತ್ತು ಅವರ ಸೋದರಿ ಯಮುನಾ 2012 ಸೆ. 21ರಂದು ಕೊಲೆಯಾಗಿದ್ದರು. ಈ ಪ್ರಕರಣದ ಮರು ತನಿಖೆಗೆ ಒತ್ತಾಯಿಸಿ ನಾರಾಯಣ ಅವರ ಮಕ್ಕಳಾದ ಗಣೇಶ ಹಾಗೂ ಭಾರತಿ ಅವರು ಎಸ್‌ಐಟಿಗೆ ಆ.18ರಂದು ದೂರು ನೀಡಿದ್ದರು.

ಜೋಡಿ ಕೊಲೆಯ ಆರೋಪಿಗಳು ಪತ್ತೆಯಾಗಿಲ್ಲ. ಇದು ಇತ್ಯರ್ಥವಾಗದ ಪ್ರಕರಣ ಎಂದು ಪೊಲೀಸರು ಬೆಳ್ತಂಗಡಿ ನ್ಯಾಯಾಲಯಕ್ಕೆ ಸಿ– ವರದಿ ಸಲ್ಲಿಸಿದ್ದರು. ಅದನ್ನು ಪ್ರಶ್ನಿಸಿ ನಾರಾಯಣ ಅವರ ಕುಟುಂಬದವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

'ನಾವು ಈ ಹಿಂದೆ ಎಸ್‌ಐಟಿಗೆ ದೂರು ನೀಡಿದಾಗ ಅಧಿಕಾರಿಗಳು, 'ಈ ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿರುವುದರಿಂದ ತನಿಖೆಗೆ ಪರಿಗಣಿಸಲಾಗದು' ಎಂದು ತಿಳಿಸಿದ್ದರು. ಹಾಗಾಗಿ, ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂಪಡೆದಿದ್ದು, ಅದರ ಪ್ರತಿಯನ್ನು ಲಗತ್ತಿಸಿ ಎಸ್‌ಐಟಿಗೆ ಮತ್ತೊಂದು ದೂರು ನೀಡಿದ್ದೇವೆ' ಎಂದು ಗಣೇಶ ತಿಳಿಸಿದರು.

32 ಯೂಟ್ಯೂಬ್ ಚಾನೆಲ್ ಮೇಲೆ ದೂರು

'ಶ್ರೀಕ್ಷೇತ್ರ ಧರ್ಮಸ್ಥಳದ ಬಗ್ಗೆ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಕುರಿತು ಅಪಪ್ರಚಾರ ನಡೆಸುವ ಸಂಚು ನಡೆದಿದೆ. ಸ್ವತಂತ್ರ ಯೂಟ್ಯೂಬರ್‌ಗಳು ಸೇರಿ ಅನೇಕ ಮಂದಿ ಇದರಲ್ಲಿ ಭಾಗಿಯಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಆಧಾರರಹಿತ ಹಾಗೂ ಅವಹೇಳನಕಾರಿ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಈ ಚಟುವಟಿಕೆಗೆ ವಿದೇಶಗಳಿಂದ ಅಕ್ರಮವಾಗಿ ಹಣಕಾಸಿನ ನೆರವು ಒದಗಿಸಿರುವ ಹಾಗೂ ರಾಷ್ಟ್ರವಿರೋಧಿ ಮತ್ತು ಭಯೋತ್ಪಾದನಾ ಸಂಘಟನೆಗಳು ಈ ಸಂಚಿನಲ್ಲಿ ಭಾಗಿಯಾಗಿರುವ ಶಂಕೆ ಇದೆ. ಈ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿ ಧರ್ಮಸ್ಥಳದ ಸುರೇಂದ್ರ ಪ್ರಭು ಎಂಬುವವರು ಎಸ್‌ಐಟಿಗೆ ದೂರು ನೀಡಿದ್ದಾರೆ.

ಕನ್ನಡದ 17, ತಮಿಳಿನ 10, ಇಂಗ್ಲಿಷ್ ಮತ್ತು ಮಲಯಾಳದ ತಲಾ ಎರಡು ಹಾಗೂ ತೆಲುಗಿನ ಒಂದು ಯೂಟ್ಯೂಬ್ ವಾಹಿನಿಯ ಹೆಸರನ್ನು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಒಳ ಮೀಸಲು ಪ್ರತಿಭಟನಾ ಕಿಚ್ಚು

ಒಂದನೇ ಪುಟದಿಂದ...

ತಮ್ಮ ಮನವಿ ಸ್ವೀಕರಿಸಲು ಮುಖ್ಯಮಂತ್ರಿ ಅಥವಾ ಸಚಿವರು ಬರಬೇಕು ಎಂದು ಆಗ್ರಹಿಸಿದರು. ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಮನವಿ ಸ್ವೀಕರಿಸಲು ಬಂದರೂ ಪ್ರತಿಭಟನಕಾರರ ಕೋಪ ತಣಿಯಲಿಲ್ಲ. ಮಂತ್ರಿಗಳೇ ಬರಬೇಕು ಎಂದು ಪಟ್ಟು ಹಿಡಿದರು.

'ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳಿಗೆ ಕನಿಷ್ಠ ಶೇ 5ರಷ್ಟು ಮೀಸಲಾತಿ ಕಲ್ಪಿಸಬೇಕು. ನಾಗಮೋಹನದಾಸ್ ವರದಿಯಿಂದ 'ಸ್ಪೃಶ್ಯ' ಹಾಗೂ 'ಅಸ್ಪೃಶ್ಯ' ಪದಗಳ ಬಳಕೆಯನ್ನು ತಕ್ಷಣವೇ ಕೈಬಿಡಬೇಕು. ಇಲ್ಲದಿದ್ದರೆ ಜಾತಿನಿಂದನೆ ಮೊಕದ್ದಮೆ ಹೂಡಬೇಕಾಗುತ್ತದೆ. ಅಲೆಮಾರಿಗಳಿಗೆ ಶೇ 1 ರಷ್ಟು ಪ್ರತ್ಯೇಕ ಮೀಸಲಾತಿ ಕಲ್ಪಿಸಬೇಕು. ನಾಗಮೋಹನದಾಸ್ ವರದಿಯ ಶಿಫಾರಸುಗಳನ್ನು ಕೈಬಿಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕೆರಳಿದ್ದ ಪ್ರತಿಭಟನಕಾರರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾದರು. ಆಗ ಅವರನ್ನು ಪೊಲೀಸರು ತಡೆದರು. ಪ್ರತಿಭಟನ-ಕಾರರು ಮತ್ತು ಪೊಲೀಸರ ನಡುವೆ ವಾಗ್ವಾದ ನಡೆದು ಗೊಂದಲದ ವಾತಾವರಣ ನಿರ್ಮಾಣವಾಯಿತು. ಕೆಲವರು ಬ್ಯಾರಿಕೇಡ್ ಹಾರಿ ಕೆ.ಆರ್. ವೃತ್ತದ ಮೂಲಕ ವಿಧಾನಸೌಧದ ಕಡೆಗೆ ಓಡಿದಾಗ, ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪ್ರತಿಭಟನಕಾರರು ಭಾರಿ ಸಂಖ್ಯೆಯಲ್ಲಿ ಇದ್ದ ಕಾರಣ ಮೈಸೂರು ಬ್ಯಾಂಕ್ ವೃತ್ತ, ಕೆ.ಆರ್. ವೃತ್ತ, ಅರಮನೆ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ವಾಹನ ಚಾಲಕರು ಪರದಾಡಿದರು. ಪರ್ಯಾಯ ರಸ್ತೆಯಲ್ಲೂ ದಟ್ಟಣೆ ಇತ್ತು.

ಹಲವರು ಅಸ್ವಸ್ಥ: ಪ್ರತಿಭಟನಾ ಸ್ಥಳದಲ್ಲಿ ಹಲವರು ಅಸ್ವಸ್ಥಗೊಂಡಿದ್ದರು. ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ಮಹಿಳೆಯೊಬ್ಬರು ಮೈಮೇಲೆ ಡೀಸೆಲ್ ಸುರಿದುಕೊಂಡರು.

ಆಗ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು. 'ಒಂದು ವಾರದಲ್ಲಿ ನಮ್ಮ ಬೇಡಿಕೆ ಈಡೇರಿಸಬೇಕು. ಇಲ್ಲವಾದರೆ ರಾಜ್ಯ ವ್ಯಾಪಿ ಹೋರಾಟ ಮಾಡುವುದಾಗಿ' ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಹೋರಾಟದ ನೇತೃತ್ವ ವಹಿಸಿದ್ದ ಪಿ.ರಾಜೀವ್ ಮಾತನಾಡಿ, 'ಈ ಹೋರಾಟ ಯಾವುದೇ ವ್ಯಕ್ತಿ ಅಥವಾ ಸರ್ಕಾರದ ವಿರುದ್ಧ ಅಲ್ಲ. ಬಂಜಾರ, ಕೊರಮ, ಕೊರಚ, ಭೋವಿ ಸಮುದಾಯಗಳಿಗಾಗಿರುವ ಅನ್ಯಾಯದ ವಿರುದ್ಧ ಹೋರಾಟ' ಎಂದರು.

ಪ್ರತಿಭಟನೆಯಲ್ಲಿ ಮಾಜಿ ಸಂಸದ ಉಮೇಶ್ ಜಾಧವ್, ಶಾಸಕರಾದ ಪ್ರಭು ಚೌಹಾಣ್, ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಸುನೀಲ್ ವಲ್ಯಾಪುರೆ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಶಾಸಕ ದೇವನಹಳ್ಳಿ ಚಂದ್ರಪ್ಪ ಪಾಲ್ಗೊಂಡಿದ್ದರು.

'ಪರಿಶಿಷ್ಟ ಜಾತಿಗಳಿಗೆ ನ್ಯಾಯ ಸಿಕ್ಕಿಲ್ಲ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮನೆ ಮುರಿಯುವ ಕೆಲಸ ಮಾಡುವುದು ಸುಲಭ. ಮನೆ ಕಟ್ಟುವುದು ಅತ್ಯಂತ ಕಷ್ಟದ ಕೆಲಸ. ಜನ ನಿಮಗೆ ಆಶೀರ್ವಾದ ಮಾಡಿ ಅಧಿಕಾರಕ್ಕೆ ತಂದಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಸಮುದಾಯಗಳು, ಅಲೆಮಾರಿ ಸಮುದಾಯಕ್ಕೆ ನ್ಯಾಯ ಕೊಡುವ ಅಪೇಕ್ಷೆ ಜನರಲ್ಲಿ ಇತ್ತು. ಅಧಿಕಾರಕ್ಕೆ ಬಂದ ಬಳಿಕ, ಕಾಂಗ್ರೆಸ್ ಸರ್ಕಾರವು ಶೋಷಿತರಿಗೆ ನ್ಯಾಯ ನೀಡುವ ವಿಚಾರದಲ್ಲಿ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

'ಎಷ್ಟು ದಿನ ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂತಿದ್ದೀರಿ ಎಂಬುದು ಮುಖ್ಯವಲ್ಲ ಸಿದ್ದರಾಮಯ್ಯನವರೇ. ಆ ಕುರ್ಚಿಯಲ್ಲಿ ಕೂತಾಗ ಎಲ್ಲ ಸಮುದಾಯಗಳಿಗೆ ನ್ಯಾಯ ಕೊಟ್ಟಿದ್ದೀರಾ ಎಂಬುದು ಮುಖ್ಯ' ಎಂದರು.

> **ಸಾಮಾಜಿಕ ನ್ಯಾಯ, ಸಂವಿಧಾನ ಎಂದು ಭಾಷಣ ಮಾಡುವವರೇ ನಮ್ಮ ಸಮಾಜಗಳ ಬೆನ್ನಿಗೆ ಚೂರಿ ಹಾಕಿದ್ದಾರೆ**
> **ಪಿ.ರಾಜೀವ್**, ಮಾಜಿ ಶಾಸಕ

'ಕೈಗಾರಿಕೆಗೆ ಎರಡು ಎಕರೆ: ಭೂಮಿ ಪರಿವರ್ತನೆ ಅಗತ್ಯವಿಲ್ಲ'

ಬೆಂಗಳೂರು: ಕೃಷಿ ಭೂಮಿ ಖರೀದಿ ಸರಳೀಕರಣ ಮತ್ತು ಕೆಲವು ಉದ್ದೇಶಗಳಿಗೆ ಭೂಮಿ ಪರಿವರ್ತನೆ ನಿಯಮ ಸಡಿಲಿಕೆಗೆ ಅವಕಾಶ ಕಲ್ಪಿಸುವ 'ಕರ್ನಾಟಕ ಭೂ ಸುಧಾರಣೆಗಳು ಮತ್ತು ಇತರೆ ಕಾನೂನು (ತಿದ್ದುಪಡಿ)' ಮಸೂದೆ ಸೇರಿ ವಿವಿಧ ಮಸೂದೆಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ್ದಾರೆ. ಆ ಬೆನ್ನಲ್ಲೆ, ರಾಜ್ಯ ಸರ್ಕಾರ ಗೆಜೆಟ್ ಹೊರಡಿಸಿದೆ.

ಶಿಕ್ಷಣ ಸಂಸ್ಥೆಗಳಿಗೆ ಅಥವಾ ಕೈಗಾರಿಕೆಗಳಿಗೆ ಎರಡು ಎಕರೆವರೆಗಿನ ಕೃಷಿ ಭೂಮಿಗೆ ಭೂ ಪರಿವರ್ತನೆಯಿಂದ ವಿನಾಯಿತಿ ನೀಡುವ, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕೆಗಳಿಗೆ ನಾಲ್ಕು ಹೆಕ್ಟೇರ್‌ವರೆಗೆ ಕೃಷಿ ಭೂಮಿ ಖರೀದಿಗೆ ಮಿತಿ, ಜಿಲ್ಲಾಧಿಕಾರಿಗಳಿಗೆ ಭೂಮಿ ಖರೀದಿಸುವ ಅಧಿಕಾರ, ಕೃಷಿ ಭೂಮಿಯನ್ನು ಅನುಮತಿ ಇಲ್ಲದೆ ಅಥವಾ ಪರಿವರ್ತನೆ ಮಾಡದೆ ಕೃಷಿಯೇತರ ಉದ್ದೇಶಕ್ಕೆ ಬಳಸಿದರೆ ₹ 1 ಲಕ್ಷ ದಂಡ, ನವೀಕರಿಸಬಹುದಾದ ಇಂಧನ ಉತ್ಪಾದನೆಗಾಗಿ ಕೃಷಿ ಭೂಮಿಯ ಸ್ವಯಂ ಚಾಲಿತ ಪರಿವರ್ತನೆ ಪ್ರಮಾಣಪತ್ರ ನೀಡಲು ಕೂಡಾ ಕರ್ನಾಟಕ ಭೂ ಸುಧಾರಣೆ, ಇತರೆ ಕಾನೂನು ಮಸೂದೆ ಅವಕಾಶ ನೀಡಿದೆ.

ಇತರ ಮಸೂದೆಗಳು: ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕೂಡಲ ಸಂಗಮ ಅಭಿವೃದ್ಧಿ ಮಂಡಳಿ, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬನವಾಸಿ ಅಭಿವೃದ್ಧಿ ಪ್ರಾಧಿಕಾರಗಳಿಗೆ ಮುಖ್ಯಮಂತ್ರಿ ಅಥವಾ ಕಂದಾಯ ಮಂತ್ರಿ ಅಥವಾ ಮುಖ್ಯಮಂತ್ರಿ ಆಯ್ಕೆ ಮಾಡಿದ ಯಾರಾದರು ಸಚಿವರು ಪದನಿಮಿತ್ತ ಅಧ್ಯಕ್ಷರಾಗಿ ಮಾಡಲು ಅವಕಾಶ ಕಲ್ಪಿಸುವ ತಿದ್ದುಪಡಿ ಮಸೂದೆಗಳಿಗೂ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಲಿಫ್ಟ್, ಎಸ್ಕಲೇಟರ್ ಅಥವಾ ಪ್ಯಾಸೆಂಜರ್ ಕನ್ವೇಯರ್‌ಗಳನ್ನು ಭಾರತೀಯ ಗುಣಮಟ್ಟ ಬ್ಯೂರೊ ಪದ್ಧತಿಗಳ ಅಸ್ತಿತ್ವದಲ್ಲಿರುವ ಸಂಬಂಧಪಟ್ಟ ಸಂಹಿತೆ ಮತ್ತು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಕ್ರಮಗಳು) ವಿನಿಮಯಗಳ ಅನ್ವಯ ಸ್ಥಾಪಿಸಲು ನಿರ್ದೇಶಿಸುವ ಉದ್ದೇಶದ 'ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ಮಸೂದೆ, ಪ್ರವಾಸೋದ್ಯಮ ಉತ್ತೇಜನಕ್ಕೆ ಜಿಲ್ಲಾ ಮಟ್ಟದ ಮೇಲುಸ್ತುವಾರಿ ಸಮಿತಿ ರಚಿಸಲು ಅವಕಾಶ ಕಲ್ಪಿಸಲು ರೂಪಿಸಿದ 'ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ,ನಿಯಂತ್ರಣ) (ತಿದ್ದುಪಡಿ) ಮಸೂದೆ, ಎಸ್ಮಾ ವಿಧಿಸುವ ಅವಕಾಶವನ್ನು ಮುಂದಿನ 20 ವರ್ಷಗಳ ಅವಧಿ ವಿಸ್ತರಿಸಲು ಅವಕಾಶ ನೀಡುವ 'ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ (ತಿದ್ದುಪಡಿ) ಮಸೂದೆ, ರಾಜ್ಯದ ಬಹುಮಹಡಿ ಕಟ್ಟಡಗಳಿಗೆ ಶೇ 1ರಷ್ಟು ಅಗ್ನಿ ಸೆಸ್ ವಿಧಿಸಲು ಅವಕಾಶ ಮಾಡಿಕೊಡುವ 'ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಮಸೂದೆ'ಗೂ ಅಂಕಿತ ಹಾಕಿದ್ದಾರೆ.

'ಶಾಸಕ ಹರೀಶ್ ಡಾಬರ್‌ಮನ್ ನಾಯಿಯೇ'

ದಾವಣಗೆರೆ: 'ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಪಮೇರಿಯನ್ ನಾಯಿಗೆ ಹೋಲಿಸಿ ನಿಂದಿಸಿದ ಹರಿಹರದ ಬಿಜೆಪಿ ಶಾಸಕ ಬಿ.ಪಿ. ಹರೀಶ್ ಅವರ ವಿರುದ್ಧ ಬುಧವಾರ ಹರಿಹಾಯ್ದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, 'ಶಾಸಕ ಹರೀಶ್ ಅವರೇನು ಡಾಬರ್‌ಮನ್ ನಾಯಿಯೇ?' ಎಂದು ಪ್ರಶ್ನಿಸಿದರು.

'ಶಾಸಕರಾದವರು ಸ್ಥಾನದ ಘನತೆ, ಅರಿತು ನಡೆದುಕೊಳ್ಳಬೇಕು. ಜಿಲ್ಲಾ ಮಟ್ಟದ ಅಧಿಕಾರಿಯ ವಿರುದ್ಧ ನಾಲಿಗೆ ಹರಿಬಿಡಬಾರದು ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಸೈಬರ್ ಕಮಾಂಡ್ ಘಟಕ ರಚನೆ

ಒಂದನೇ ಪುಟದಿಂದ...

'ಈ ಸಂಸ್ಥೆ ಅಥವಾ ಕೇಂದ್ರವು ದೇಶದ ಮೊದಲ ಸೈಬರ್ ಕಮಾಂಡ್ ಘಟಕ (ಸಿಸಿಯು) ಅಥವಾ ಸಿಸಿಪಿ ಎಂಬ ಹೆಗ್ಗಳಿಕೆ ಎಂಬುದನ್ನು ಮರೆಯಬೇಡಿ' ಎಂದು ಸೂಚಿಸಿತು.

'ಸೈಬರ್ ಅಪರಾಧಗಳನ್ನು ಎದುರಿಸಲು ಮತ್ತು ಸೈಬರ್ ಭದ್ರತೆಯನ್ನು ಬಲಪಡಿಸಲು ಸ್ಥಾಪಿಸಿರುವ ಸದರಿ ಘಟಕವು, ಹೊಸ ಯುಗದ ತನಿಖಾ ಕೇಂದ್ರಗಳೊಂದಿಗೆ ಹೊಸ ನಮೂನೆಯ ತಾಂತ್ರಿಕ ಯುಗದ ಅಪರಾಧಗಳನ್ನು ನಿಭಾಯಿಸುವ ನಿಟ್ಟಿನಲ್ಲಿ ದಾಪುಗಾಲು ಹಾಕಬೇಕು. ಈ ಘಟಕದ ಅಧಿಕಾರಿಗಳು ಅರ್ಥಪೂರ್ಣವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಆಗ ಮಾತ್ರ ರಾಜ್ಯವು ಸೈಬರ್ ಅಪರಾಧದಿಂದ ಹೊರಹೊಮ್ಮುತ್ತಿರುವ ಅಪಸವ್ಯಗ-ಳನ್ನು ನಿಯಂತ್ರಿಸಲು ಸಾಧ್ಯ' ಎಂದು ನ್ಯಾಯಪೀಠ ಎಚ್ಚರಿಸಿದೆ.

'ಸಿಸಿಪಿ ಅಥವಾ ಸೈಬರ್ ಕಮಾಂಡೊ ಘಟಕ ಸೈಬರ್ ಅಪರಾಧದ ವಿರುದ್ಧದ ಹೋರಾಟದಲ್ಲಿ ಹೊಸ ಉದಯವನ್ನು ಸೂಚಿಸುವ ದೀಪವಾಗಿರಬೇಕು' ಎಂದು ಸ್ಪಷ್ಟಪಡಿಸಿದೆ. 'ನ್ಯಾಯಾಲಯ ನೀಡಿರುವ ಈ ಆದೇಶದ ಅನುಪಾಲನೆ ಕುರಿತಂತೆ ಕೈಗೊಳ್ಳಲಾಗುವ ಕ್ರಮಗಳನ್ನು ಇದೇ 24ಕ್ಕೆ ವಿವರಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಈ ಪ್ರಕರಣದಲ್ಲಿ ಅಮಿಕಸ್ ಕ್ಯೂರಿಯಾಗಿ ಕಾರ್ಯ ನಿರ್ವಹಿಸಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರು ನೀಡಿದ್ದ ಸಲಹೆಗಳನ್ನು ನ್ಯಾಯಪೀಠ ಸ್ವೀಕರಿಸಿದೆ. ಅಂತೆಯೇ, ಇದೇ ವೇಳೆ, ಮತ್ತೊಂದು ಸಮನ್ವಯ ನ್ಯಾಯಪೀಠದಲ್ಲಿ ಡಿಜಿಟಲ್ ಅಪರಾಧಗಳು ಅದರಲ್ಲೂ ಹಣಕಾಸಿನ ವಂಚನೆಯ ಸೈಬರ್ ಅಪರಾಧ ಪ್ರಕರಣಗಳಲ್ಲಿ ನಿಷ್ಕ್ರಿಯಗೊಂಡಿರುವ ಬ್ಯಾಂಕ್ ಖಾತೆಗಳ ಕುರಿತಾದ ಅರ್ಜಿಗಳ ವಿಚಾರಣೆ ನಡೆಯುತ್ತಿರುವುದನ್ನು ಮತ್ತು ಈ ಪ್ರಕರಣ ಅಮಿಕಸ್ ಕ್ಯೂರಿಯಾಗಿರುವ ಪಿ.ಪ್ರಸನ್ನ ಕುಮಾರ್, ನ್ಯಾಯಮೂರ್ತಿ ನಾಗಪ್ರಸನ್ನ ಅವರ ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಸಮನ್ವಯ ಪೀಠದಲ್ಲಿನ ಅರ್ಜಿಗಳ ಆದೇಶದ ವಿವರ ಸಲ್ಲಿಸಿ' ಎಂದು ಪ್ರಸನ್ನಕುಮಾರ್ ಅವರಿಗೆ ಸೂಚಿಸಿತು.

ಸಿಸಿಪಿ ಅಧಿಕಾರಿಗಳ ವರ್ಗಾವಣೆ ಬೇಡ

'ಸಿಸಿಯು ಅಥವಾ ಸಿಸಿಪಿ ಅಡಿಯಲ್ಲಿ ತರಲಾಗುವ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ಸರಿಯಲ್ಲ. ಈ ಘಟಕದ ಮುಖ್ಯಸ್ಥರಾಗಿರುವ ಪೊಲೀಸ್ ಮಹಾನಿರ್ದೇಶಕರನ್ನು, ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ, ವರ್ಗಾವಣೆ ಮಾಡಬಾರದು. ಇದರ ಮುಖ್ಯಸ್ಥ ಮತ್ತು ಅವರ ತಂಡವನ್ನು ಪೂರ್ವಾಪರ ಸಮಾಲೋಚನೆಯಿಲ್ಲದೆ ರಾತ್ರೋರಾತ್ರಿ ಸ್ಥಾನದಿಂದ ಕೆಳಗಿಳಿಸಬಾರದು. ಯಾವುದೇ ತನಿಖೆಗೆ ಸಿಸಿಯು ಅಧಿಕಾರಿಗಳ ಪುನರಾವರ್ತಿತ ಬದಲಾವಣೆಯಿಂದ ಅಡಚಣೆಯಾಗಬಾರದು' ಎಂದು ಪೀಠ ಸ್ಪಷ್ಟಪಡಿಸಿದೆ.

ಬಜೆಟ್ ಎಂಬುದು ನಿಮ್ಮ ಹಣವು ಎಲ್ಲಿಗೆ ಹೋಯಿತು ಎಂದು ಹೇಳುವ ಬದಲು, ಅದು ಎಲ್ಲಿಗೆ ಹೋಗಬೇಕು ಎಂಬುದನ್ನು ಹೇಳುತ್ತದೆ
ಡೇವ್ ರಾಮ್ಸೆ, ಹಣಕಾಸು ಸಲಹೆಗಾರ
ದುಡ್ಡಿನಂಥಾ ಮಾತು

ಜಿಎಸ್‌ಟಿ ಇಳಿಕೆ ಯಾರಿಗೆಲ್ಲ ಲಾಭ?



• ವಿ.ಕೆ.ವಿಜಯಕುಮಾರ್

ಜಿಎಸ್‌ಟಿ ಮಂಡಳಿಯು ಎಫ್‌ಎಂಸಿಜಿ, ವಾಹನ ಸೇರಿದಂತೆ ಹಲವು ಉತ್ಪನ್ನಗಳ ಮೇಲಿನ ತೆರಿಗೆಯನ್ನು ತಗ್ಗಿಸುವ ತೀರ್ಮಾನ ಕೈಗೊಂಡಿದೆ. ಉತ್ಪನ್ನಗಳ ಬೆಲೆ ಇಳಿಕೆಯು ತಕ್ಷಣದ ಪ್ರಯೋಜನವಾಗಿ ಜನಸಾಮಾನ್ಯರಿಗೆ ದೊರೆಯಲಿದೆ. ಆದರೆ, ಹೂಡಿಕೆದಾರರು ಎಲ್ಲಿ ಲಾಭ ಅರಸಬೇಕಿದೆ? ಇಲ್ಲಿದೆ ತಜ್ಞರ ವಿಶ್ಲೇಷಣೆ...

ಜಗತ್ತಿನಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ದೊಡ್ಡ ಅರ್ಥ ವ್ಯವಸ್ಥೆ ಎಂದು ಭಾರತದ ಅರ್ಥವ್ಯವಸ್ಥೆಯನ್ನು ಕಳೆದ ನಾಲ್ಕು ವರ್ಷಗಳಿಂದ ಗುರುತಿಸಲಾಗುತ್ತಿದೆ. ಆದರೆ ಅರ್ಥ ವ್ಯವಸ್ಥೆಯ ಬೆಳವಣಿಗೆಯ ವೇಗವು ತುಸು ಕಡಿಮೆ ಆಗಿರುವಂತಿದೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿನ ಅನಿಶ್ಚಿತತೆಗಳು ಹಾಗೂ ಅಮೆರಿಕವು ಭಾರತದ ಸರಕುಗಳ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕದ ಹಿನ್ನೆಲೆಯಲ್ಲಿ, 2025–26ನೇ ಹಣಕಾಸು ವರ್ಷದಲ್ಲಿ ಶೇಕಡ 6.5ರ ಬೆಳವಣಿಗೆಯ ಗುರಿಯನ್ನು ತಲುಪಲು ಆಗಲಿಕ್ಕಿಲ್ಲ.

ಬೆಳವಣಿಗೆಯ ಪ್ರಮಾಣವು ಶೇ 6.2ರ ಆಸುಪಾಸಿನಲ್ಲಿ ಇರಬಹುದು. ಅಂದರೆ, ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಉತ್ತೇಜನ ಬೇಕಾಗಿದೆ ಎಂಬುದು ಸ್ಪಷ್ಟ.

ನೀತಿ ನಿರ್ಧಾರಗಳನ್ನು ಕೈಗೊಳ್ಳುವ ವಿಚಾರದಲ್ಲಿ ಕೇಂದ್ರ ಸರ್ಕಾರ ಹಾಗೂ ಆರ್‌ಬಿಐ ಮುನ್ನೋಟದಿಂದ ಹೆಜ್ಜೆ ಇರಿಸುತ್ತಿವೆ. ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ (ವೇತನದಾರರಿಗೆ ₹12.75 ಲಕ್ಷದವರೆಗಿನ ಆದಾಯಕ್ಕೆ ವಿನಾಯಿತಿ) ನೀಡುವ ಬಜೆಟ್ ಮಂಡಿಸುವ ಮೂಲಕ ಈ ವರ್ಷದ ಆರಂಭ ಆಯಿತು. ಈ ವಿತ್ತೀಯ ಉತ್ತೇಜನಾ ಕ್ರಮಕ್ಕೆ ಪೂರಕವಾಗಿ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಒಟ್ಟು ಶೇ 1ರಷ್ಟು ತಗ್ಗಿಸಿತು. ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ತಗ್ಗಿಸಿತು. ಬೆಳವಣಿಗೆಯನ್ನು ಹೆಚ್ಚಿಸಲು, ಬೇಡಿಕೆಗೆ ಶಕ್ತಿ ನೀಡಲು, ಹೊಸ ಹೂಡಿಕೆಗಳಿಗೆ ಉತ್ತೇಜನ ನೀಡಲು ಹಣಕಾಸು ಮತ್ತು ವಿತ್ತೀಯ ನೆಲೆಯ ಈ ಬಲಿಷ್ಠ ಕ್ರಮಗಳು ನೆರವಾದವು.

ಆದಾಯ ತೆರಿಗೆ ವಿನಾಯಿತಿ ಮಿತಿ ಹೆಚ್ಚಿಸಿರುವುದು, ಮಧ್ಯಮ ವರ್ಗದ ಜನರ ಕೈಯಲ್ಲಿ ಖರ್ಚಿಗೆ ಹೆಚ್ಚು ಹಣ ಉಳಿಯುವಂತೆ ಮಾಡಿದ್ದಷ್ಟೇ ಅಲ್ಲದೆ, ಗ್ರಾಹಕರಲ್ಲಿನ ವಿಶ್ವಾಸವನ್ನು ಕೂಡ ಹೆಚ್ಚು ಮಾಡುವಂಥದ್ದು. ಇದು ಅರ್ಥ ವ್ಯವಸ್ಥೆಯಲ್ಲಿ ಬೇಡಿಕೆಯನ್ನು ಉಳಿಸಿಕೊಳ್ಳುವುದಕ್ಕೆ ಬಹಳ ಮಹತ್ವದ್ದು. ರೆಪೊ ದರದ ಇಳಿಕೆಯು ವ್ಯಕ್ತಿಗಳಿಗೆ ಹಾಗೂ ಉದ್ದಿಮೆಗಳಿಗೆ ಸಾಲದ ಮೇಲಿನ ಬಡ್ಡಿಯನ್ನು ತಗ್ಗಿಸುತ್ತದೆ. ಈ ಮೂಲಕ ಅದು ಸಾಲ ನೀಡಿಕೆ ಹೆಚ್ಚಳ ಹಾಗೂ ಬಂಡವಾಳ ಸೃಜನೆಗೆ ಪೂರಕ ಪರಿಸ್ಥಿತಿ ನಿರ್ಮಿಸಿದೆ. ಸಿಆರ್‌ಆರ್ ತಗ್ಗಿಸಿರುವ ಕ್ರಮವು ಬ್ಯಾಂಕಿಂಗ್ ವ್ಯವಸ್ಥೆಗೆ ಹೆಚ್ಚು ಹಣ ಲಭ್ಯವಾಗುವಂತೆ ಮಾಡುತ್ತದೆ. ಇದರಿಂದಾಗಿ ಹಣಕಾಸಿನ ಸಂಸ್ಥೆಗಳು ಇನ್ನಷ್ಟು ಮುಕ್ತವಾಗಿ ಸಾಲ ನೀಡಲು, ಅರ್ಥ ವ್ಯವಸ್ಥೆಯ ಉತ್ಪಾದಕ ವಲಯಗಳನ್ನು ಬೆಂಬಲಿಸಲು ಸಾಧ್ಯವಾಗುತ್ತದೆ. ಒಟ್ಟಾರೆಯಾಗಿ, ಈ ಸಂಘಟಿತ ಯತ್ನವು ನೀತಿಗಳಲ್ಲಿ ಹಾಗೂ ಉದ್ದೇಶಗಳಲ್ಲಿನ ಸ್ಪಷ್ಟತೆಯನ್ನು ಹೇಳುತ್ತಿದೆ.

ಸುಧಾರಣೆಗಳು ತ್ವರಿತಗತಿಯಲ್ಲಿ ಆಗುತ್ತಿರುವಂತೆ ಕಾಣುತ್ತಿದೆ. ಸ್ವಾತಂತ್ರ್ಯೋತ್ಸವದ ದಿನ ಮಾಡಿದ ಭಾಷಣದಲ್ಲಿ ಪ್ರಧಾನಿಯವರು ಜಿಎಸ್‌ಟಿ ವ್ಯವಸ್ಥೆಯಲ್ಲಿ ದೀಪಾವಳಿಗೆ ಮೊದಲು ಬದಲಾವಣೆಗಳನ್ನು ತರುವುದಾಗಿ ಹೇಳಿದರು. ಜಿಎಸ್‌ಟಿ ದರಗಳಲ್ಲಿ ಬದಲಾವಣೆ ತರುವ ಪ್ರಸ್ತಾವಕ್ಕೆ ಜಿಎಸ್‌ಟಿ ಮಂಡಳಿ ಒಪ್ಪಿಗೆ ನೀಡಿದೆ.

ಬೇಡಿಕೆಗೆ ಇಂಬು, ಬೆಳವಣಿಗೆಗೆ ಉತ್ತೇಜನ

ಹೂಡಿಕೆದಾರರ ದೃಷ್ಟಿಯಿಂದ ಹೇಳುವುದಾದರೆ, ಜಿಎಸ್‌ಟಿ ದರ ಇಳಿಕೆಯ ತಕ್ಷಣದ ಪರಿಣಾಮವಾಗಿ ಪ್ರಮುಖ ವಲಯಗಳಲ್ಲಿ ಬೇಡಿಕೆ ಹೆಚ್ಚಾಗುವ ಹಾಗೂ ಕಂಪನಿಗಳ ಲಾಭದಲ್ಲಿ ಏರಿಕೆ ಆಗುವ ಸಾಧ್ಯತೆ ಇದೆ. ಜಿಎಸ್‌ಟಿ ದರ ಇಳಿಕೆಯಿಂದಾಗಿ ಉತ್ಪನ್ನಗಳ ಹಾಗೂ ಸೇವೆಗಳ ಬೆಲೆಯು ಕಡಿಮೆಯಾಗುವ ನಿರೀಕ್ಷೆ ಇದೆ. ಇದು ಬೇಡಿಕೆ ಹೆಚ್ಚಳಕ್ಕೆ ನೆರವಾಗಬಹುದು. ಎಫ್‌ಎಂಸಿಜಿ, ಆಟೊಮೊಬೈಲ್, ಎಲೆಕ್ಟ್ರಾನಿಕ್ ಉಪಕರಣಗಳು, ಸಿಮೆಂಟ್, ವಿಮೆ ವಲಯಗಳು ಜಿಎಸ್‌ಟಿ ಇಳಿಕೆಯಿಂದಾಗಿ ಪ್ರಯೋಜನ ಪಡೆಯುವ ಸ್ಥಿತಿಯಲ್ಲಿವೆ. ಅತಿಹೆಚ್ಚಿನ ಪ್ರಯೋಜನವು ಆಟೊಮೊಬೈಲ್ ವಲಯಕ್ಕೆ ಸಿಗಲಿದೆ. ವಾಹನಗಳ ಮೇಲಿನ ತೆರಿಗೆಯನ್ನು ಶೇ 28ರ ಬದಲು ಶೇ 18ಕ್ಕೆ ನಿಗದಿ ಮಾಡಲಾಗಿದೆ.

ಕಡಿಮೆ ತೆರಿಗೆ ಹಾಗೂ ತತ್ಪರಿಣಾಮವಾಗಿ ವಾಹನಗಳ ಬೆಲೆಯಲ್ಲಿನ ಇಳಿಕೆಯು ಬೇಡಿಕೆಯನ್ನು ಹೆಚ್ಚಿಸಬಲ್ಲದು, ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಬಲ್ಲದು. ಜಿಎಸ್‌ಟಿ ಸರಳೀಕರಣವು ದೀರ್ಘಾವಧಿಯಲ್ಲಿ ಇನ್ನಷ್ಟು ಹೆಚ್ಚಿನ ಪ್ರಯೋಜನಗಳನ್ನು ತಂದುಕೊಡುವ ನಿರೀಕ್ಷೆ ಇದೆ. ಇವೆಲ್ಲವೂ ಅಲ್ಪಾವಧಿಯ ಅವಕಾಶಗಳನ್ನು ಅರಸುತ್ತಿರುವ ಹೂಡಿಕೆದಾರರಿಗೆ ಹಾಗೂ ಈ ವಲಯಗಳಲ್ಲಿ ಸುಸ್ಥಿರ ಬೆಳವಣಿಗೆಯ ಸಾಧ್ಯತೆಗಳನ್ನು ಅರಸುತ್ತಿರುವವರಿಗೆ ಒಳ್ಳೆಯದು.

ಹೂಡಿಕೆಯ ದೃಷ್ಟಿಯಿಂದ, ಜಿಎಸ್‌ಟಿ ಬದಲಾವಣೆಯು ಬಹಳ ಮಹತ್ವ ಪಡೆದುಕೊಳ್ಳುತ್ತದೆ. ಏಕೆಂದರೆ ಇದು ಗ್ರಾಹಕರು ಮಾಡುವ ವೆಚ್ಚಗಳ ಜೊತೆ, ಕಂಪನಿಗಳ ಲಾಭ–ನಷ್ಟದ ಜೊತೆ ನೇರ ನಂಟು ಹೊಂದಿದೆ. ಉದಾಹರಣೆಗೆ, ಬಹಳ ಕಡಿಮೆ ಪ್ರಮಾಣದ ಲಾಭದೊಂದಿಗೆ ಕಾರ್ಯಾಚರಣೆ ನಡೆಸುವ ಎಫ್‌ಎಂಸಿಜಿ ಕಂಪನಿಗಳು ತೆರಿಗೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಿ ತಮ್ಮ ಮಾರಾಟ ಪ್ರಮಾಣ ಹೆಚ್ಚಿಸಿಕೊಳ್ಳಬಹುದು. ಅಥವಾ ಅವು ತೆರಿಗೆ ಇಳಿಕೆಯಿಂದಾಗುವ ಉಳಿತಾಯದ ಒಂದು ಪಾಲನ್ನು ತಮ್ಮಲ್ಲೇ ಇರಿಸಿಕೊಂಡು ಲಾಭದ ಪ್ರಮಾಣ ಹೆಚ್ಚಿಸಿಕೊಳ್ಳಬಹುದು.

ಆಟೊಮೊಬೈಲ್ ಮಾರುಕಟ್ಟೆಯು ದರದಲ್ಲಿ ಆಗುವ ವ್ಯತ್ಯಾಸಗಳಿಗೆ ಬಹಳ ತೀವ್ರವಾಗಿ ಸ್ಪಂದಿಸುತ್ತದೆ. ಜಿಎಸ್‌ಟಿ ಇಳಿಕೆಯ ಕ್ರಮವು ವಾಹನಗಳ ಬೇಡಿಕೆಯನ್ನು ಹೆಚ್ಚಿಸಬಹುದು, ಅದರಲ್ಲೂ ಮುಖ್ಯವಾಗಿ ದ್ವಿಚಕ್ರ ವಾಹನಗಳು ಹಾಗೂ ಸಣ್ಣ ಕಾರುಗಳಿಗೆ ಬೇಡಿಕೆ ಹೆಚ್ಚಬಹುದು. ಅದೇ ರೀತಿಯಲ್ಲಿ ರೆಫ್ರಿಜರೇಟರ್, ವಾಷಿಂಗ್ ಮೆಷಿನ್, ಹವಾನಿಯಂತ್ರಕಗಳಿಗೆ ಹಬ್ಬದ ಋತುವಿನಲ್ಲಿ ಹೆಚ್ಚಿನ ಬೇಡಿಕೆ ವ್ಯಕ್ತವಾಗಬಹುದು. ಮನೆಗಳ ನಿರ್ಮಾಣ ಮತ್ತು ಮೂಲಸೌಕರ್ಯ ನಿರ್ಮಾಣ ಚಟುವಟಿಕೆಗಳಿಗೆ ಚುರುಕು ದೊರೆತು, ಹೆಚ್ಚಿನ ಜನ ವಿಮಾ ಉತ್ಪನ್ನಗಳನ್ನು ಹೊಂದಲು ಬಯಸಿ, ಸಿಮೆಂಟ್ ಹಾಗೂ ವಿಮಾ ವಲಯ ಕೂಡ ಹೆಚ್ಚಿನ ಬೇಡಿಕೆ ದಾಖಲಿಸಬಹುದು.

ವಿಸ್ತೃತವಾದ ನೆಲೆಯಲ್ಲಿ ಹೇಳಬೇಕು ಎಂದಾದರೆ, ಜಿಎಸ್‌ಟಿ ವ್ಯವಸ್ಥೆಯಲ್ಲಿ ದಕ್ಷತೆ ಹೆಚ್ಚಾಗಿ, ಜಿಎಸ್‌ಟಿ ವ್ಯವಸ್ಥೆಯು ಹೆಚ್ಚು ಸರಳಗೊಂಡು, ತೆರಿಗೆ ಸೋರಿಕೆಯು ಕಡಿಮೆ ಆಗಬಹುದು. ಇದರಿಂದಾಗಿ ಸರ್ಕಾರದ ವರಮಾನ ಹೆಚ್ಚಬಹುದು. ವಾಣಿಜ್ಯೋದ್ಯಮಗಳಿಗೆ ಉತ್ತಮ ವಾತಾವರಣ ಸೃಷ್ಟಿಯಾಗಬಹುದು. ಇದು ಹೂಡಿಕೆದಾರರಲ್ಲಿ ವಿಶ್ವಾಸವನ್ನು ಹೆಚ್ಚಿಸುತ್ತದೆ. ಒಟ್ಟಾರೆಯಾಗಿ ಹೇಳುವುದಿದ್ದರೆ, ಜಿಎಸ್‌ಟಿ ಇಳಿಕೆಯ ತೀರ್ಮಾನವು ಅಲ್ಪಾವಧಿಯಲ್ಲಿ ಬೇಡಿಕೆ ಆಧಾರಿತ ಅವಕಾಶಗಳನ್ನು ಸೃಷ್ಟಿಸುವುದಲ್ಲದೆ, ಸುಸ್ಥಿರವಾದ ವರಮಾನಕ್ಕೆ ದಾರಿ ಮಾಡಿಕೊಡುತ್ತದೆ. ಈ ಮೊದಲು ಉಲ್ಲೇಖಿಸಿದ ಉದ್ಯಮ ವಲಯಗಳು ಮಧ್ಯಮಾವಧಿ ಹಾಗೂ ದೀರ್ಘಾವಧಿಗೆ ಹೂಡಿಕೆಗೆ ಆಕರ್ಷಕವಾಗಿ ಕಾಣಲಾರಂಭಿಸುತ್ತವೆ.

ಲೇಖಕ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಮುಖ್ಯ ಹೂಡಿಕೆ ತಜ್ಞ

ಹೂಡಿಕೆ ದೃಷ್ಟಿಯಿಂದ ಎಲ್ಲಿದೆ ಅವಕಾಶ?

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಬದಲಾವಣೆಯ ತೀರ್ಮಾನಗಳಿಗೆ ದೇಶದ ಷೇರು ಮಾರುಕಟ್ಟೆಗಳು ಈಗಾಗಲೇ ಪ್ರತಿಕ್ರಿಯೆ ನೀಡಿವೆ. ಜಿಎಸ್‌ಟಿ ದರವನ್ನು ಶೇ 12ರಿಂದ ಶೇ 5ಕ್ಕೆ ಇಳಿಸುವ ತೀರ್ಮಾನಕ್ಕೆ ಎಫ್‌ಎಂಸಿಜಿ ಕಂಪನಿಗಳ ಷೇರುಗಳು ಧನಾತ್ಮಕವಾಗಿ ಸ್ಪಂದಿಸಿವೆ.

ಎಚ್‌ಯುಎಲ್, ಕೋಲ್ಗೇಟ್, ಬಿಕಾಜಿ, ಇಮಾಮಿ, ಡಾಬರ್ ಮತ್ತು ನೆಸ್ಲೆ ಕಂಪನಿಯ ಷೇರುಗಳಿಗೆ ಪ್ರಯೋಜನ ಆಗುವ ನಿರೀಕ್ಷೆ ಇದೆ. ಆದರೆ ಈ ಷೇರುಗಳು ಈಗಾಗಲೇ ದುಬಾರಿ ಮೌಲ್ಯ ಪಡೆದಿರುವ ಕಾರಣಕ್ಕೆ, ಅವುಗಳ ಮೌಲ್ಯವರ್ಧನೆಯ ಸಾಧ್ಯತೆ ಸೀಮಿತವಾಗಿದೆ.

ಸಣ್ಣ ಕಾರುಗಳು ಹಾಗೂ 350 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ದ್ವಿಚಕ್ರ ವಾಹನಗಳು ಜಿಎಸ್‌ಟಿ ಇಳಿಕೆಯ (ಶೇ 28ರಿಂದ ಶೇ 18ಕ್ಕೆ) ಗಣನೀಯ ಪ್ರಯೋಜನ ಪಡೆಯಲಿವೆ. ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಹೀರೊ ಮೋಟರ್ಸ್, ಟಿವಿಎಸ್, ಐಷರ್ ಮತ್ತು ಬಜಾಜ್ ಕಂಪನಿಗಳಿಗೆ ಇದರಿಂದ ಪ್ರಯೋಜನ ಆಗುತ್ತದೆ.

ಟಿ.ವಿ., ಹವಾನಿಯಂತ್ರಕ, ರೆಫ್ರಿಜರೇಟರ್, ವಾಷಿಂಗ್ ಮೆಷಿನ್ ಮೇಲಿನ ತೆರಿಗೆಯನ್ನು ಶೇ 28ರಿಂದ ಶೇ 18ಕ್ಕೆ ಇಳಿಸಲಾಗುತ್ತಿದೆ. ಕಂಪನಿಗಳಾದ ಬ್ಲೂ ಸ್ಟಾರ್, ವೋಲ್ಟಾಸ್, ಆ್ಯಂಬರ್, ಬಜಾಜ್ ಎಲೆಕ್ಟ್ರಿಕಲ್ಸ್, ವಿ-ಗಾರ್ಡ್, ಹಾಕಿನ್ಸ್ ಮತ್ತು ವರ್ಲ್‌ಪೂಲ್‌ಗೆ ಇದರಿಂದ ಪ್ರಯೋಜನ ಆಗಲಿದೆ.

ಸಿಮೆಂಟ್ ಕಂಪನಿಗಳು ಕೂಡ ಜಿಎಸ್‌ಟಿ ದರವನ್ನು ಶೇ 28ರಿಂದ ಶೇ 18ಕ್ಕೆ ತಗ್ಗಿಸುವ ತೀರ್ಮಾನದಿಂದಾಗಿ ಲಾಭ ಪಡೆದುಕೊಳ್ಳಲಿವೆ.

ಜಿಎಸ್‌ಟಿ ಸುಧಾರಣೆ, 2025ರ ಬಜೆಟ್‌ನಲ್ಲಿ ನೀಡಿರುವ ವಿತ್ತೀಯ ಉತ್ತೇಜನ, ಆರ್‌ಬಿಐ ನೀಡಿರುವ ಹಣಕಾಸಿನ ಉತ್ತೇಜನ ಒಟ್ಟಾಗಿ ದೇಶದ ಜಿಡಿಪಿ ಬೆಳವಣಿಗೆ ದರವನ್ನು ಹೆಚ್ಚಿಸಲಿವೆ. ಇದು 2026–27ನೇ ಹಣಕಾಸು ವರ್ಷದಲ್ಲಿ ಕಾರ್ಪೊರೇಟ್ ಕಂಪನಿಗಳ ಲಾಭ ಗಳಿಕೆ ಪ್ರಮಾಣವನ್ನು ಹೆಚ್ಚು ಮಾಡಬಹುದು. ಆ ಮೂಲಕ ಷೇರುಪೇಟೆಯಲ್ಲಿ ಗಳಿಕೆಯ ಓಟಕ್ಕೆ ನೆರವು ನೀಡಬಹುದು. ಆದರೆ, ಅಮೆರಿಕವು ವಿಧಿಸಿರುವ ಸುಂಕವು ಯಾವ ಬಗೆಯಲ್ಲಿ ಪರಿಣಾಮ ಬೀರುತ್ತದೆ, ದೇಶದ ರಫ್ತು ಮತ್ತು ಜಿಡಿಪಿ ಬೆಳವಣಿಗೆಯ ಮೇಲೆ ಹೇಗೆ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಗಮನಿಸಬೇಕಿದೆ.

‘ಲಾಂಗ್ ಟರ್ಮ್’ ಹೂಡಿಕೆ ಅಂದರೆ ಏನು?



ಮ್ಯೂಚುವಲ್ ಫಂಡ್‌ಗಳಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಹಣ ತೊಡಗಿಸುವವರಿಗೆ ಈಗಿನ ಸಂದರ್ಭದಲ್ಲಿ ಸಿಗುವ ಸಲಹೆಯೊಂದು ಹೀಗಿರುತ್ತದೆ: ‘ದೀರ್ಘಾವಧಿಗೆ ಹೂಡಿಕೆ ಮಾಡಿ, ನಿಮಗೆ ಹೂಡಿಕೆಯ ಮೇಲೆ ಹೆಚ್ಚಿನ ಪ್ರಮಾಣದ ಲಾಭ ಸಿಗುವ ಸಾಧ್ಯತೆ ಇರುತ್ತದೆ.’

ಆದರೆ ದೀರ್ಘಾವಧಿ ಅಂದರೆ ಏನು? ಹೂಡಿಕೆ ಸಲಹೆಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ, ಮಾತಿನ ಸಂದರ್ಭದಲ್ಲಿ ನೀಡುವ ಹಲವರು ‘ಲಾಂಗ್ ಟರ್ಮ್‌ಗೆ ಹೂಡಿಕೆ ಮಾಡಿ’ ಎಂದು ಹೇಳುತ್ತಾರಾದರೂ, ‘ಲಾಂಗ್ ಟರ್ಮ್’ ಅಂದರೆ ಏನು ಎಂಬುದನ್ನು ಸ್ಪಷ್ಟ ಪಡಿಸುವುದಿಲ್ಲ. ವಾಸ್ತವದಲ್ಲಿ ‘ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ದೀರ್ಘಾವಧಿಯ ಹೂಡಿಕೆ ಅಂದರೆ ಏನು, ಯಾವ ಅವಧಿ ದೀರ್ಘಾವಧಿ’ ಎಂಬ ಪ್ರಶ್ನೆಗೆ ಎಲ್ಲರೂ ಒಪ್ಪುವಂತಹ ಉತ್ತರ ಇಲ್ಲ ಎಂದು ತಜ್ಞರು ಹೇಳುತ್ತಾರೆ.

ಮಾಹಿತಿ ಕಣಜ

ತೆರಿಗೆ ಲೆಕ್ಕಾಚಾರದ ದೃಷ್ಟಿಯಿಂದ ನೋಡಿದರೆ, ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯ ಹೂಡಿಕೆಯನ್ನು ದೀರ್ಘಾವಧಿ ಹೂಡಿಕೆ ಎಂದೂ, ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಹೂಡಿಕೆಯನ್ನು ಅಲ್ಪಾವಧಿ ಹೂಡಿಕೆ ಎಂದೂ ಪರಿಗಣಿಸಲಾಗುತ್ತದೆ. ಆದರೆ ಲಾಭ ಗಳಿಕೆಯ ದೃಷ್ಟಿಕೋನದಿಂದ ಹೇಳುವುದಾದರೆ, ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯೇ ದೀರ್ಘಾವಧಿ ಎನ್ನಲು ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಹೂಡಿಕೆಗಳಿಂದ ಗಣನೀಯ ಲಾಭ ಸಿಗದೆ ಇರಬಹುದು.

ದೀರ್ಘಾವಧಿಗೆ ಹೂಡಿಕೆ ಮಾಡಿ ಎನ್ನುವುದರ ಬದಲಿಗೆ, ಗುರಿ ಆಧಾರಿತ ಹೂಡಿಕೆ ಮಾಡಿ ಎಂಬ ಸಲಹೆ ನೀಡುವ ಪದ್ಧತಿಯೊಂದು ಚಾಲ್ತಿಯಲ್ಲಿದೆ. ವ್ಯಕ್ತಿಯು ನಿರ್ದಿಷ್ಟ ಹಣಕಾಸಿನ ಗುರಿಯನ್ನು ತಲುಪುವ ಉದ್ದೇಶದೊಂದಿಗೆ ಹೂಡಿಕೆಯನ್ನು ಆರಂಭಿಸಬೇಕು, ಆ ಗುರಿಯನ್ನು ತಲುಪಿದ ನಂತರದಲ್ಲಿ ಹೂಡಿಕೆಯನ್ನು ನಗದೀಕರಿಸಿಕೊಳ್ಳಬಹುದು ಎಂದು ಈ ನೆಲೆಯಲ್ಲಿ ಸಲಹೆ ನೀಡುವವರು ಹೇಳುತ್ತಾರೆ. ಈ ತತ್ತ್ವದೊಂದಿಗೆ ಹೂಡಿಕೆ ಮಾಡುವವರಿಗೆ ‘ದೀರ್ಘಾವಧಿ’ ಹೂಡಿಕೆ ಎಂಬ ಮಾತು ಹೆಚ್ಚು ಅರ್ಥಪೂರ್ಣ ಎಂದು ಅನ್ನಿಸುವುದಿಲ್ಲ. ಅವರು ತಮ್ಮ ಹಣಕಾಸಿನ ಗುರಿ ಈಡೇರುವವರೆಗೆ ಹೂಡಿಕೆಯನ್ನು ಮುಂದುವರಿಸುತ್ತಾರೆ.

ಉದಾಹರಣೆಗೆ, ಕಾರು ಖರೀದಿಸಲು ನಿರ್ದಿಷ್ಟ ಮೊತ್ತ ಒಗ್ಗೂಡಿಸುವ ಉದ್ದೇಶದೊಂದಿಗೆ ಹೂಡಿಕೆ ಮಾಡುವ ವ್ಯಕ್ತಿಯು, ಆ ನಿರ್ದಿಷ್ಟ ಮೊತ್ತ ಸಂಗ್ರಹ ಆಗುವವರೆಗೆ ಹೂಡಿಕೆಯನ್ನು ಮುಂದುವರಿಸುತ್ತಾನೆ. ಅಲ್ಪಾವಧಿ, ದೀರ್ಘಾವಧಿ ಎಂಬ ಪದಗಳ ಬಗ್ಗೆ ಆತ ಹೆಚ್ಚು ಗಮನ ಕೊಡುವುದಿಲ್ಲ.

‘ಪ್ರತಿ ಹೂಡಿಕೆಗೂ ಒಂದು ಉದ್ದೇಶ ಇರಬೇಕು, ಒಂದು ಗುರಿ ಇರಬೇಕು’ ಎಂದು ವೈಯಕ್ತಿಕ ಹಣಕಾಸು ತಜ್ಞರಲ್ಲಿ ಹಲವರು ಹೇಳುವುದಿದೆ. ಅವರ ಮಾತಿಗೆ ಇರುವ ಮಹತ್ವವು ಈಗ ಹೇಳಿರುವ ನಿದರ್ಶನವನ್ನು ಅವಲೋಕಿಸಿದಾಗ ಗೊತ್ತಾಗಬಹುದು.

ಪಿಸಿಬಿಎಲ್ ಕೆಮಿಕಲ್

ಪಿಸಿಬಿಎಲ್ ಕೆಮಿಕಲ್ ಕಂಪನಿಯ ಷೇರುಮೌಲ್ಯವು ₹474ಕ್ಕೆ ತಲುಪಬಹುದು ಎಂದು ಪ್ರಭುದಾಸ್ ಲೀಲಾಧರ್ ಕ್ಯಾಪಿಟಲ್ ಬ್ರೋಕರೇಜ್ ಕಂಪನಿ ಅಂದಾಜು ಮಾಡಿದೆ. ಕಂಪನಿಯು ಈಚೆಗೆ ತನ್ನ ‘ಹೂಡಿಕೆದಾರರ ದಿನ’ವನ್ನು ಆಯೋಜಿಸಿತ್ತು. ಅಲ್ಲಿ ಕಂಪನಿಯ ಆಡಳಿತದ ಚುಕ್ಕಾಣಿ ಹಿಡಿದವರು, 2029–30ರವರೆಗಿನ ಕಾರ್ಯತಂತ್ರಗಳ ನೀಲನಕ್ಷೆಯನ್ನು ಹೂಡಿಕೆದಾರರ ಮುಂದಿರಿಸಿದ್ದಾರೆ.

ಕಂಪನಿಯು ತನ್ನ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳುವ ಬಗ್ಗೆ ವಿವರ ನೀಡಿದೆ. ನ್ಯಾನೊ ಸಿಲಿಕಾನ್ ಹಾಗೂ ಇತರ ಕೆಲವು ಹೆಚ್ಚಿನ ಮೌಲ್ಯದ ಉತ್ಪನ್ನಗಳ ತಯಾರಿಕೆಗೆ ಕಂಪನಿಯು ಕೈಹಾಕಲಿದೆ. ಇದು ಕಂಪನಿಯ ಬೆಳವಣಿಗೆಗೆ ಪ್ರಮುಖವಾಗಿ ನೆರವಿಗೆ ಬರಲಿದೆ ಎಂದು ಪ್ರಭುದಾಸ್ ಲೀಲಾಧರ್ ಅಂದಾಜು ಮಾಡಿದೆ.

ಬ್ರೋಕರೇಜ್ ಮಾತು

ಕಂಪನಿಯು ತನ್ನ ವರಮಾನವನ್ನು ದುಪ್ಪಟ್ಟು ಮಾಡಿಕೊಳ್ಳುವ ಗುರಿಯನ್ನು ಹೊಂದಿದೆ, ತೆರಿಗೆ ನಂತರದ ಲಾಭವನ್ನು (ಪಿಎಟಿ) ಐದು ಪಟ್ಟು ಹೆಚ್ಚು ಮಾಡಿಕೊಳ್ಳುವ ಗುರಿಯನ್ನು ಕೂಡ ಹೊಂದಿದೆ. ಸ್ಪೆಷಾಲಿಟಿ ಕೆಮಿಕಲ್‌ಗಳಿಂದ ಬರುವ ವರಮಾನದ ಪಾಲು 2024–25ರಲ್ಲಿ ಶೇ 28ರಷ್ಟು ಇರುವುದನ್ನು ಶೇ 45ಕ್ಕೆ ಹೆಚ್ಚಿಸುವ ಗುರಿಯನ್ನು ಅದು ಹೊಂದಿದೆ ಎಂದು ಪ್ರಭುದಾಸ್ ಲೀಲಾಧರ್ ಸಿದ್ಧಪಡಿಸಿರುವ ವರದಿಯಲ್ಲಿ ವಿವರಿಸಲಾಗಿದೆ.

ಕಂಪನಿಯು ತನ್ನ ಸ್ಪೆಷಾಲಿಟಿ ಕೆಮಿಕಲ್ ಉತ್ಪನ್ನಗಳ ವ್ಯಾಪ್ತಿಯನ್ನು ಹಿಗ್ಗಿಸುತ್ತಿದೆ, ಹೆಚ್ಚಿನ ಲಾಭ ಸಿಗುವ ನ್ಯಾನೊ ಸಿಲಿಕಾನ್‌ನಂತಹ ಉತ್ಪನ್ನಗಳನ್ನು ಕೂಡ ಕಂಪನಿಯು ತಯಾರಿಸಲಿದೆ. ಈ ಎಲ್ಲ ಕ್ರಮಗಳು ಮುಂದಿನ ತಲೆಮಾರಿನ ವಿಶೇಷ ಉತ್ಪನ್ನಗಳ ಕಡೆ ಕಂಪನಿಯು ಮುಖ ಮಾಡಿರುವುದನ್ನು ಹೇಳುತ್ತಿವೆ ಎಂದು ವರದಿಯು ವಿವರಿಸಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯ ಷೇರುಮೌಲ್ಯವು ₹388 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH: Prose

Gentleman of Rio en Medio

Think About The Text

8. At last, the problem of ownership was resolved. But it took a long time. What might be the reasons for it? Write a paragraph on it.

Ans: The story teller or Americans convinced the persons individually. The descendants have agreed to sell their trees to them. It was a long procedure to convince every one. At last they have agreed and sold the trees to American, The problem was solved but it took a long time.

9. Read the story and arrange the given events in the order in which they occur in the & text.

a) The story teller offered Don Anselmo more money than what had been agreed upon.
b) The children of Rio en Medio disturbed the peace of the Americ
c) The Americans bought the trees from the descendants of Don Anselmo
d) The story teller was surprised at the strange argument of Don Anselmo.
e) Don Anselmo lived up in Rio en Medio
f) The buyers renovated the house.
g) Don Anselmo signed the sale deed after the negotiation for 12 hundred dollars.
h) Don Anselmo felt offended when he– was offered more money.
i) The occupants of the house came up with lots of complaints about the children of Rio en Medio.

Ans: (e) (a) (h) (g) (f) (b) (i) (d) (c)

Enrich Your Vocabulary:

Task–1 : **Look for the words in the word maze which match with the given meaning. One is done for you. Note the number given in brakets is the number of letters in that word. Read across, down and diagonally.**

W	A	A	I	P	T	Q	M	R	H	G
T	J	N	D	R	F	O	E	D	V	B
H	S	L	I	D	K	W	R	T	S	N
K	I	O	S	M	O	B	L	K	H	M
R	O	K	C	P	P	O	P	P	A	R
B	D	P	O	R	C	H	A	R	D	T
V	K	I	V	O	D	M	O	O	U	Q
L	G	O	E	P	E	K	F	P	R	A
M	P	N	R	T	H	C	E	E	L	P
Q	A	T	Y	Y	L	W	R	R	P	D
C	R	B	X	L	S	V	N	T	O	C
M	O	L	A	F	P	U	Y	Y	R	B

(4) a long thin stick -
(9) finding something that was not known earlier discovery-
8) thing/things that someone owns –
7) a place where fruit trees are grown
5) ability to control people –

Ans:- (4): a long thin stick - Cane
(9) finding something that was not known earlier discovery- DISCOVERY
8) thing/things that someone owns – PROPERTY
7) a place where fruit trees are grown - ORCHARD
5) ability to control people - POWER

Task – 2: Find out the words in the given word maze and match with their meanings. Readacross, down and diagnally.

P	R	S	E	V	E	R	A	L	M
C	Z	Q	W	S	D	K	J	R	X
O	P	D	E	E	D	L	B	V	Y
M	M	X	F	G	O	A	R	N	P
P	A	T	C	K	C	E	A	B	[illegible]
L	O	E	S	L	U	P	T	D	[illegible]
A	U	R	H	X	M	E	E	O	Y
I	L	K	J	O	E	W	H	R	P
N	G	D	C	H	N	K	V	I	W
T	M	C	Q	O	T	M	Q	U	N
M	A	N	N	E	R	R	W	T	S

(9) to go with someone –
(6) the way in which something is done –
(9) unhappy about something –
(7) many- (Across)
(8) official record —
(4) price –
(4) agreement –

Ans:-
(9) to go with someone – ACCOMPANY
(6) the way in which something is done – MANNER
(9) unhappy about something – COMPLAINT
(7) many- SEVERAL
(8) official record — DOCUMENT
(4) price – RATE
(4) agreement – DEED.

Read and respond:

Read the passage carefully and answer the questions set on it.

A small crowd had gathered around the entrance to the park. His curiosity aroused, Robert crossed the road to see what was happening. He found that the centre of attraction was an old man with a performing monkey. The monkey's tricks, he soon discovered, were in no way remarkable. So, after throwing a few pennies in the dirty hat which the man had placed on the pavement, Robert moved off, along with other members of the crowd. At this point the man suddenly let out a loud cry. Everyone turned to see what had happened. The man was bending over his monkey, which now lay quite still on the pavement. He picked up the apparently lifeless body and holding it close to him, began to weep. A young man stepped forward from the crowd and taking some money from his pocket, dropped it into the hat. Robert and several other people did likewise, until the pennies in the hat were covered with silver coins. Meanwhile the man continued to hold the dead monkey in his arms and seemed to take no notice of what was going on about him. A few months later, Robert came across the old man again in another part of the city. The man had a monkey, bought no doubt with the money the crowd had given him. It did not, however, seem any better at its tricks than the previous one. Robert was pleased to see that the old man was still able to earn a living, though on this occasion, having partly paid for the monkey out of his own pocket, he did not feel inclined to throw any money into the hat.*(Contd)*

Biology

II PUC : BIOLOGY
PRINCIPLES OF INHERITANCE AND VARIATION

51. Give an example for the law of segregation?

Ans:- An example for the law of segregation is - Suppose a tall plant with a pair of alleles Tt produces about 100 gametes during reproduction, 50 gametes receive the gene T and the other 50 gametes receive the gene t. Thus, segregation takes place in equal ratios with reference to any given character and so the gametes maintain purity.

Hence this law is also, called the Law of purity of gametes.

52. Explain the Law of independent assortment briefly?

Ans:- In an organism with many characters, the genes for different characters undergo segregation independently. This means, the separation of genes for a character does not interfere in the separation of genes for the other character. Hence, they assort independently. This is possible because the genes for various characters are located on different loci or in different homologous chromosomes.

53. Briefly mentioned the contribution of T.H. Morgan in genetics.

Ans:- T.H. Morgan (1866-1945) was an American genetist who was awarded Nobel Prize in 1933 for his work.

(1) Morgan found fruitfly Drosophila melanogaster to be better material for experiments on genetics as it was easy to rear and multiply it throughout the year.
(2) He estabilished the presence of genes over the chromosomes.
(3) Morgan estabilished the principle of linkage and crossing over.
(4) He discovered sex linkage and criss-cross inheritance.
(5) He developed the technique of chromosome mapping.
(6) He observed mutations.
(7) In 1926, Morgan wrote a book “The theory of Gene”.

54. Mention some differences between Monohybird and Dihybird.

Ans:-

Monohybird	*Dihybird*
It is a cross made between individuals having contrasting traits in order to study the inheritance of a pair of alleles.	It is a cross made between individuals having contrasting traits in order to study the inheritance of a two pairs of alleles.
Phenotypic monohybrid ratio in F_2 generation is 3: 1.	Phenotypic dihybird ratio is 9 : 3 : 3 : 1.
Genotypic monohybrid ratio in F_2 generation is 1 : 2 : 1.	Genotypic mono-hybrid ratio in F_2 is 1:2:2:4:2:2:1:1:1.

55. The gene I that controls the ABO blood grouping in human beings has three alleles- I^A, I^B and i.

(a) How many different genotypes are likely to be present in the human population?

(b) Also, how many phenotypes are likely to be present in the human population?

Ans:- (a) Genotypes - Six
($I^A I^A$, $I^A i$, $I^B i$, $I^B I^B$, $I^A I^B$ ii)]

56. The gene I that controls the ABO blood grouping in human beings has three alleles- I^A, I^B and i.

(a) How many different genotypes are likely to be present in the human population?

(b) Also, how many phenotypes are likely to be present in the human population?

Ans:- (a) Genotypes - Six
($I^A I^A$, $I^A i$, $I^B i$, $I^B I^B$, $I^A I^B$ ii)]
(b) Phenotypes – Four (A, B, AB and O).

57. When red flowered *Antirrhinum* plant was crossed with a flowered *Antirrhinum* plant, the F_1 offspring had pink flowers. Mention

(a) the genotype of F_1 plants and

(b) the reason why it did not bear the parental red or white flower colour.

Ans:- (a) **Genotype of F_1 Offspring.**
Rr (or) RW (Pink Flower).

(b) The two alleles of red flower and white flower traits show incomplete dominance resulting in the appearance of pink flower.

Some questions for extra information:-

1. Write a note on blood group testing.

Ans:- The different blood groups in man can be identified by a simple test called as agglutinization test.

The antiserum A and B are raised against the corresponding antigens. A drop of each of antisera A and B are taken on separate clean slides. The blood of man to be identified is taken out by pricking the fingertip with sterile needle. A drop of blood is placed by the side of each of these antisera, then the blood and serum on both the slides are mixed with separate needles.

If the blood group shows coagulation with antiserum A, The blood group is identified as A.

If clumping is seen with antiserum B, the blood group is B.

If clumping is seen in both the antisera, the blood group identified as AB.

If there is no clumping with either A or B antisera, the blood group is O.

2. Write a note on Red Green colour blindness.

Ans:- Red green colour blindness is an example of sex linked genetic disease in humans.

Usually men suffer more from this disease than women because of their hemizygous nature. The X– linked recessive gene for colour blindness follows criss – cross inheritance or *(Contd...)*

‘ವಸೂಲಾತಿ ಆಯುಕ್ತರ ನೇಮಕ ಶೀಘ್ರ’

ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮಕ್ಕೆ ರಾಜ್ಯಪಾಲರ ಅಂಕಿತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗಣಿ ಅಕ್ರಮದ ವಿರುದ್ಧ ಕ್ರಮ ಕೈಗೊಳ್ಳಲು ಹೊಸ ಕಾನೂನು ಅನುಕೂಲ
- ಕನ್ನಡಿಗರ ಆಸ್ತಿಯನ್ನು ಕನ್ನಡಿಗರಿಗೆ ವಾಪಸ್ ತರುವ ಕೆಲಸ: ಸಚಿವ

ಗದಗ: ‘ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮಕ್ಕೆ ರಾಜ್ಯಪಾಲರು ಸೆ.9ರಂದು ಅಂಕಿತ ಹಾಕಿದ್ದಾರೆ’ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಬುಧವಾರ ತಿಳಿಸಿದರು.

‘ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದ, ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ಆದಷ್ಟು ಬೇಗ ವಸೂಲಾತಿ ಆಯುಕ್ತರನ್ನಾಗಿ ನೇಮಿಸಲಾಗುವುದು’ ಎಂದು ಸುದ್ದಿಗಾರರಿಗೆ ತಿಳಿಸಿದರು.


‘ವಸೂಲಿ ಆಯುಕ್ತರು ರಾಜ್ಯ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಜಪ್ತಿ, ವಶಪಡಿಸಿಕೊಳ್ಳುವಿಕೆ ಮತ್ತು ವಸೂಲಾತಿ ಕಾರ್ಯಾರಣೆಗಳ ಮೇಲ್ವಿಚಾರಣೆ ನಡೆಸುವುದು ಸೇರಿದಂತೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುತ್ತಾರೆ’ ಎಂದರು.

‘ವಸೂಲಾತಿಗೆ ಸಂಬಂಧಿಸಿದ ದಸ್ತಾವೇಜು, ದಾಖಲೆ ಅಥವಾ ಸ್ವತ್ತುಗಳಿಗೆ ಶೋಧ ನಡೆಸುವುದು, ಸ್ವತ್ತಿನ ತಾತ್ಕಾಲಿಕ ಜಪ್ತಿ, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದ ಮೇಲೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸುವ ಅಧಿಕಾರ ಹೊಂದಿರುತ್ತಾರೆ’ ಎಂದರು.

‘ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು, ಸಂಘಟಿತ ಒಳಸಂಚು ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು ಮತ್ತು ಜಪ್ತಿ ಮಾಡಲು ಸಂಬಂಧಿಸಿದ ಯಾವುದೇ ನ್ಯಾಯಾಲಯದ ಮುಂದೆ ಬಾಕಿ ಇರುವ ಎಲ್ಲ ಪ್ರಕರಣಗಳನ್ನು ವಸೂಲಾತಿ ಆಯುಕ್ತರಿಗೆ ವರ್ಗಾಯಿಸಲಾಗುವುದು’ ಎಂದು ತಿಳಿಸಿದರು.

‘ಗಣಿ ಅಕ್ರಮದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಹೊಸ ಕಾನೂನು ಅನುಕೂಲ ಮಾಡಿಕೊಡಲಿದೆ, ಸಮಯಕ್ಕೆ ಸರಿಯಾಗಿ ಕೆಲಸ ಮಾಡಿ ಕನ್ನಡಿಗರ ಆಸ್ತಿಯನ್ನು ಕನ್ನಡಿಗರಿಗೆ ವಾಪಸ್ ತರುವ ಕೆಲಸ ಮಾಡಲಾಗುವುದು’ ಎಂದರು.

‘ರೈತರಿಗೆ ಶೇ 10 ಪಾಲುದಾರಿಕೆ ಸಿಗಲಿ’


ಎಚ್. ಕೆ.ಪಾಟೀಲ

‘ಗದಗ ಜಿಲ್ಲೆಯಲ್ಲಿ ಪವನ ಹಾಗೂ ಸೌರ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಅವಕಾಶ ಇದೆ. ಇದರ ಲಾಭ ಇಲ್ಲಿನ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಗುವಂತಾಗಬೇಕು’ ಎಂದು ಜಿಲ್ಲಾಡಳಿತ ಭವನದಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಎಚ್.ಕೆ.ಪಾಟೀಲ ಆಗ್ರಹಿಸಿದರು.

‘ಪವನ ಮತ್ತು ಸೌರ ವಿದ್ಯುತ್ ಯೋಜನೆಗಳಿಗೆ ಜಮೀನು ನೀಡುವ ರೈತರಿಗೆ ಯೋಜನೆಯಲ್ಲಿ ಶೇ 10ರಷ್ಟು ಪಾಲುದಾರಿಕೆ ನೀಡಲು ಪರಿಶೀಲಿಸಿ, ಕ್ರಮವಹಿಸಬೇಕು. ವಿದ್ಯುತ್ ಉತ್ಪಾದಿಸುವ ಉತ್ತರ ಕನ್ನಡ ಜಿಲ್ಲೆಗೆ ಈ ಹಿಂದೆ ಕೆಲವು ರಿಯಾಯಿತಿ ನೀಡಲಾಗುತ್ತಿತ್ತು. ಅದೇ ರೀತಿ ಗದಗ ಜಿಲ್ಲೆಗೂ ನೆರವು ಸಿಗಬೇಕು’ ಎಂದು ಒತ್ತಾಯಿಸಿದರು.

ಸಿಇಟಿ: 3ನೇ ಸುತ್ತಿನ ತಾತ್ಕಾಲಿಕ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಹಾಗೂ ಎಂಜಿನಿಯರಿಂಗ್ ಸೇರಿದಂತೆ ಇತರ ಯುಜಿಸಿಇಟಿ ಕೋರ್ಸ್‌ಗಳ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬುಧವಾರ ಪ್ರಕಟಿಸಿದೆ.

ಫಲಿತಾಂಶಕ್ಕೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪಣೆ ಇದ್ದರೆ ಸೆ.11 ರಂದು ಬೆಳಿಗ್ಗೆ 11 ಗಂಟೆ ಒಳಗೆ ಇ-ಮೇಲ್ (keauthority-ka@nic.in) ಮೂಲಕ ಸಲ್ಲಿಸಬೇಕು. ಪರಿಶೀಲನೆ ಬಳಿಕ ಗುರುವಾರವೇ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಅಂತಿಮ ಫಲಿತಾಂಶ ಪ್ರಕಟಣೆಯ ನಂತರ ಎಂಜಿನಿಯರಿಂಗ್ ಸೇರಿದಂತೆ ಇತರ ಯುಜಿಸಿಇಟಿ ಕೋರ್ಸ್‌ಗಳ ಅಭ್ಯರ್ಥಿಗಳು ಸೆ.13ರೊಳಗೆ ಶುಲ್ಕ ಪಾವತಿಸಿ, ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಸಂಬಂಧಪಟ್ಟ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಅವರು ವಿವರಿಸಿದ್ದಾರೆ.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶದ ದಿನಾಂಕವನ್ನು ಎಂಸಿಸಿ ಮುಂದೂಡಿರುವ ಕಾರಣ ರಾಜ್ಯದಲ್ಲಿ ಕೂಡ ಈ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ಮುಂದಿನ ಸೂಚನೆಗಾಗಿ ಕಾಯಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಎಂಜಿನಿಯರಿಂಗ್ ಸೇರಿದಂತೆ ಯುಜಿಸಿಇಟಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಹಿಂದಿನ ಸುತ್ತಿನಲ್ಲಿ ಶುಲ್ಕ ಅಥವಾ ಠೇವಣಿ ಪಾವತಿಸಿದ್ದರೆ ಅದನ್ನು ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿನ ಶುಲ್ಕಕ್ಕೆ ಹೊಂದಾಣಿಕೆ ಮಾಡಲಾಗುವುದು ಎಂದು ಅವರು ವಿವರಿಸಿದ್ದಾರೆ.


ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ ಬುಧವಾರ ಅಧಿಕಾರ ಸ್ವೀಕರಿಸಿದ ಡಾ.ಬಿ. ದಿನೇಶ್ ಅವರಿಗೆ ಸಂಸ್ಥೆಯ ನಿಕಟಪೂರ್ವ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಶುಭಹಾರೈಸಿದರು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಜಿ.ಎ. ಅಡಗಟ್ಟಿ ಉಪಸ್ಥಿತರಿದ್ದರು

ಸೋಮನಾಥ ಮರಡೂರಗೆ ‘ಬಾಲೇಖಾನ್ ಮೆಮೋರಿಯಲ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಧಾರವಾಡ: ಬೆಂಗಳೂರಿನ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಫೌಂಡೇಷನ್ ಟ್ರಸ್ಟ್ ನೀಡುವ ‘ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಪ್ರಶಸ್ತಿ’ಗೆ ಹಿಂದೂಸ್ತಾನಿ ಗಾಯಕ ಸೋಮನಾಥ ಮರಡೂರ ಹಾಗೂ ‘ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಸಹಕಲಾವಿದ ಪ್ರಶಸ್ತಿ’ಗೆ ತಬಲಾ ವಾದಕ ಪುಣೆಯ ಮುಕೇಶ ಶ್ರೀಪತರಾವ್ ಜಾಧವ ಆಯ್ಕೆಯಾಗಿದ್ದಾರೆ.

ಉಸ್ತಾದ್ ಬಾಲೇಖಾನ್ ಪ್ರಶಸ್ತಿಯು ₹1 ಲಕ್ಷ ಹಾಗೂ ಸಹಕಲಾವಿದ ಪುರಸ್ಕಾರವು ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ. ಸೆಪ್ಟೆಂಬರ್ 14ರಂದು ಸೃಜನಾ ರಂಗಮಂದಿರದಲ್ಲಿ ನಡೆಯುವ ಸಂಗೀತೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಹಫೀಜ್ ಬಾಲೇಖಾನ್ ತಿಳಿಸಿದ್ದಾರೆ.

ಆನೇಕಲ್: ಹಾಸ್ಟೆಲ್ ವಿದ್ಯಾರ್ಥಿ ಮೇಲೆ ಸಹಪಾಠಿಗಳ ಲೈಂಗಿಕ ದೌರ್ಜನ್ಯ

ಆನೇಕಲ್: ಖಾಸಗಿ ಶಾಲೆಯೊಂದರ ವಿದ್ಯಾರ್ಥಿನಿಲಯಕ್ಕೆ ಹೊಸದಾಗಿ ಸೇರಿದ ವಿದ್ಯಾರ್ಥಿ ಮೇಲೆ ಸಹಪಾಠಿಗಳು ಮತ್ತು ಹಿರಿಯ ವಿದ್ಯಾರ್ಥಿಗಳು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ.

ಹಿರಿಯ ವಿದ್ಯಾರ್ಥಿಗಳು ರ‍್ಯಾಗಿಂಗ್ ನಡೆಸಿದ ಬಗ್ಗೆ ಹೊಸ ವಿದ್ಯಾರ್ಥಿ ವಾರ್ಡನ್ ಮತ್ತು ಪ್ರಾಂಶುಪಾಲರಿಗೆ ದೂರು ನೀಡಿದ್ದ. ಇದರಿಂದ ಸಿಟ್ಟಾದ ಆರು ವಿದ್ಯಾರ್ಥಿಗಳು ಆತನ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ದೈಹಿಕ ಹಲ್ಲೆ ನಡೆಸಿದ್ದಾರೆ. ವಿವಸ್ತ್ರಗೊಳಿಸಿ ನೃತ್ಯ ಮಾಡಿಸಿದ್ದಾರೆ ಎಂದು ತಿಳಿದು ಬಂದಿದೆ.

ಎರಡು ದಿನಗಳ ಹಿಂದೆ ನಡೆದಿರುವ ಈ ಘಟನೆ ಕುರಿತು ಕಿರುಕುಳಕ್ಕೆ ಒಳಗಾದ ವಿದ್ಯಾರ್ಥಿ ಮತ್ತು ಆತನ ತಂದೆ ಬುಧವಾರ ಬನ್ನೇರುಘಟ್ಟ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಐವರು ಬಾಲಕರು ಮತ್ತು ಶಾಲೆಯ ಪ್ರಾಚಾರ್ಯ, ಹಾಸ್ಟೆಲ್ ವಾರ್ಡನ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಐವರು ಬಾಲಕರನ್ನು ಬಾಲಮಂದಿರಕ್ಕೆ ಕಳಿಸಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ನಂಬುವುದರಿಂದ ನಾವೇನನ್ನೂ ಕಳೆದುಕೊಳ್ಳುವುದಿಲ್ಲ. ಅಪನಂಬಿಕೆಯಂಥ ಅಪಾಯಕಾರಿ ಮತ್ತೊಂದಿಲ್ಲ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಯುವಶಕ್ತಿಯ ಆಕ್ರೋಶ ಸ್ಫೋಟ ಮಗ್ಗುಲು ಬದಲಿಸಿದ ನೇಪಾಳ

ಶ್ರೀಲಂಕಾ ಮತ್ತು ಬಾಂಗ್ಲಾದೇಶದ ನಂತರ ದಕ್ಷಿಣ ಏಷ್ಯಾದಲ್ಲಿನ ಮತ್ತೊಂದು ದೇಶದ– ನೇಪಾಳದ– ಸರ್ಕಾರ ಸಾರ್ವಜನಿಕರ ಭಾರೀ ಪ್ರತಿಭಟನೆಯ ಆಕ್ರೋಶಕ್ಕೆ ಸಿಲುಕಿ ಪತನಗೊಂಡಿದೆ, ಪ್ರಧಾನಮಂತ್ರಿ ಅಧಿಕಾರದಿಂದ ಕೆಳಗಿಳಿದಿದ್ದಾರೆ. ಡಿಜಿಟಲ್ ತಂತ್ರಜ್ಞಾನವನ್ನು ತೀವ್ರವಾಗಿ ಹಚ್ಚಿಕೊಂಡಿರುವ 'ಜೆನ್–ಝೀ' ಯುವಶಕ್ತಿ ಪ್ರತಿಭಟನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಪ್ರತಿಭಟನಕಾರರ ಮೇಲೆ ಪೊಲೀಸರು ಕೈಗೊಂಡ ಕ್ರಮದಿಂದಾಗಿ ಅಪಾರ ಸಾವು–ನೋವು ಸಂಭವಿಸಿದೆ. ಸೆಪ್ಟೆಂಬರ್ 9ರಂದು ಸೇನೆ ಪರಿಸ್ಥಿತಿಯನ್ನು ತನ್ನ ತಹಬಂದಿಗೆ ತೆಗೆದುಕೊಳ್ಳುವ ಮೊದಲು ಕಠ್ಮಂಡು, ಪೊಖಾರ ಸೇರಿದಂತೆ ಹಲವು ಭಾಗಗಳಲ್ಲಿ ಎರಡು ದಿನಗಳ ಕಾಲ ಸಂಭವಿಸಿದ ಹಿಂಸಾಚಾರದಲ್ಲಿ ನೇಪಾಳ ನಲುಗಿದೆ. ಸಂಸತ್ ಭವನ, ಪ್ರಮುಖ ರಾಜಕಾರಣಿಗಳ ಮನೆಗಳು ಹಾಗೂ ರಾಜಕೀಯ ಪಕ್ಷಗಳ ಕಚೇರಿಗಳಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ. ಅರಾಜಕ ಪರಿಸ್ಥಿತಿ ತಲೆದೋರಿ, ಸಾರ್ವಜನಿಕ ಆಸ್ತಿ ದೊಡ್ಡಮಟ್ಟದಲ್ಲಿ ಹಾನಿಗೊಂಡಿದೆ. ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸುವ ವಿವೇಚನಾರಹಿತ ನಿರ್ಧಾರಕ್ಕೆ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಬೆಲೆ ತೆತ್ತಿದ್ದಾರೆ. 2015ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದ ಓಲಿ ಅವರು, ಪ್ರಧಾನಿಯಾಗಿ ತಮ್ಮ ನಾಲ್ಕನೇ ಅವಧಿ ಮುಗಿಸುವ ಮೊದಲೇ ಅಧಿಕಾರ ಸ್ಥಾನದಿಂದ ನಿರ್ಗಮಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಮೇಲೆ ಹೇರಿದ ನಿರ್ಬಂಧ ಸರ್ಕಾರದ ಪತನಕ್ಕೆ ಮೇಲ್ನೋಟದ ಕಾರಣವಾಗಿದ್ದರೂ, ಜನರ ಮನಸ್ಸಿನಾಳದ ಸಿಟ್ಟು ಮತ್ತು ಹತಾಶೆ ಪ್ರತಿಭಟನೆ ತೀವ್ರಗೊಳ್ಳಲು ಕಿಡಿಗಳಾಗಿ ಪರಿಣಮಿಸಿವೆ. ಭ್ರಷ್ಟ ಹಾಗೂ ಸ್ವಾರ್ಥಿ ಜನಪ್ರತಿನಿಧಿಗಳ ಬಗೆಗಿನ ಜನಾಕ್ರೋಶ ಕಿಚ್ಚಾಗಿ ಪರಿಣಮಿಸಿದೆ. ಸ್ವಹಿತಾಸಕ್ತಿಯಷ್ಟೇ ಮುಖ್ಯವಾದ ನಾಯಕರ ಶ್ರೀಮಂತಿಕೆ ನಿರಂತರವಾಗಿ ಒಂದೆಡೆ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಅಸಮಾನತೆ, ಬಡತನ ಹಾಗೂ ನಿರುದ್ಯೋಗದಂಥ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವ ವಿರೋಧಾಭಾಸ ನೇಪಾಳದ್ದಾಗಿದೆ. ಸಮಸ್ಯೆಗಳಿಂದ ರೋಸಿಹೋಗಿರುವ ಜನ ಬೀದಿಗಿಳಿಯಲು ಸಾಮಾಜಿಕ ಜಾಲತಾಣಗಳ ನಿರ್ಬಂಧ ನೇರ ಕಾರಣವಾಗಿ ಒದಗಿಬಂದಿದೆ.



ಭ್ರಷ್ಟ ರಾಜಕಾರಣಿಗಳ ಬಗೆಗಿನ ಜನಸಾಮಾನ್ಯರ ಭ್ರಮನಿರಸನ ಆಕ್ರೋಶವಾಗಿ ಸ್ಫೋಟಗೊಂಡು, ನೇಪಾಳದಲ್ಲಿನ ಚುನಾಯಿತ ಸರ್ಕಾರ ಪತನಗೊಂಡಿದೆ.

ನೇಪಾಳದ ನಾಗರಿಕರ ಪಾಲಿಗೆ ಸಾಮಾಜಿಕ ಮಾಧ್ಯಮ ಬರೀ ಮನರಂಜನೆಗೆ ಸೀಮಿತವಾಗಿ ಉಳಿದಿಲ್ಲ. ಸುದ್ದಿಮೂಲವಾಗಿ, ವಾಣಿಜ್ಯ ವಹಿವಾಟಿನ ವೇದಿಕೆಯಾಗಿ ಹಾಗೂ ಜೀವನೋಪಾಯದ ದಾರಿಯಾಗಿಯೂ ಬಹಳಷ್ಟು ನೇಪಾಳೀಯರಿಗೆ ಅತ್ಯವಶ್ಯವಾದ ಸಂಪರ್ಕ ಕೊಂಡಿಯಾಗಿದೆ. ರಾಜಕಾರಣಿಗಳು ಮತ್ತು ಅವರ ಪ್ರಭಾವದಡಿ ಗುರುತಿಸಿಕೊಂಡ ಮಕ್ಕಳ ಭ್ರಷ್ಟಾಚಾರ ಮತ್ತು ಲೋಲುಪ ಜೀವನವನ್ನು ಬಯಲು ಮಾಡುವ ಮಾಹಿತಿ ಮತ್ತು ವಿಡಿಯೊಗಳನ್ನು ಹಂಚಿಕೊಳ್ಳುವ ಮಾಧ್ಯಮವಾಗಿಯೂ ನೇಪಾಳದ ಜನಸಾಮಾನ್ಯರಿಗೆ ಸಾಮಾಜಿಕ ಜಾಲತಾಣಗಳು ಒದಗಿಬಂದಿವೆ. ಸರ್ಕಾರದ ವೈಫಲ್ಯ, ರಾಜಕಾರಣಿಗಳ ಸಮಯಸಾಧಕತನ, ದೇಶದಲ್ಲಿನ ಆರ್ಥಿಕ ಬಿಕ್ಕಟ್ಟು ಮತ್ತು ಸಮಾಜದಲ್ಲಿನ ಅಸಮಾನತೆಯನ್ನು ಬಯಲು ಮಾಡುವುದರಲ್ಲಿಯೂ ಸಾಮಾಜಿಕ ಮಾಧ್ಯಮಗಳದು ಪ್ರಮುಖ ಪಾತ್ರವಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಅನಾವರಣಗೊಂಡ ಸಮಾಜದ ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕಾಗಿದ್ದ ಓಲಿ ನೇತೃತ್ವದ ಸರ್ಕಾರ, ಮಾಧ್ಯಮ ಹಾಗೂ ಅದರ ಬಳಕೆದಾರರನ್ನು ಹತ್ತಿಕ್ಕಲು ಮುಂದಾಯಿತು. ಸರ್ಕಾರದ ಈ ಕ್ರಮ ಜನಮಾನಸದಲ್ಲಿದ್ದ ದೀರ್ಘಕಾಲದ ಅಸಮಾಧಾನ ಪ್ರತಿಭಟನೆಯ ರೂಪದಲ್ಲಿ ಸ್ಫೋಟಗೊಳ್ಳಲು ಕಾರಣವಾಯಿತು. ಆ ಪ್ರತಿಭಟನೆಗಳನ್ನು ಹತ್ತಿಕ್ಕಲು ಮುಂದಾದ ಸರ್ಕಾರ ಕೊನೆಗೆ ಅಧಿಕಾರದಿಂದ ಕೆಳಗಿಳಿಯುವ ಸ್ಥಿತಿ ತಂದುಕೊಂಡಿದೆ.

ನೇಪಾಳದಲ್ಲಿನ ಚುನಾಯಿತ ಸರ್ಕಾರವು ಯಾವುದೇ ಅನುಕಂಪಕ್ಕೆ ಅರ್ಹವಲ್ಲದ ದುಃಸ್ಥಿತಿಯನ್ನು ತನ್ನಷ್ಟಕ್ಕೆ ಆಹ್ವಾನಿಸಿಕೊಂಡಿದೆ. ಸದ್ಯದ ಬಿಕ್ಕಟ್ಟಿನ ಸಂದರ್ಭ ರಾಜಕೀಯ ಕಿಡಿಗೇಡಿತನದ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವಂತಿದೆ ಹಾಗೂ ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದಮನಗೊಳಿಸಲು ರಾಜಪರಿವಾರಕ್ಕೆ ಆಸ್ಪದ ಒದಗಿಸುವಂತಿದೆ. ಇಂತಹ ಪ್ರಯತ್ನಗಳಿಗೆ ವಿದೇಶಿ ಶಕ್ತಿಗಳ ನೆರವು ಕೂಡ ರಾಜಪರಿವಾರಕ್ಕೆ ದೊರೆಯುವ ಸಾಧ್ಯತೆ ಇದ್ದೇ ಇದೆ. ನೇಪಾಳದಲ್ಲಿನ ಅಸ್ಥಿರತೆ ಮತ್ತು ಆಡಳಿತದಲ್ಲಿನ ಬದಲಾವಣೆ, ಭಾರತ ಮತ್ತು ಚೀನಾಗಳ ಮೇಲೆ ಉಂಟು ಮಾಡಬಹುದಾದ ಪರಿಣಾಮ ಗೌಣವಾದುದು. ನೇಪಾಳದಲ್ಲಿನ ಗೊಂದಲದ ಪರಿಸ್ಥಿತಿ ಮತ್ತು ಆಡಳಿತದಲ್ಲಿನ ಬದಲಾವಣೆಯನ್ನು ಭಾರತ ಸಹಾನುಭೂತಿಯಿಂದ ನೋಡಬೇಕಾಗಿದೆ, ಎಚ್ಚರದಿಂದ ಗಮನಿಸಬೇಕಾಗಿದೆ ಹಾಗೂ ರಾಜತಾಂತ್ರಿಕ ಜಾಣ್ಮೆಯಿಂದ ವ್ಯವಹರಿಸಬೇಕಾಗಿದೆ. ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳು ಅಧಿಕಾರಕ್ಕೆ ಬಾರದಂತೆ ನೋಡಿಕೊಳ್ಳುವುದು ಹಾಗೂ ಭ್ರಷ್ಟರನ್ನು ಏಕಾಂಗಿಗಳನ್ನಾಗಿಸುವುದು ಎಲ್ಲರ ಆದ್ಯತೆ ಆಗಬೇಕಾಗಿದೆ. ಬಹುಪಕ್ಷೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬೆಂಬಲಿಸುವುದರ ಜೊತೆಗೆ ನೇಪಾಳದ ಆರ್ಥಿಕ ಸ್ಥಿತಿಯ ಪುನರುಜ್ಜೀವನಕ್ಕೆ ಅಗತ್ಯವಾದ ನೆರವು ನೀಡುವುದು ಹಾಗೂ ದಕ್ಷಿಣ ಏಷ್ಯಾದ ವ್ಯವಹಾರಗಳಲ್ಲಿ ಪಶ್ಚಿಮ ದೇಶಗಳ ಹಸ್ತಕ್ಷೇಪವನ್ನು ತಡೆಯುವುದು ನೆರೆಯ ದೇಶವಾಗಿ ಭಾರತದ ಕರ್ತವ್ಯವಾಗಿದೆ.

ಜಾಲತಾಣ

ಸರ್ವಾಧಿಕಾರ ಉಳಿಯುವುದಿಲ್ಲ

ಯುವಜನತೆ ರೊಚ್ಚಿಗೆದ್ದರೆ ಯಾವ ಸರ್ವಾಧಿಕಾರವೂ ಉಳಿಯುವುದಿಲ್ಲ. ಉದಾಹರಣೆ: ನೇಪಾಳ.



ಮಧು ಬಿ.ಎ.
ಸಿನಿಮಾ ಬರಹಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಸಾಮಾಜಿಕ ಮಾಧ್ಯಮಗಳ ಪ್ರಚಾರ ಮಾರ್ಗವು ಮತ್ತೊಂದು ಸರ್ಕಾರದ (ನೇಪಾಳ) ಪತನಕ್ಕೆ ಕಾರಣವಾಗಿದೆ. ಇದು ನಿಜಕ್ಕೂ ಕಳವಳಕಾರಿ. ಇದರ ಮುಂದಿನ ಗುರಿ ಯಾವುದು?

ಮನೀಶ್ ತಿವಾರಿ, ಕಾಂಗ್ರೆಸ್ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 11-9-2000

• **ಆಲಮಟ್ಟಿಯಲ್ಲಿ ಮೊದಲ ಬಾರಿಗೆ 515 ಮೀ. ನೀರು ಸಂಗ್ರಹ**

ವಿಜಾಪುರ, ಸೆಪ್ಟೆಂಬರ್ 10– ಆಲಮಟ್ಟಿ ಜಲಾಶಯದ ಮಟ್ಟ ಇಂದು ಮಧ್ಯಾಹ್ನ 515 ಮೀಟರ್‌ಗೆ ತಲುಪಿದೆ. ಸುಪ್ರೀಂ ಕೋರ್ಟ್ ಈಚೆಗೆ ಆಲಮಟ್ಟಿ ಜಲಾಶಯದಲ್ಲಿ 519.06ರವರೆಗೆ ನೀರು ಸಂಗ್ರಹಿಸಲು ರಾಜ್ಯ ಸರ್ಕಾರಕ್ಕೆ ಅನುಮತಿ ನೀಡಿದ್ದು, ಸದ್ಯ 515 ಮೀಟರ್‌ವರೆಗೆ ನೀರು ಸಂಗ್ರಹಿಸಲಾಗಿದೆ.

1997ರಲ್ಲಿ ಜಲಾಶಯದ ಮಟ್ಟ 514 ಮೀಟರ್ ಇತ್ತು. ಇದೇ ಮೊದಲ ಬಾರಿ 515 ಮೀಟರ್ ತಲುಪಿದೆ. ನೀರನ್ನು 519 ಮೀಟರ್‌ವರೆಗೆ ಸಂಗ್ರಹಿಸಿದರೆ ಹಿನ್ನೀರಿನಿಂದ ಹೆಚ್ಚಿಗೆ ಯಾವ ತೊಂದರೆಯೂ ಆಗಲಾರದು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪ್ರಾಯೋಗಿಕವಾಗಿ ಸದ್ಯಕ್ಕೆ 515 ಮೀಟರ್‌ವರೆಗಷ್ಟೇ ನೀರು ನಿಲ್ಲಿಸಲಾಗಿದೆ.

ನಾಳೆ ಬಾಗಲಕೋಟೆಗೆ ಭಾರಿ ನೀರಾವರಿ ಸಚಿವ ಎಚ್.ಕೆ. ಪಾಟೀಲ್ ಅವರು ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ಜಲಾಶಯದ ಮಟ್ಟವನ್ನು 519 ಮೀಟರ್‌ವರೆಗೆ ಹೆಚ್ಚಿಸುವ ಬಗ್ಗೆ ನಿರ್ಧರಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಸೋಮವಾರ, 11-9-1950


• **ತ್ರಿವೇಂಡ್ರಂನಲ್ಲಿ ಆಹಾರದ ಬಿಕ್ಕಟ್ಟು**

ತ್ರಿವೇಂಡ್ರಂ, ಸೆಪ್ಟೆಂಬರ್ 10– ಪಟ್ಟಣದಲ್ಲಿ ಆಹಾರದ ಬಿಕ್ಕಟ್ಟು ತಲೆದೋರಿದ್ದು, ಬಹಳಷ್ಟು ನಿವಾಸಿಗಳು ತೊಂದರೆಗೆ ಸಿಲುಕಿದ್ದಾರೆ. ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಮೊದಲ ಬಾರಿಗೆ ಈ ಬಿಕ್ಕಟ್ಟು ಸಂಭವಿಸಿದೆ.

ಪ್ರತಿ ವ್ಯಕ್ತಿಗೆ ಸೀಮಿತ ಪ್ರಮಾಣದ ಅಕ್ಕಿಯನ್ನು ಇಂದು ವಿತರಿಸಲಾಯಿತು. ಪಡಿತರ ಚೀಟಿದಾರರು, ಹೆಚ್ಚಿನ ಪಡಿತರ ಪದಾರ್ಥ ಲಭ್ಯವಿದೆಯೇ ಎಂಬ ಬಗ್ಗೆ ಅಂಗಡಿಗಳಿಗೆ ಭೇಟಿ ನೀಡಿ ವಿಚಾರಿಸಿದರು.

'10 ಹಾಗೂ 12 ವರ್ಷದ ಇಬ್ಬರು ಮಕ್ಕಳು ಇಲ್ಲಿನ ಬೀದಿಯಲ್ಲಿ ಆಹಾರ ಇಲ್ಲದೆ ಪ್ರಜ್ಞೆ ತಪ್ಪಿದ್ದರು. ಕಳೆದ ವಾರ ಪಡಿತರ ವಿತರಿಸಿರಲಿಲ್ಲ. ಕಳೆದ ನಾಲ್ಕು ದಿನಗಳಿಂದ ನಮಗೆ ಅಕ್ಕಿ, ಕುಡಿಯುವ ನೀರು ಪೂರೈಕೆಯೂ ಸ್ಥಗಿತಗೊಂಡಿದೆ' ಎಂದು ವ್ಯಕ್ತಿಯೊಬ್ಬರು ತಿಳಿಸಿದರು.

ಗುಜರಿ ಲೋಕದ ಜಗದ್ಗುರು



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

> ಬಳಸಿ ಬಿಸಾಕುವ ಆರ್ಥಿಕತೆಯ ಸಂಕೇತವಾಗಿದ್ದ ವಿಶ್ವ ವಾಣಿಜ್ಯ ಕೇಂದ್ರವೇನೊ ನೆಲಸಮವಾಗಿ ಕಾಲು ಶತಮಾನವೇ ಕಳೆದಿದೆ. ಮಾನವಕುಲ ಉಳಿಯಬೇಕೆಂದಿದ್ದರೆ ಅದಕ್ಕೆ ಬದಲಿಯಾಗಿ ಮರುಬಳಕೆಯ 'ವರ್ತುಲ ಆರ್ಥಿಕತೆ' ಜಾರಿಗೆ ಬರುತ್ತಿಲ್ಲ. ವಿಜ್ಞಾನ, ತಂತ್ರಜ್ಞಾನವನ್ನು ಮುಷ್ಟಿಯಲ್ಲಿ ಇಟ್ಟುಕೊಂಡವರು ಬೇರೆ ಲೋಕದತ್ತ ಕಣ್ಣಿಟ್ಟಿದ್ದಾರೆ.

ಜಗತ್ತಿನ ಅತಿದೊಡ್ಡ ವಿಧ್ವಂಸಕ ಕೃತ್ಯದ 25ನೇ ವರ್ಷ ಇಂದು ಆರಂಭವಾಗುತ್ತಿದೆ. 2001ರ ಇದೇ ಸೆಪ್ಟೆಂಬರ್ 11ರಂದು ಪ್ರಯಾಣಿಕರಿದ್ದ ನಾಲ್ಕು ವಿಮಾನಗಳನ್ನು ಅಲ್‌ಖೈದಾ ಉಗ್ರರು ಅಪಹರಿಸಿ ಅವನ್ನೇ ಕ್ಷಿಪಣಿಗಳಂತೆ ಪ್ರಯೋಗಿಸಿದರು. ಎರಡು ವಿಮಾನಗಳನ್ನು ನ್ಯೂಯಾರ್ಕ್ ನಗರದ ವಿಶ್ವ ವಾಣಿಜ್ಯ ಕೇಂದ್ರದ 110 ಅಂತಸ್ತುಗಳ ಜೋಡಿ ಕಟ್ಟಡಕ್ಕೆ ಡಿಕ್ಕಿ ಹೊಡೆಸಲಾಯಿತು. ಮೂರನೆಯದನ್ನು ವಾಷಿಂಗ್ಟನ್‌ನಲ್ಲಿರುವ ಪೆಂಟಾಗನ್ ಹೆಸರಿನ ಸರ್ಕಾರಿ ಗೂಢಚಾರ ಕಚೇರಿಗೆ ನುಗ್ಗಿಸಿದರೆ, ನಾಲ್ಕನೆಯದು ಪ್ರಾಯಶಃ ಶ್ವೇತಭವನದ ಕಡೆ ಧಾವಿಸುತ್ತಿತ್ತು. ಆದರೆ, ಆ ವೇಳೆಗೆ ಇತರ ಮೂರು ವಿಮಾನಗಳ ದುರ್ದೆಸೆಯ ಸುದ್ದಿ ಗೊತ್ತಾಗಿದ್ದರಿಂದ ಪ್ರಯಾಣಿಕರ ಪ್ರತಿರೋಧದಿಂದ ಅದು ಪೆನ್ಸಿಲ್ವೇನಿಯಾದಲ್ಲಿ ನೆಲಕ್ಕೆ ಅಪ್ಪಳಿಸಿತು.

ಅದುವರೆಗೆ ಜಗತ್ತಿನ ಅತಿ ಎತ್ತರದ ಕಟ್ಟಡಗಳೆಂದೇ ಹೆಸರಾಗಿದ್ದ ಆ ಜೋಡಿ ಕಟ್ಟಡದ ಕುಸಿತದಿಂದಾಗಿ ಅದೇ ಸಂಕೀರ್ಣದಲ್ಲಿದ್ದ ಇತರ ಐದು ಕಟ್ಟಡಗಳೂ ಧ್ವಂಸವಾದವು. ಒಟ್ಟು 92 ದೇಶಗಳ 2,977 ಜನರು ನಿಧನರಾದರು. ಪರಿಹಾರ ಕಾರ್ಯಗಳಲ್ಲಿ ಭಾಗಿಯಾಗಿದ್ದ ಅಗ್ನಿಶಾಮಕ ದಳದ 343, ಪೊಲೀಸರ 72 ಸಿಬ್ಬಂದಿ ಕೂಡ ಅಸುನೀಗಿದರು. ಅಮೆರಿಕ ಹೂಂಕರಿಸಿತು. ಭಯೋತ್ಪಾತದ ಹುಟ್ಟಡಗಿಸಲೆಂದು ಅಫ್ಗಾನಿಸ್ತಾನ ಮತ್ತು ಇರಾಕ್ ಮೇಲೆ ದಾಳಿ ನಡೆಸಿ ಸರ್ಕಾರಿ ಭಯೋತ್ಪಾತದ ವಿರಾಟ್ ಸ್ವರೂಪವನ್ನೇ ತೋರಿತು. ಈ ಪ್ರತಿದಾಳಿಯಿಂದಾಗಿ ಒಟ್ಟೂ 45 ಲಕ್ಷ ಜನ ಹತರಾದರೆಂದು ಅಂದಾಜು ಮಾಡಲಾಗಿದೆ.

('ನೈನ್ ಇಲೆವನ್' ಹೆಸರಿನ ಈ ದಿನಾಂಕವನ್ನು ನಾವು 11/9 ಎಂದು ಬರೆದರೆ, ಅಮೆರಿಕದಲ್ಲಿ ಅದನ್ನೇ 9/11 ಎಂದು ಬರೆಯುತ್ತಾರೆ. ಜಗತ್ತಿನೆಲ್ಲೆಡೆ ತೂಕ ಅಳತೆಗೆ ಮೆಟ್ರಿಕ್ ವಿಧಾನ ಜಾರಿಗೆ ಬಂದರೆ ಅಮೆರಿಕ ಇನ್ನೂ ಇಂಚು, ಮೈಲು, ಔನ್ಸು, ಪೌಂಡು, ಫ್ಯಾರನ್‌ಹೀಟ್‌ಗಳಲ್ಲೇ ಇದೆ.)

ಭಯೋತ್ಪಾತದ ಹುಟ್ಟಡಗಿತೆ ಎಂಬ ಪ್ರಶ್ನೆ ಹೇಗೂ ಇರಲಿ. ಈ ದಾಳಿ ನಂತರ ವಿಜ್ಞಾನ–ತಂತ್ರಜ್ಞಾನದ ಮುನ್ನೆಗೆತಕ್ಕೆ ಬಂಡವಾಳ ಭರಪೂರ ಹರಿದು ಬಂತು. ವಿಮಾನಯಾನದ ಭದ್ರತಾ ವ್ಯವಸ್ಥೆಗಳಲ್ಲಿ ಭಾರೀ ಸುಧಾರಣೆಗಳಾದವು. ಪೈಲಟ್ ಕೂರುವ ಕಾಕ್‌ಪಿಟ್‌ಗಳು ಅಭೇದ್ಯವಾದವು. ಸೂಟ್‌ಕೇಸ್‌ಗಳಲ್ಲಿನ ಕೆಮಿಕಲ್ ಪತ್ತೆಗೆ ಮತ್ತು ಅವಶೇಷಗಳ ಅಡಿ ಸಿಲುಕಿದ ಜೀವಿಗಳ ಪತ್ತೆಗೆ ರೊಬಾಟಿಕ್ ಮೂಗು ಬಂತು. ಧ್ವಂಸ ತಡೆಯ ತುರ್ತು ನೆರವಿಗೆಂದು ಡ್ರೋನ್ ತಂತ್ರಜ್ಞಾನಕ್ಕೆ ರೆಕ್ಕೆಪುಕ್ಕ ಬಂತು. ಗಗನಚುಂಬಿಗಳಲ್ಲಿ ನಿರ್ಮಾಣ ವ್ಯವಸ್ಥೆಗಳು ಬಲಗೊಂಡವು. ಬೆಂಕಿ ನಿರೋಧಕ ಸಾಮಗ್ರಿಗಳ ಉತ್ಪಾದನೆಯಲ್ಲಿ ಹೊಸ ಹೊಸ ಸಂಶೋಧನೆಗಳಾದವು. ಶವಗಳ ಗುರುತು ಪತ್ತೆಗೆಂದು ವಿಧಿವಿಜ್ಞಾನದಲ್ಲಿ ಭಾರೀ ಸುಧಾರಣೆಗಳಾಗಿ ಡಿಎನ್‌ಎ ತಂತ್ರಜ್ಞಾನ ಬಳಕೆಗೆ ಬಂತು. ದುರಂತದಲ್ಲಿ ಸಿಲುಕಿದವರ ನೆರವಿಗೆ ಧಾವಿಸುವ ಯೋಧರಿಗೆ ಹೊಸ ಪರಿಕರಗಳು ಬಂದವು. ಸಂತ್ರಸ್ತರ ಮಾನಸಿಕ ಆಘಾತ (ಟ್ರಾಮಾ) ಉಪಶಮನಕ್ಕೆ ಹೊಸ ಔಷಧಗಳು, ಶುಶ್ರೂಷಾ ವಿಧಾನಗಳು ಜಾರಿಗೆ ಬಂದವು.

ಅಂತೂ ಈ ಜೋಡಿ ಕಟ್ಟಡದ ಕುಸಿತದಿಂದ ತಂತ್ರಜ್ಞಾನ ಪುಟನೆಗೆಯಿತು. ಅದರ ಲಾಭ ಎಲ್ಲ ದೇಶಗಳಿಗೂ ಸಿಗುವಂತಾಯಿತು. ಭಾರತಕ್ಕೆ ಏನು ಬಂತು? ಕುಸಿದ ಆ ಕಟ್ಟಡಗಳ ಲೋಹದ 950 ಟನ್ ಅವಶೇಷಗಳು ಬಂದವು! ತುಸು ಭಾಗ ಚೀನಾಕ್ಕೂ ಬಂತು. ಅಮೆರಿಕದ ಯಾರೂ ಅದನ್ನು ಬಳಸಲು ಸಿದ್ಧವಿರಲಿಲ್ಲ. ಏಕೆಂದರೆ, 70ರ ದಶಕದ ಕಟ್ಟಡಗಳ ನಿರ್ಮಾಣದಲ್ಲಿ ಬಳಸಲಾಗಿದ್ದ ಸಾಮಗ್ರಿಗಳಲ್ಲಿ ಸೀಸ, ಕಲ್ನಾರು, ಕ್ಯಾಡ್ಮಿಯಂ, ಆರ್ಸೆನಿಕ್ ಮುಂತಾದ ನಂಜುಕಾರಕ ದ್ರವ್ಯಗಳಿದ್ದವು. ವಿಕಿರಣ ಸೂಸುವ ಸಲಕರಣೆಗಳಿದ್ದವು. ಡಿಕ್ಕಿಯಿಂದಾಗಿ ವಿಮಾನಗಳಲ್ಲಿದ್ದ ತಲಾ 90 ಸಾವಿರ ಲೀಟರ್ ಇಂಧನ ದ್ರವಪಾತ ಭುಗಿಲೆದ್ದು ಲಕ್ಷಾಂತರ ಎಲೆಕ್ಟ್ರಾನಿಕ್ ಮತ್ತು ಲೋಹದ ವಸ್ತು, ಪ್ಲಾಸ್ಟಿಕ್ ಬಿಡಿಭಾಗಗಳೆಲ್ಲ ಕರಗಿ ಕಲಸಿದ್ದವು. ಅಮೆರಿಕದ ಯಾವ ರಾಜ್ಯದಲ್ಲೂ ಅಂಥ ವಿಷಪೂರಿತ, ವಿಕಿರಣಪೂರಿತ ತ್ಯಾಜ್ಯಗಳ ವಿಲೇವಾರಿಗೆ ಅವಕಾಶ ಇರಲಿಲ್ಲ.

ಗುಜರಿ ವಸ್ತುಗಳಮಟ್ಟಿಗೆ ನಮ್ಮ ದೇಶ 'ಜಾಗತಿಕ ಸುರಿಹೊಂಡ' ಎನ್ನಿಸಿದೆ. ದೇಶ–ವಿದೇಶಗಳಿಂದ ನಾನಾ ಬಗೆಯ ತ್ಯಾಜ್ಯಗಳನ್ನು ತರಿಸಿಕೊಂಡು ಸಂಸ್ಕರಿಸಿ ವಿಲೇವಾರಿ ಮಾಡುವ ವ್ಯಾಪಕ ವ್ಯವಸ್ಥೆ ನಮ್ಮಲ್ಲಿದೆ. ಗುಜರಿ ಮರುಬಳಕೆಯ ಬಹುಕೋಟ್ಯಧೀಶ ಉದ್ಯಮಿಗಳಿದ್ದಾರೆ. ಅಫ್ಗಾನಿಸ್ತಾನ, ಟರ್ಕಿ, ಇರಾಕ್ ಮತ್ತು ನಮ್ಮದೇ ಗಡಿಭಾಗಗಳಲ್ಲಿ ಶೆಲ್ ದಾಳಿ ನಡೆದಾಗ ಸಿಡಿದ ಅಥವಾ ಸಿಡಿಯದೇ ಇದ್ದ ಲೋಹಗಳೂ ಕದ್ದುಮುಚ್ಚಿ ನಮ್ಮ ಕುಲುಮೆಗಳಿಗೇ ಬರುತ್ತಿವೆ. ಶ್ರೀಮಂತ ದೇಶಗಳ ಪ್ಲಾಸ್ಟಿಕ್ ತ್ಯಾಜ್ಯಗಳು ಹಡಗನ್ನೇರಿ ಇಲ್ಲಿಗೆ ಬರುತ್ತವೆ. ಅದಕ್ಕೆ ನಿಷೇಧ ಹಾಕಲಾಗಿದೆಯಾದರೂ, ಕಳೆದ ವರ್ಷ 1,984 ಹಡಗು ಭರ್ತಿ ಪ್ಲಾಸ್ಟಿಕ್ ಬಂದಿದೆ. ಹಳೇ ಹಡಗುಗಳಂತೂ ಬರುತ್ತಲೇ ಇವೆ. ರಿಪೇರಿ ಸಾಧ್ಯವೇ ಇಲ್ಲ ಎಂಬಂಥ ಹಡಗುಗಳು ಸಪ್ತ ಸಾಗರಗಳಲ್ಲಿ ಎಲ್ಲೇ ನಿಂತಿದ್ದರೂ, ಅವುಗಳ ಅಂತಿಮ ಸಂಸ್ಕಾರ ಗುಜರಾತಿನ ಅಲಂಗ್ ಬಂದರಿನಲ್ಲೇ ಆಗುತ್ತದೆ (ಅಂಥ ಹಳೇ ಹಡಗುಗಳಲ್ಲಿ ನಂಜುಕಾರಕ ಸಾಮಗ್ರಿಗಳು, ಕೊಳೆತೈಲಗಳೂ ಇರುವುದರಿಂದ ಅಂತರರಾಷ್ಟ್ರೀಯ ಕಾನೂನುಗಳ ಪ್ರಕಾರ ಅವನ್ನು ಸಮುದ್ರದಲ್ಲೇ ಮುಳುಗಿಸುವಂತಿಲ್ಲ). ಅಲಂಗ್ ಬಂದರನ್ನು 'ಮುದಿ ಹಡಗುಗಳ ಜಾಗತಿಕ ಕಸಾಯಿಖಾನೆ' ಎಂದೇ ಕರೆಯಲಾಗುತ್ತದೆ.

ಗುಜರಿ ವಸ್ತುಗಳನ್ನು ವಿಂಗಡಿಸಿ, ಮಾಲಿನ್ಯ ಹಬ್ಬಿಸದೆ, ಕಾರ್ಮಿಕರ ಆರೋಗ್ಯ ಕೆಡದಂತೆ ಸಂಸ್ಕರಿಸಿ, ಮರುಬಳಕೆಗೆ ತರುವುದು ಸಾರ್ಥಕ ಕೆಲಸವೇನೊ ಹೌದು. ಇಡೀ ಮನುಕುಲದ ಮುಂಬರುವ ಸಂಕಟಗಳಿಗೆ ಇದೇ ಪರಿಹಾರ ಮಾರ್ಗವೂ ಹೌದು. ಏಕೆಂದರೆ, 'ಬಳಸು, ಬಿಸಾಕು' ಎಂಬ ತತ್ವದ ಮೇಲೆಯೇ ಇಂದಿನ ಜಾಗತಿಕ ಅರ್ಥವ್ಯವಸ್ಥೆ ನಿಂತಿದೆ. ನೀರು, ಮಣ್ಣು, ಖನಿಜ, ಗಾಳಿ, ಜೀವದ್ರವ್ಯಗಳ ಸೀಮಿತ ಸಂಪನ್ಮೂಲವನ್ನು ಅವಲಂಬಿಸಿಯೇ ಮನುಷ್ಯರ ಸಂಖ್ಯೆ ಹೆಚ್ಚುತ್ತಿದೆ. ಎಲ್ಲರ ಆಶೋತ್ತರಗಳೂ ಹೆಚ್ಚುತ್ತಿವೆ. ಆಯುಸ್ಸೂ ಹೆಚ್ಚುತ್ತಿದೆ. ಎಲ್ಲರನ್ನೂ ಭೋಗದಾಹಿಗಳನ್ನಾಗಿ ಮಾಡುವ, ಪ್ರಜೆಗಳ ಸುಖ–ಸೌಕರ್ಯಗಳನ್ನು ಸದಾ ಹೆಚ್ಚಿಸುತ್ತ ಹೋಗುವುದೇ ಎಲ್ಲ ದೇಶಗಳ, ಎಲ್ಲ ಉದ್ಯಮಿಗಳ, ಎಲ್ಲ ರಾಜಕೀಯ ಪಕ್ಷಗಳ ಗುರಿಯೂ ಆಗಿದೆ ('ಪೃಥ್ವಿಯ ಸೀಮಿತ ಸಂಪನ್ಮೂಲಗಳಿಂದ ನಿರಂತರ ಅಭಿವೃದ್ಧಿ ಸಾಧ್ಯವಿದೆ ಎಂದು ಯಾರಾದರೂ ವಾದಿಸಿದರೆ ಆತನಿಗೆ ಬುದ್ಧಿಭ್ರಮಣೆ ಆಗಿರಬೇಕು ಅಥವಾ ಆತ ಅರ್ಥಶಾಸ್ತ್ರ ಪಾರಂಗತನಾಗಿರಬೇಕು' ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಕೆನ್ನೆತ್ ಬೌಲ್ಡಿಂಗ್ 1973ರಲ್ಲಿ ಹೇಳಿದ್ದ). ಈ ಬಗೆಯ ನಿರಂತರ ಅಭಿವೃದ್ಧಿಯ ಸತತ ಪೈಪೋಟಿ ಕೊನೆಗೆ ಎಲ್ಲರನ್ನೂ ಪ್ರಪಾತಕ್ಕೇ ತಳ್ಳಲಿದೆ ಎಂಬುದು ಗೊತ್ತಿದ್ದರೂ ಅದಕ್ಕೆ ತಡೆ ಒಡ್ಡುವ ಉಪಾಯ ಎಲ್ಲಿ?

ಉಪಾಯ ಹುಡುಕುವ ಯತ್ನಗಳಂತೂ ನಿರಂತರ ನಡೆಯುತ್ತಿವೆ. ಎಪ್ಪತ್ತರ ದಶಕದಲ್ಲಿ ಇದಕ್ಕೆಂದೇ ಸೃಷ್ಟಿಯಾದ 'ಕ್ಲಬ್ ಆಫ್ ರೋಮ್' ಸಂಸ್ಥೆ ಅಭಿವೃದ್ಧಿಯ ಬದಲೀ ರಸ್ತೆಗಳ ನೀಲನಕ್ಷೆಯನ್ನು ಬರೆಯುತ್ತಲೇ ಇದೆ. 'ನಮ್ಮೆಲ್ಲರದೂ ಒಂದೇ ಭವಿಷ್ಯ' ಹೆಸರಿನ ವಿಶ್ವಸಂಸ್ಥೆಯ 'ಬ್ರಂಟ್ಲೆಂಡ್ ಆಯೋಗ'ದ ವರದಿ ಕನ್ನಡದಲ್ಲೂ (ಶಿವರಾಮ ಕಾರಂತರ ತರ್ಜುಮೆ) ಲಭ್ಯವಿದೆ. ಮಿತಬಳಕೆಯ, ಸಂಯಮದ ಬದುಕಿನ ಅಗತ್ಯ ಕುರಿತು ಗಾಂಧೀಜಿಯ ಮಾತುಗಳು ಎಲ್ಲ ದೇಶಗಳಲ್ಲೂ ವೇದವಾಕ್ಯ ಎನಿಸಿವೆ. ವಿಶ್ವಸಂಸ್ಥೆಯ 'ಸುಸ್ಥಿರ ಅಭಿವೃದ್ಧಿಯ 17 ಗುರಿ'ಗಳು ನಮ್ಮ ಎಲ್ಲ ಸರ್ಕಾರಿ ಕಚೇರಿಗಳ ಗೋಡೆಗಳನ್ನು ಅಲಂಕರಿಸಿವೆ. ಈಗಿನ ಬಳಸಿ ಬಿಸಾಕುವ ಏಕಮುಖ ಆರ್ಥಿಕತೆಯ ಬದಲು ತ್ಯಾಜ್ಯ ಮರುಬಳಕೆಯ 'ವರ್ತುಲ ಆರ್ಥಿಕತೆ'ಯನ್ನು ಜಾರಿಗೆ ತರುವ ಬಗ್ಗೆ ದಾವೋಸ್‌ನಲ್ಲಿ ನಡೆಯುವ ವಿಶ್ವ ಆರ್ಥಿಕ ವೇದಿಕೆಯಲ್ಲಿ ಪ್ರತಿವರ್ಷ ಚರ್ಚೆ ನಡೆಯುತ್ತಿದೆ. ಆದರೂ, ಶತಕೋಟ್ಯಧೀಶರ ಪಾಕೀಟನ್ನು ಇನ್ನಷ್ಟು ದಪ್ಪ ಮಾಡುವಂತೆ ಎಲ್ಲೆಲ್ಲೂ ಹೊಸ ಗಣಿಗಾರಿಕೆ, ಹೊಸ ಅಣೆಕಟ್ಟು, ಹೊಸ ಪಂಪ್ಡ್ ಸ್ಟೋರೇಜ್, ಹೊಸ ಉಕ್ಕು ಸ್ಥಾವರ, ಹೊಸ ರಿಫೈನರಿ, ಹೊಸ ಪ್ಲಾಸ್ಟಿಕ್ ಕಾರ್ಖಾನೆ... ಎಷ್ಟು ವರ್ಷ ನಡೆದೀತು ಹೀಗೆ?

ತ್ಯಾಜ್ಯ ಮರುಬಳಕೆಯ ಪ್ರಶ್ನೆ ಬಂದಾಗ ಹಳೇ ಕಟ್ಟಡಗಳ ಅವಶೇಷಗಳ ಮರುಬಳಕೆಯತ್ತ ಯಾರೂ ಗಮನ ಕೊಡುವುದಿಲ್ಲ. ಲೋಹದ ಸಾಮಗ್ರಿ ಬಿಟ್ಟರೆ ಇನ್ನುಳಿದ ಇಟ್ಟಿಗೆ, ಸಿಮೆಂಟ್ ಬ್ಲಾಕ್, ಗಾಜು–ಪಿಂಗಾಣಿ ತ್ಯಾಜ್ಯಗಳು ಅಕ್ಷರಶಃ ಹಳ್ಳ ಹಿಡಿಯುತ್ತಿವೆ. ನೆದರ್‌ಲ್ಯಾಂಡ್ಸ್ ದೇಶದ ಈಂಡ್ಹೋವನ್ ಪಟ್ಟಣದ ಒಂದು ಭಾಗದ ಎಲ್ಲ ಕಟ್ಟಡಗಳನ್ನೂ ಕೆಡವಿ ಅದರ ಎಲ್ಲ ತ್ಯಾಜ್ಯಗಳನ್ನೂ ಬಳಸಿ (ಹಳೇ ಪ್ಲಾಸ್ಟಿಕ್ ಚಿಂದಿಗಳನ್ನು ಉರಿಸಿ ಅದರಿಂದಲೇ ಶಕ್ತಿ ಉತ್ಪಾದಿಸಿ) ಹೊಸ ಬಡಾವಣೆಯನ್ನು ನಿರ್ಮಿಸಲಾಯಿತು. ಅಂಥ ಅಚ್ಚ ಹಸಿರು ತಂತ್ರಜ್ಞಾನವನ್ನು ಮೀರಿಸಿದ ಬೇರೆ ಉದಾಹರಣೆಗಳು ಯಾಕಿಲ್ಲ?

ವಿಪರ್ಯಾಸ ಅಂದರೆ ಇದು: ಮನುಷ್ಯ ನಿರ್ಮಿತ ಏನನ್ನೇ ಕೆಡವಿದರೂ ಅದನ್ನು 'ವಿಧ್ವಂಸಕ ಕೃತ್ಯ' ಎನ್ನುತ್ತೇವೆ. ನಾವು ಪ್ರಕೃತಿಯನ್ನು ಧ್ವಂಸ ಮಾಡಿದರೆ ಅದು 'ಅಭಿವೃದ್ಧಿ' ಎನಿಸಿಕೊಳ್ಳುತ್ತದೆ. ವಿಶ್ವ ವಾಣಿಜ್ಯ ಕೇಂದ್ರದ ಕಟ್ಟಡಗಳು ಧ್ವಂಸವಾಗುವ ಮುನ್ನ ಆ ಸಂಕೀರ್ಣವನ್ನು 'ಜಾಗತೀಕರಣದ, ಆಧುನಿಕ ಆರ್ಥಿಕತೆಯ ಲಾಂಛನ' ಎಂದು ಬಿಂಬಿಸಲಾಗುತ್ತಿತ್ತು. ಅಂಥ ಆರ್ಥಿಕತೆಯನ್ನು ಕೆಡವಿ ಕಟ್ಟುವುದು ಹೇಗೆ ಎಂಬ ಪ್ರಶ್ನೆ ಈಗ ಮನುಕುಲದ ಮುಂದಿದೆ. ಸುಭದ್ರ ನಾಳೆಗಳನ್ನು ಹುಡುಕುತ್ತ ಬೇರೆ ಗ್ರಹಕ್ಕೆ ಹೋಗಿ ಗಣಿಗಾರಿಕೆ ಮಾಡಬಹುದು; ಅದನ್ನು ವಾಸಯೋಗ್ಯ ಮಾಡಬಹುದು ಎಂಬ ತಾಂತ್ರಿಕತೆಗಳು ಇಲಾನ್ ಮಸ್ಕ್‌ನಂಥ ಶತಕೋಟ್ಯಧೀಶರ ಬತ್ತಳಿಕೆಯಲ್ಲಿ ರೂಪುಗೊಳ್ಳುತ್ತವೆ; ನಾವಿರುವ ಭೂಮಿಯನ್ನೇ ನಾಳಿನವರಿಗೆ ವಾಸಯೋಗ್ಯ ಮಾಡುವ ತಂತ್ರಜ್ಞಾನವನ್ನು ನಾವೇ ರೂಪಿಸಿಕೊಳ್ಳಬೇಕಿದೆ. ಅದರ ಮೊಳಕೆಗಳು ಭಾರತದಲ್ಲಿ ಬೇಕಾದಷ್ಟಿವೆ. ಅದಕ್ಕೆ ಪ್ರತಿಭೆಯ, ಬಂಡವಾಳದ, ಪ್ರಚಾರದ ನೀರೆರೆದು ಪೋಷಿಸಬೇಕೆಂಬ ವಿಚಾರ ಯಾರಲ್ಲಿ ಎಂದು ಮೊಳೆಯುತ್ತದೊ?

ಸದ್ಯಕ್ಕಂತೂ ಶಾಲಾ ಮಕ್ಕಳು ರಾಕೆಟ್ ತಯಾರಿಸುವುದನ್ನೇ ಕಲಿಯುತ್ತಿವೆ.



ವಾಚಕರ ವಾಣಿ

ಯುವಕ್ರಾಂತಿ: ಭಾರತಕ್ಕೆ ಎಚ್ಚರಿಕೆ ಗಂಟೆ

ನೇಪಾಳದ ಜನಕ್ರಾಂತಿಯಿಂದ ಭಾರತ ಎಚ್ಚೆತ್ತುಕೊಳ್ಳಬೇಕಿದೆ. ಈ ಹಿಂದೆ ಶ್ರೀಲಂಕಾ, ಬಾಂಗ್ಲಾದೇಶದಲ್ಲಿಯೂ ಜನಕ್ರಾಂತಿ ನಡೆದ ನಿದರ್ಶನಗಳು ಕಣ್ಣಮುಂದಿವೆ. ಈ ಜನಕ್ರಾಂತಿಗಳು ಭಾರತದ ಪಾಲಿಗೆ ಎಚ್ಚೆತ್ತುಕೊಳ್ಳಬೇಕಾದ ಕರೆಗಂಟೆಯಂತಿವೆ. ನಮ್ಮಲ್ಲೂ ಭ್ರಷ್ಟಾಚಾರ ಮಿತಿಮೀರಿದೆ. ಬಹುತೇಕ ಕಡುಭ್ರಷ್ಟ ರಾಜಕಾರಣಿಗಳು, ಅವರಿಗೆ ಆಸರೆಯಾಗಿ ನಿಂತ ಅಧಿಕಾರ ವರ್ಗ. ಶಾಸಕ, ಸಂಸದ, ಸಚಿವ ಮಹೋದಯರು ಚುನಾವಣೆಗೆ ಸ್ಪರ್ಧಿಸಲು, ಗೆಲ್ಲಲು ಮತ್ತು ಅಧಿಕಾರ ಉಳಿಸಿಕೊಳ್ಳಲು ಕುಟುಂಬವನ್ನು ಮತ್ತು ಹಿಂಬಾಲಕರನ್ನು ಆರ್ಥಿಕವಾಗಿ ಬೆಳೆಸಲು ರಾಜಾರೋಷವಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವುದು ಎಲ್ಲರಿಗೂ ತಿಳಿದಿದೆ. ಲೋಕಪಾಲ, ಲೋಕಾಯುಕ್ತರ ಜೊತೆಗೆ ಆರ್‌ಟಿಐ, ಸಕಾಲ, ಭೂಮಿ, ಕಾವೇರಿ ಇತ್ಯಾದಿ ತಂತ್ರಾಂಶಗಳಿದ್ದರೂ ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವಾಗಿಲ್ಲ. ಜನ ತಾಳ್ಮೆ ಕಳೆದುಕೊಳ್ಳುವ ಮೊದಲು ರಾಜಕಾರಣಿಗಳು ಮತ್ತು ಅಧಿಕಾರ ವರ್ಗ ಬದಲಾಗಬೇಕು. 'ಕಾಯಕವೇ ಕೈಲಾಸ' ತತ್ವದಡಿ ಕರ್ತವ್ಯ ನಿರ್ವಹಿಸಿದರೆ ಜನಾಕ್ರೋಶ ಮತ್ತು ಜನಕ್ರಾಂತಿಯನ್ನು ತಡೆಗಟ್ಟಬಹುದು.

ಕೃ.ಪ. ಗಣೇಶ, ಮೈಸೂರು

ಸೌಹಾರ್ದದ ಪಾದಯಾತ್ರೆ ನಡೆಸಲಿ

'ಕೋಮು ರಾಜಕೀಯದ ವಿರುದ್ಧ ಸಾಮರಸ್ಯದ ಸಹಪಯಣ ಅಗತ್ಯ' ಶೀರ್ಷಿಕೆಯ ಸಂಪಾದಕೀಯ ಅರ್ಥಪೂರ್ಣವಾಗಿದೆ (ಪ್ರ.ವಾ., ಸೆಪ್ಟೆಂಬರ್ 10). ಕೋಮುಸೌಹಾರ್ದ ಕಾಪಾಡುವ ಪಯಣವನ್ನು ಸರ್ಕಾರವೇ ಏಕೆ ಆರಂಭಿಸಬಾರದು? ನಾಡಿನ ಪರಂಪರೆಯಲ್ಲಿ ಕಾಲಕಾಲಕ್ಕೆ ಸಾಮಾಜಿಕ ಬಿಕ್ಕಟ್ಟುಗಳು ಎದುರಾದಾಗಲೆಲ್ಲ ಸಾಧು-ಸಂತರು, ಕವಿಗಳು, ಅರಸರು ಮುಂದೆಬಂದು ಕೋಮುಸೌಹಾರ್ದ ಕಾಪಾಡಿದ ಚರಿತ್ರೆಯೇ ಇದೆ. ಈಗಲೂ ಸಾಹಿತಿಗಳು, ಸಿನಿಮಾ ನಟರು, ನಾಟಕಕಾರರು, ಮಠಾಧೀಶರು ಸೇರಿದಂತೆ ಸಾಮಾಜಿಕ ಕಾಳಜಿ ಹೊಂದಿರುವವರು ಸಾಕಷ್ಟಿದ್ದಾರೆ. ಅವರನ್ನೊಳಗೊಂಡ ಒಂದು ಪಾದಯಾತ್ರೆಯನ್ನು ನಾಡಿನಾದ್ಯಂತ ಸರ್ಕಾರ ಆಯೋಜಿಸಲಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಪ್ರಾರ್ಥನೆ

ಬೆನಕ
ನಿನ್ನ ಕಳಿಸಲು
ಎಷ್ಟು ಅಡ್ಡಿ ಆತಂಕ!
ಕೋಮು ಎಂಬ
ಭಯಂಕರ ನಾಟಕ!
ವಿಘ್ನನಿವಾರಕ,
ಕರುಣಿಸು ಶಾಂತಿ
ಸಮತೆಯ ಕರ್ನಾಟಕ!

ವಿಜಯ ಚಂದ್ರಶೇಖರ್, ದಾವಣಗೆರೆ

ಮಾನವೀಯ ಪರಿಹಾರ ಬೇಕು

ಯುಜಿಸಿ ಅರ್ಹತೆ ಹೊಂದಿದವರನ್ನು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಆಯ್ಕೆ ಮಾಡುವಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಯುಜಿಸಿ ನಿಗದಿಪಡಿಸಿದ ಸೇವಾ ಅರ್ಹತೆ ಪಡೆಯದಿರುವುದು ಲೋಪವೇನೋ ಹೌದು. ಆದರೆ, ಹದಿನೈದು ಇಪ್ಪತ್ತು ವರ್ಷಗಳಿಂದ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿದ ಯುಜಿಸಿ ಅರ್ಹತೆ ಪಡೆಯದ ಸಾವಿರಾರು ಅತಿಥಿ ಉಪನ್ಯಾಸಕರನ್ನು ಹಾಗೂ ಅವರನ್ನು ನಂಬಿದ ಕುಟುಂಬದವರನ್ನು ಬೀದಿಪಾಲು ಮಾಡುವುದು ಅತ್ಯಂತ ಅಮಾನವೀಯ. ಸರ್ಕಾರ ಈ ಕುರಿತು ಮಾನವೀಯವಾಗಿ ಯೋಚಿಸಬೇಕು. ಯಾರ ಬದುಕಿಗೂ ಧಕ್ಕೆಯಾಗದ ರೀತಿಯಲ್ಲಿ ಪರಿಹಾರ ಮಾರ್ಗ ಕಂಡುಕೊಂಡು ಸಮಸ್ಯೆ ಬಗೆಹರಿಸಬೇಕು.

ಸರ್ಜಾಶಂಕರ ಹರಳಿಮಠ, ಶಿವಮೊಗ್ಗ

ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ

ದಸರಾ ಮಹೋತ್ಸವದ ಅಂಗವಾಗಿ ಈ ಬಾರಿ ಬನ್ನಿ ಮಂಟಪದಲ್ಲಿ ಪ್ರಪ್ರಥಮ ಬಾರಿಗೆ ಏರ್ ಶೋ ನಡೆಯುತ್ತಿರುವುದು ಸಂತಸದ ವಿಷಯ. ಮುನ್ನೆಚ್ಚರಿಕೆ ಕ್ರಮವಾಗಿ ನೂಕುನುಗ್ಗಲು ತಪ್ಪಿಸಲು ಪ್ರದರ್ಶನಕ್ಕೆ ಪಾಸ್ ವಿತರಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ರಾಜ್ಯದ ಶಾಲಾ ಹಾಗೂ ಕಾಲೇಜುಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಪ್ರದರ್ಶನ ವೀಕ್ಷಿಸಲು ಪ್ರತ್ಯೇಕವಾಗಿ ಅವಕಾಶ ಮಾಡಿಕೊಡಬೇಕಿದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಶಿಕ್ಷಕ ಆಕಾಂಕ್ಷಿಗಳ ಗೋಳು

ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 60 ಸಾವಿರಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಪ್ರತಿವರ್ಷ ಅತಿಥಿ ಶಿಕ್ಷಕರ ನೇಮಕಕ್ಕೆ ಆಸ್ಥೆವಹಿಸುವ ಸರ್ಕಾರ ನೇರ ನೇಮಕಾತಿಗೆ ಮುಂದಾಗುತ್ತಿಲ್ಲ. 2025-26ನೇ ಸಾಲಿಗೂ ಸುಮಾರು 51 ಸಾವಿರ ಅತಿಥಿ ಶಿಕ್ಷಕರ ನೇಮಕಾತಿಗೆ ಆದೇಶ ಹೊರಡಿಸಿದೆ. ಮುಂದಿನ ವರ್ಷದ ಮಾರ್ಚ್‌ಗೆ ಇಷ್ಟೂ ಶಿಕ್ಷಕರನ್ನು ಬಿಡುಗಡೆ ಮಾಡುತ್ತದೆ. ಅತಿಥಿ ಶಿಕ್ಷಕರಿಗೆ ಪ್ರಾಥಮಿಕ ಶಾಲೆಗೆ ಮಾಸಿಕ ₹12 ಸಾವಿರ ಮತ್ತು ಪ್ರೌಢಶಾಲೆಗೆ ₹12,500 ನಿಗದಿ ಮಾಡಿದೆ. ಬೆಲೆ ಏರಿಕೆಯ ದಿನಮಾನಗಳಲ್ಲಿ ಇಷ್ಟು ಸಂಬಳಕ್ಕೆ ಸಂಸಾರದ ನೊಗ ಎಳೆಯಲು ಸಾಧ್ಯವೇ?

ಅತ್ಯಾಚಾರ ಆರೋಪದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ದಿನವೊಂದಕ್ಕೆ ₹524 ದಿನಗೂಲಿ ನಿಗದಿಪಡಿಸಲಾಗಿದೆ. ಜೈಲಿನಲ್ಲಿ ಇರುವ ಕೈದಿಗಳ ದಿನಗೂಲಿಗಿಂತ ಅತಿಥಿ ಶಿಕ್ಷಕರ ಗೌರವಧನ ಕಡಿಮೆ ಇರುವುದು ವ್ಯಂಗ್ಯವೇ ಸರಿ. ಕಾಯಂ ಶಿಕ್ಷಕರಿಲ್ಲದೆ ಮಕ್ಕಳ ಶಿಕ್ಷಣ ಅಡಕತ್ತರಿಗೆ ಸಿಲುಕಿದೆ. ಶೀಘ್ರವೇ, ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಬೇಕಿದೆ.

ದುರಗಪ್ಪ ಬಂಡೇಭಾವಿ, ಲಿಂಗಸುಗೂರು

ದಸರಾ ಆಚರಣೆ ಯಾರದ್ದು?

ನವರಾತ್ರಿ, ಆಯುಧಪೂಜೆ, ವಿಜಯದಶಮಿ... ಎಲ್ಲಕ್ಕೂ ಧಾರ್ಮಿಕ ಹಿನ್ನೆಲೆ ಇದೆಯಲ್ಲವೇ? ಹತ್ತನೇ ದಿನದ ಚಾಮುಂಡೇಶ್ವರಿ ಮೆರವಣಿಗೆಯೇ ದಸರಾ ಉತ್ಸವ. ಇದು ಸಂಪೂರ್ಣವಾಗಿ ಹಿಂದೂ ಸಂಪ್ರದಾಯದ ಆಚರಣೆ. ದಸರಾ ಹಿಂದೂಗಳಿಗೆ ಸಂಬಂಧಿಸಿದ್ದಲ್ಲ ಎಂದು ಹೇಳುವುದು ಹೇಗೆ?

ಅ.ನಾ. ರಾವ್ ಜಾದವ್, ಬೆಂಗಳೂರು

ಚುರುಮುರಿ



ಬ್ಯಾಂಗಲ್ ಬಂಗಾರಿ!

• ಗುರು ಪಿ.ಎಸ್.

'ಬ್ಯಾಂಗಲ್ ಬಂಗಾರಿ, ಬ್ಯಾಂಗಲ್ ಬಂಗಾರಿ...' ಹಾಡುತ್ತಾ ಮನೆಯೊಳಗೆ ಹೋದೆ.

'ಏನ್ರೀ, ನನಗೆ ಬಂಗಾರಿ ಅಂತ ಕರೆದ್ರಾ?' ಅಡುಗೆ ಮನೆಯಲ್ಲಿದ್ದ ಹೆಂಡತಿ ಖುಷಿಯಿಂದ ಹೊರಗೆ ಬಂದಳು.

ಅನಿವಾರ್ಯವಾಗಿ 'ಹೂಂ' ಎಂದು ತಲೆಯಾಡಿಸಿದೆ.

'ಬರೀ ಹಾಡಲ್ಲಿ ಬ್ಯಾಂಗಲ್ ಬಂಗಾರಿ ಅಂತ ಅಂದ್ರೇನ್ ಬಂತು, ಒಂದ್ ನಾಲ್ಕು ಚಿನ್ನದ ಬಳೆ ಕೊಡಿಸಿದ್ರೆ ಹಾಡಿಗೊಂದು ಅರ್ಥ ಇರುತ್ತೆ'.

'ಅರ್ಥ ಬರೋಕೆ ನನ್ನ ಜೇಬಲ್ಲಿ 'ಅರ್ಥ' ಇರಬೇಕಲ್ವೆ?'

'ಈಗ ಜಿಎಸ್ಟಿ ಸ್ಲ್ಯಾಬ್ ಎಲ್ಲ ಇಳಿಸೀದಾರಂತಲ್ರೀ?'

'ಅಯ್ಯೋ ದಡ್ಡಿ, ಜಿಎಸ್ಟಿ ಸ್ಲ್ಯಾಬ್ ಕಡಿಮೆಯಾಗಿದ್ರೂ ಚಿನ್ನದ ದರ ಮಾತ್ರ ಸ್ಲ್ಯಾಬ್ ಏರಿ ಕೂತಿದೆ'.

'ಹೋಗ್ಲಿ ಬಿಡಿ, ಐ ಫೋನ್ ಆದ್ರೂ ಕೊಡಿಸಿ. ಹೇಗೂ ಟ್ರಂಪ್ ಮತ್ತು ಮೋದಿ ನಡುವೆ ಮತ್ತೆ ಲವ್ ಸ್ಟಾರ್ಟ್ ಆಗಿದೆಯಲ್ಲ, ಆ್ಯಪಲ್ ಕಂಪನಿ ಫೋನ್ ರೇಟ್ ಎಲ್ಲ ಕಡಿಮೆ ಆಗಿರಬಹುದು' ಹತ್ತಿರ ಬಂದು ತಲೆ ಸವರುತ್ತಾ ಹೇಳಿದಳು.

'ಬ್ರೇಕಪ್ ನಂತರವೂ ಮೊದಲಿನ ಪ್ರೀತಿಯೇ ಉಳಿದಿರುತ್ತಾ ಹೇಳು, ಒಡೆದ ಮನಸನು ಕೂಡಿಸಲು ಸಾಧ್ಯವೇ' ಎಂದು ನಾಟಕೀಯವಾಗಿ ಹೇಳಿ, 'ಬೇಕಾದರೆ ಯಾವುದಾದರೂ ಚೈನಾ ಸೆಟ್ ಕೊಡಿಸುತ್ತೇನೆ ನೋಡು' ಎಂದೆ.

'ಥೀ... ಬೇಡವೇ ಬೇಡ, ಒಂದು ವಾರಕ್ಕೇ ಅದು ಹಾಳಾಗೋಗುತ್ತೆ' ಎಂದಳು ಅರ್ಧಾಂಗಿ.

'ಓಯ್, ಶಾಂತಂ ಪಾಪಂ ಅನ್ನು, ಈಗ ಇಂಡಿಯಾ–ಚೀನಾ ಭಾಯಿ ಭಾಯಿ... ಗೊತ್ತಿಲ್ವ ನಿಂಗೆ?'

'ಅದು ಬಿಡಿ, ಇಲ್ಲಿ ನೋಡಿ. ಕಾರಿನ ರೇಟ್ ಎಲ್ಲ ₹60 ಸಾವಿರದಿಂದ ₹2 ಲಕ್ಷ ಆಗಿದೆಯಂತೆ, ಹೊಸ ಕಾರ್ ಆದರೂ ತಗೊಳ್ರೀ' ಪೇಪರ್ ತೋರಿಸುತ್ತಾ ಹೇಳಿದಳು.

'₹2 ಲಕ್ಷಕ್ಕೆಲ್ಲ ಹೊಸ ಕಾರ್ ಬರೋದಿಲ್ವೆ, ಅಷ್ಟು ರೇಟ್ ಕಡಿಮೆಯಾಗಬಹುದು ಅಂತ ಅದು, ಹೊಸ ಕಾರ್ ತಗೊಳ್ಳೋಕೆ ಕನಿಷ್ಠ ₹10 ಲಕ್ಷವಾದರೂ ಬೇಕು, ನಿನಗೆ ಗ್ಯಾರಂಟಿ ಬಸ್ಸೇ ಗತಿ'.

'ಮತ್ತ್ಯಾಕೆ ಬ್ಯಾಂಗಲ್ ಬಂಗಾರಿ ಅಂತ ಹಾಡ್ತೀರಿ, ಖಾಲಿ ಕೈ ಚಕೋರಿ ಅನ್ನಿ ಸಾಕು' ಎನ್ನುತ್ತಾ ತಲೆಗೆ ಮೊಟಕಿ ಒಳಗೆ ಹೋದಳು.

ಸಂಗತ

ರೋಗಿಗಳ ಸುಲಿಗೆಗೆ 'ಚಿಕಿತ್ಸೆ' ಬೇಡವೆ?

ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ಆರೋಗ್ಯ ಇಲಾಖೆ ದಾಳಿ ನಡೆಸುತ್ತಿದೆ. ರೋಗಿಗಳನ್ನು ಶೋಷಿಸುವವರ ಮೇಲೂ ಕ್ರಮ ಜರುಗಿಸುವುದು ಅಗತ್ಯ

• ಸಿದ್ದಯ್ಯ ಹಿರೇಮಠ

ಹುಬ್ಬಳ್ಳಿಗೆ 10 ಕಿ.ಮೀ. ದೂರವಿರುವ ನಮ್ಮೂರಿನಲ್ಲಿ 20,000ಕ್ಕೂ ಹೆಚ್ಚು ಜನಸಂಖ್ಯೆ ಇದೆ. ನಗರಗಳಂತೆಯೇ ಬೆಳೆಯುತ್ತಿರುವ ಈ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ಇಲ್ಲ. ಅನೇಕ ವರ್ಷಗಳಿಂದ ಮನವಿ ಮಾಡಿದರೂ ಇಲ್ಲೊಂದು ಪಿಎಚ್‌ಸಿ ಸ್ಥಾಪಿಸಲು ಸರ್ಕಾರ ಮುಂದಾಗುತ್ತಿಲ್ಲ.


ಬ್ಯಾಹಟ್ಟಿ ಪಿಎಚ್‌ಸಿ ವ್ಯಾಪ್ತಿಗೆ ಒಳಪಟ್ಟಿರುವ ಈ ಊರಲ್ಲಿ ಆರೋಗ್ಯ ಉಪಕೇಂದ್ರವಿದೆ. ಅಲ್ಲಿ ವೈದ್ಯರ ಬದಲಿಗೆ, ನಿತ್ಯವೂ ಆರೋಗ್ಯ ಸಹಾಯಕಿಯರು ಬಂದು ಗರ್ಭಿಣಿಯರು, ಬಾಣಂತಿಯರು ಮತ್ತು ಚಿಕ್ಕಮಕ್ಕಳ ಆರೋಗ್ಯ ತಪಾಸಣೆ ನಡೆಸಿ ಮಧ್ಯಾಹ್ನ ಹಿಂದಿರುಗುತ್ತಾರೆ. ಹೆಚ್ಚಿನ ಚಿಕಿತ್ಸೆಯ ಅಗತ್ಯ ಇರುವವರಿಗೆ ಪಿಎಚ್‌ಸಿಗೆ ಅಥವಾ ಹುಬ್ಬಳ್ಳಿಯಲ್ಲಿನ ಕೆಎಂಸಿ (ಕರ್ನಾಟಕ ಮೆಡಿಕಲ್ ಕಾಲೇಜು) ಆಸ್ಪತ್ರೆಗೆ ಹೋಗುವಂತೆ ಹೇಳುತ್ತಾರೆ.

ಗ್ರಾಮದಲ್ಲಿ ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ಓದಿದ ವೈದ್ಯರ ಎಂಟ್ಹತ್ತು ಕ್ಲಿನಿಕ್‌ಗಳಿವೆ. ಇವರು ಜ್ವರ, ಕೆಮ್ಮು, ಶೀತ, ನೆಗಡಿ ಮತ್ತು ಚಿಕ್ಕಮಕ್ಕಳಲ್ಲಿ ಕಂಡುಬರುವ ಅತಿಸಾರ, ಜಂತು ಮತ್ತಿತರ ಚಿಕ್ಕಪುಟ್ಟ ಕಾಯಿಲೆಗೆ ಅಲೋಪತಿ ಮಾತ್ರೆ ಕೊಟ್ಟು ಚುಚ್ಚುಮದ್ದೂ ಕೊಡುತ್ತಾರೆ.

ಮೇಲೆ ತಿಳಿಸಿದ ಕಾಯಿಲೆಗಳಿಗೆ ಈ ವೈದ್ಯರು ಒಬ್ಬ ರೋಗಿಯಿಂದ ಗರಿಷ್ಠ ₹100 ಪಡೆಯುತ್ತಾರೆ. ಗಂಭೀರ ಸಮಸ್ಯೆ ಎಂದು ಕಂಡುಬಂದರೆ, ಹುಬ್ಬಳ್ಳಿಯಲ್ಲಿರುವ ಖಾಸಗಿ ನರ್ಸಿಂಗ್ ಹೋಂಗಳಿಗೆ ಕಳುಹಿಸುತ್ತಾರೆ. ಬಡವರಾದರೆ ಸರ್ಕಾರದ ಕೆಎಂಸಿ ಆಸ್ಪತ್ರೆಗೆ ಹೋಗುವಂತೆ ಹೇಳುತ್ತಾರೆ.

ಊರಿನ ವೈದ್ಯರ ಚೀಟಿ ಹಿಡಿದುಕೊಂಡು ಹೋದರೆ ಖಾಸಗಿ ಆಸ್ಪತ್ರೆಗಳಲ್ಲಿ ರಕ್ತ, ಮೂತ್ರ ಪರೀಕ್ಷೆ, ಸ್ಕ್ಯಾನಿಂಗ್ ತಪ್ಪದೆ ಮಾಡಿಸಿ ಸುಲಿಗೆ ಮಾಡಲಾಗುತ್ತದೆ. ಇವರು ಮಾಡುವ ಪರೀಕ್ಷೆಗಳ ವರದಿಯು ಸಾಮಾನ್ಯವಾಗಿ 'ಸಾಮಾನ್ಯ' (ನಾರ್ಮಲ್) ಎಂಬ ಫಲಿತಾಂಶವನ್ನೇ ನೀಡಿರುತ್ತದೆ (ಅಲ್ಲೊಂದು ಇಲ್ಲೊಂದು ಪ್ರಕರಣ ಹೊರತುಪಡಿಸಿ). ಆದರೂ, ರೋಗಿಗಳ ಸಾವಿರಾರು ರೂಪಾಯಿ ಆ ಆಸ್ಪತ್ರೆಯವರ ಜೇಬು ಸೇರುತ್ತದೆ.

ನಮ್ಮೂರು ಹುಬ್ಬಳ್ಳಿಗೆ ಹತ್ತಿರವಿದ್ದರೂ, ದೊಡ್ಡ ಜನಸಂಖ್ಯೆ ಹೊಂದಿದ್ದರೂ ಎಂಬಿಬಿಎಸ್ ಓದಿದ ಒಬ್ಬ ವೈದ್ಯನೂ ಈವರೆಗೆ ಖಾಸಗಿಯಾಗಿ ಕ್ಲಿನಿಕ್ ತೆರೆದಿಲ್ಲ. 'ಹಳ್ಳಿಗರು ಕೇಳಿದಷ್ಟು ದುಡ್ಡು ಕೊಡಲು ನಿರಾಕರಿಸುತ್ತಾರೆ, ಇಲ್ಲಿ ಸೇವೆ (?) ಸಲ್ಲಿಸುವುದು ಲಾಭದಾಯಕವಲ್ಲ' ಎಂಬ ಕಾರಣ ಇರಬಹುದು.



ಇದು ನಮ್ಮೂರಿನ ಕಥೆ ಮಾತ್ರವಲ್ಲ. ರಾಜ್ಯದ ಬಹುತೇಕ ಗ್ರಾಮೀಣ ಪ್ರದೇಶಗಳ ಕಥೆ ಮತ್ತು ಅಲ್ಲಿನ ನಿವಾಸಿಗಳ ವ್ಯಥೆ.

ನಮ್ಮೂರಲ್ಲಿ ಓದಿರುವ ವಿದ್ಯಾವಂತರಿಗೆ 'ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ಓದಿದವರು ಅಲೋಪತಿ ಔಷಧ ಕೊಡುವಂತಿಲ್ಲ' ಎಂಬ ನಿಯಮ ತಿಳಿದಿದೆ. ಆದರೂ, ಅವರು ನಿಯಮಬಾಹಿರವಾಗಿ ಅಲೋಪತಿ ಚಿಕಿತ್ಸೆ ನೀಡುತ್ತಿರುವ ವೈದ್ಯರ ಬಳಿಯೇ ಚಿಕಿತ್ಸೆಗೆ ಹೋಗುತ್ತಾರೆ. ನಗರ ಪ್ರದೇಶಗಳಲ್ಲಿರುವ ತಜ್ಞ (?) ವೈದ್ಯರು ಸುಲಿಗೆ ಮಾಡುವ ವಿಷಯ ತಿಳಿದಿರುವುದೇ ಇದಕ್ಕೆ ಕಾರಣ.

ಆರೋಗ್ಯ ಇಲಾಖೆಯು ನಕಲಿ ವೈದ್ಯರ ಕ್ಲಿನಿಕ್‌ಗಳ ಮೇಲೆ ದಾಳಿ ನಡೆಸುತ್ತಿದೆ. ಅರ್ಹತೆ ಇಲ್ಲದವರು, ಪರವಾನಗಿ ಇಲ್ಲದವರನ್ನು ಗುರುತಿಸಿ ದಂಡ, ಶಿಕ್ಷೆ ವಿಧಿಸಲಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿಸದ ಹಾಗೂ ಅಗತ್ಯ ವಿದ್ಯಾರ್ಹತೆ ಇಲ್ಲದವರ ವಿರುದ್ಧ ಕ್ರಮ ಕೈಗೊಳ್ಳುವುದು ಸ್ವಾಗತಾರ್ಹ. ಆದರೆ, ಕಾನೂನುಬಾಹಿರವಾಗಿ ವೈದ್ಯ ವೃತ್ತಿ ಕೈಗೊಂಡವರನ್ನು ಪತ್ತೆ ಮಾಡುತ್ತಿರುವುದು ಮಾತ್ರ ಕಂಡುಬರುತ್ತಿಲ್ಲ. ರೋಗಿಗಳಿಂದ ಅಧಿಕ ಪ್ರಮಾಣದ ಹಣ ವಸೂಲಿ ಮಾಡುವುದು ಕಾನೂನುಬಾಹಿರ ಪ್ರಕ್ರಿಯೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಅಂಥವರ ಮೇಲೆ ದಾಳಿ ನಡೆಸಿ, ಕ್ರಮ ಕೈಗೊಂಡ ಉದಾಹರಣೆ ಇಲ್ಲ.

ಕೆಲವು ವೈದ್ಯರು ಬರೆದುಕೊಡುವ ಔಷಧಗಳು ಅವರ ಆಸ್ಪತ್ರೆ ಆವರಣದಲ್ಲೇ ಇರುವ ಔಷಧ ಅಂಗಡಿಗಳಲ್ಲಿ ಮಾತ್ರ ದೊರೆಯುತ್ತವೆ. ಬೇರೆ ಅಂಗಡಿಗಳಿಗೆ ಹೋದರೆ, 'ಅದೇ ಅಂಶವನ್ನು ಒಳಗೊಂಡ ಇನ್ನೊಂದು ಕಂಪನಿಯ ಔಷಧ ಇದೆ. ಅದರ ಬೆಲೆ ಕಡಿಮೆಯೂ ಇದೆ, ರಿಯಾಯಿತಿಯನ್ನೂ ಕೊಡುತ್ತೇವೆ' ಎಂದು ಹೇಳುತ್ತಾರೆ. ಆದರೆ, ಆ ಔಷಧ ತೆಗೆದುಕೊಂಡರೆ, 'ಬೇಗ ಗುಣ ಆಗದಿದ್ದರೆ ನಾನು ಜವಾಬ್ದಾರನಲ್ಲ' ಎಂದು ಆ ವೈದ್ಯ ಬೆದರಿಸುತ್ತಾನೆ.

ಗ್ರಾಮೀಣ ಪ್ರದೇಶಗಳೂ ಒಳಗೊಂಡಂತೆ ಹಲವೆಡೆ ಆಸ್ಪತ್ರೆಗಳ ಮತ್ತು ವೈದ್ಯರ ಕೊರತೆ ಇದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಜನರು ತಜ್ಞ ವೈದ್ಯರಿಂದ ಸುಲಿಗೆಗೆ ಒಳಗಾಗುವ ಭಯದಲ್ಲಿ ಕಡಿಮೆ ಶುಲ್ಕ ಪಡೆಯುವ ನಕಲಿ ಅಥವಾ ಅರ್ಹತೆ ಇಲ್ಲದ, ಪರವಾನಗಿ ಪಡೆಯದ ವೈದ್ಯರ ಬಳಿ ಚಿಕಿತ್ಸೆ ಪಡೆಯುವ ಅನಿವಾರ್ಯತೆಗೆ ಒಳಗಾಗಿದ್ದಾರೆ.

ನಕಲಿ ವೈದ್ಯರನ್ನು ಮಟ್ಟಹಾಕಲು ದಾಳಿ ನಡೆಸುತ್ತಿರುವ ಆರೋಗ್ಯ ಇಲಾಖೆಯು ದುಬಾರಿ ಶುಲ್ಕ ಹಾಗೂ ಅನಗತ್ಯ ಪರೀಕ್ಷೆಗಳಲ್ಲಿ ತೊಡಗಿ, ನಿಯಮಬಾಹಿರವಾಗಿ ಆಸ್ಪತ್ರೆ ನಡೆಸುತ್ತ ಜನರನ್ನು ಸುಲಿಗೆ ಮಾಡುತ್ತಿರುವ ತಜ್ಞ ವೈದ್ಯರನ್ನೂ ನಿಯಂತ್ರಿಸುವ ಕೆಲಸ ಮಾಡಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮನೆ–ಮನೆಯ ಕಥೆ



ಪೋಷಕರ ಪಾಲನೆ ಭತ್ಯೆ ಹೆಚ್ಚಳಕ್ಕೆ ಶಿಫಾರಸು

ಪೋಷಕರು ಮತ್ತು ಹಿರಿಯ ನಾಗರಿಕರ ಜೀವನ ನಿರ್ವಹಣೆಗೆ ಸಂಬಂಧಿಸಿದಂತೆ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. 'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ ಅನುಸಾರ ತಿಂಗಳ ಪಾಲನಾ ಭತ್ಯೆಯ ಮೊತ್ತ ₹10 ಸಾವಿರಕ್ಕೆ ಮೀರಬಾರದು ಎಂಬ ಕಲಂ 9ರ ಮಿತಿಯನ್ನು ತೆಗೆದು ಹಾಕಲು ಇದು ಸಕಾಲ' ಎಂದು ತೀರ್ಪು ಪ್ರಕಟಿಸಿದೆ. ದೇಶದ 25 ಹೈಕೋರ್ಟ್‌ಗಳು ಈವರೆವಿಗೂ ಉಲ್ಲೇಖಿಸದ ಕಾನೂನು ಮಾರ್ಪಾಡುಗಳ ಅಗತ್ಯವನ್ನು ಕರ್ನಾಟಕದ ಹೈಕೋರ್ಟ್ ಪ್ರತಿಪಾದಿಸಿದೆ. ಈ ಮೂಲಕ ಜೀವನದ ಮುಸ್ಸಂಜೆಯಲ್ಲಿರುವವರಿಗೆ ಆಸರೆಯಾಗುವಂಥ ನಿಯಮ ಬದಲಾವಣೆಯ ಭರವಸೆ ಮೂಡಿಸಿದೆ

• ಬಿ.ಎಸ್.ಷಣ್ಮುಖಪ್ಪ

ಕರ್ನಾಟಕದ ಹೈಕೋರ್ಟ್, ಹಿರಿಯ ನಾಗರಿಕರಿಗೆ ಸಂತಸ ತರುವಂತಹ ಉಲ್ಲೇಖವೊಂದನ್ನು ಮಾಡಿದೆ. ಹಿರಿಯರು ಅಥವಾ ಪೋಷಕರಿಗೆ ನೀಡಲಾಗುವ ಮಾಸಿಕ ಭತ್ಯೆಗೆ ಸಂಬಂಧಿಸಿದ ಪ್ರಕರಣವೊಂದನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, 'ಈಗಿರುವ ₹10 ಸಾವಿರದ ಮಿತಿಯನ್ನು ಯಥೋಚಿತವಾಗಿ ಆಯಾ ಪ್ರಕರಣಗಳಿಗೆ ಅನುಗುಣವಾಗಿ ವಾಸ್ತವಾಂಶಗಳ ಆಧಾರದಡಿ ಏರಿಕೆ ಮಾಡಲು 2007ರ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಹಾಗೂ ಕಲ್ಯಾಣ ಕಾಯ್ದೆಗೆ ಅಗತ್ಯ ಬದಲಾವಣೆ ತರಬೇಕು' ಎಂದು ಕೇಂದ್ರ ಸರ್ಕಾರಕ್ಕೆ ಜಬರ್‌ದಸ್ತ್ ಶಿಫಾರಸು ಮಾಡಿದೆ.

'ಹಿರಿಯರ ಅಗತ್ಯಗಳು 2007ರಲ್ಲಿ ಇದ್ದಂತೆಯೇ ಇಲ್ಲ. 18 ವರ್ಷಗಳ ಅಂತರದ ಆಧುನಿಕ ಜೀವನದಲ್ಲಿ ಇಂದು ಜೀವನವೆಚ್ಚ ಅಪಾರ ಏರಿಕೆ ಕಂಡಿದೆ. 2007ರಲ್ಲಿ ₹10 ಸಾವಿರ ಸಾಕಾಗುತ್ತಿದ್ದರೂ ಇಂದಿನ ದಿನಗಳಲ್ಲಿ ಅದು ವೈದ್ಯಕೀಯ ವೆಚ್ಚಕ್ಕೂ ಸಾಲದಾಗಿದೆ' ಎಂಬ ಕಳಕಳಿಯ ಮೂಲಕ ಸರ್ಕಾರದ ಗಮನ ಸೆಳೆದಿದೆ.

'ಹಣಕಾಸು ಸಚಿವಾಲಯವು ಕಾಲಕಾಲಕ್ಕೆ ಸಿಐಐ (Cost Inflation Index–ಹಣದುಬ್ಬರದಿಂದಾಗಿ ಹೆಚ್ಚಳವಾದ ವೆಚ್ಚದ ಸೂಚ್ಯಂಕ) ಪ್ರಕಟಿಸಿರುವುದನ್ನು ನೋಡಿದಾಗ, 2007-08ರಲ್ಲಿ ಸೂಚ್ಯಂಕ 129 ಆಗಿದ್ದರೆ, ಇಂದಿಗೆ ಅದು 363 ಇದೆ. ಅಂದರೆ, 2007ರಲ್ಲಿ ₹100ಗೆ ದೊರಕುತ್ತಿದ್ದ ವಸ್ತು, 2025ರಲ್ಲಿ ₹1 ಸಾವಿರಕ್ಕೆ ಏರಿಕೆಯಾಗಿದೆ. ಆಹಾರ, ವಾಸ ಸ್ಥಳ, ಔಷಧಿ ಬೆಲೆಗಳು ಗಗನಕ್ಕೇರಿವೆ. ಆದರೆ, ಪೋಷಕರ ಪಾಲನೆಯ ಭತ್ಯೆಯ ಮಿತಿ ₹10 ಸಾವಿರದಲ್ಲೇ ಅಚಲವಾಗಿ ನಿಂತಿದೆ. ಇಷ್ಟು ಕಡಿಮೆ ಭತ್ಯೆಯು ಈ ಕಾಯ್ದೆಯ ಉದ್ದೇಶಗಳನ್ನು ಸಾಧಿಸಬಲ್ಲದೇ' ಎಂದು ಪ್ರಶ್ನಿಸಿರುವ ನ್ಯಾಯಪೀಠ, 'ಕಲಂ 9ರ ವ್ಯಾಪ್ತಿಯಲ್ಲಿ ಒಬ್ಬ ಹಿರಿಯ ವ್ಯಕ್ತಿ ಗೌರವಯುತ ಜೀವನ ನಡೆಸಲು, ವೈದ್ಯಕೀಯ ನೆರವು ಪಡೆಯಲು ₹10 ಸಾವಿರ ಭತ್ಯೆಯಿಂದ ಮಾತ್ರ ಸಾಧ್ಯವೇ ಎಂಬ ಪ್ರಶ್ನೆಯನ್ನು ಕಡೆಗಣಿಸಿದ್ದೇ ಆದರೆ ಹಿರಿಯರ ಜೀವನವನ್ನು 'ಪ್ರಾಣಿಗಳ ಅಸ್ತಿತ್ವ'ಕ್ಕೆ ಇಳಿಸಿದಂತಾಗುತ್ತದೆ' ಎಂದು ಎಚ್ಚರಿಸಿದೆ.

ಕೇಂದ್ರ ಸರ್ಕಾರಕ್ಕೆ ಶಿಫಾರಸು

ಕೇಂದ್ರ ಸರ್ಕಾರವು ಕಲಂ 9ರ ಮಿತಿಯನ್ನು ಮರು ಪರಿಶೀಲಿಸಬೇಕು. ಜೀವನ ವೆಚ್ಚದ ಸೂಚ್ಯಂಕಕ್ಕೆ ಅನುಗುಣವಾಗಿ ಗಣನೀಯವಾಗಿ ಏರಿಸಲು ಮಾಸಿಕ ಪಾಲನೆಯ ಭತ್ಯೆಯ ಮಿತಿಗೆ ಅಗತ್ಯ ತಿದ್ದುಪಡಿ ತರಬೇಕು. ಆಗ ಮಾತ್ರ ಈ ಕಾಯ್ದೆ ಹಿರಿಯರ ಪಾಲಿಗೆ ಗೌರವಯುತ ಭರವಸೆಯಾಗಿ ಉಳಿಯುತ್ತದೆ. ದೇಶದ ಆಸ್ತಿಯನ್ನು ಅಳೆಯುವುದು, ಅಲ್ಲಿನ ಭೌತಿಕ ವಸ್ತುಗಳ ಪ್ರಗತಿಯಿಂದ ಮಾತ್ರವಲ್ಲ. ಬದಲಿಗೆ ಅಲ್ಲಿನ ಹಿರಿಯರ, ಮಕ್ಕಳ ಪೋಷಣೆ ಹಾಗೂ ಕಲ್ಯಾಣ ಎಷ್ಟರ ಮಟ್ಟಿಗಿದೆ ಎಂಬುದೂ ಅಷ್ಟೇ ಪ್ರಧಾನವಾದುದು.


ನ್ಯಾಯಾಲಯವು ತಾನೇ ಕಾನೂನು ಬರೆಯಲು ಸಾಧ್ಯವಿಲ್ಲ. ಆದರೆ, ಸರ್ಕಾರಕ್ಕೆ ಅರಿವು ಮೂಡಿಸುವ ಗುರುತರ ಜವಾಬ್ದಾರಿಯನ್ನಂತೂ ಹೊಂದಿದೆ. ಹೀಗಾಗಿ, 2007ರಲ್ಲಿ ಅರ್ಥಪೂರ್ಣವೆಂದು ಭಾವಿಸಲಾದ ಮಸೂದೆಯ ನಿಬಂಧನೆಗಳು 2025ರಲ್ಲಿ ಬದಲಾಗಬೇಕಾದ ಅನಿವಾರ್ಯ ಇದೆ ಎಂಬುದನ್ನು ನಾವು ಈ ಹಂತದಲ್ಲಿ ಎದೆಗೊತ್ತಿಕೊಳ್ಳಬೇಕು. ಪೋಷಕರ ಪಾಲನೆಯ ಭತ್ಯೆ ಕೇವಲ ಭ್ರಮೆ ಎನಿಸಬಾರದು. ವಾಸ್ತವದಲ್ಲಿ ಅದು ಅವರ ನೆರವಿಗೆ ಬರಬೇಕು. ಇಲ್ಲದಿದ್ದರೆ 'ಮರಳಿನ ಕಂಬ'ದಂತೆಯೇ ಕುಸಿದು ಬಿಡುತ್ತದೆ.



ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

'ವೃದ್ಧಾಪ್ಯದ ಮುಸ್ಸಂಜೆಯ ಬಾಳ್ವೆ ಇಂದು ದೇಶದ ಸಾಮಾಜಿಕ ಸವಾಲಾಗಿ ಪರಿಣಮಿಸಿದೆ. ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ–1860ರ (ಐಪಿಸಿ) ಅಡಿಯಲ್ಲಿ ವೃದ್ಧರು ತಮ್ಮ ಪೋಷಣೆ ಹಾಗೂ ನಿರ್ವಹಣೆಗಾಗಿ ಮಾಹೆಯಾನ ಭತ್ಯೆಗೆ ಹಣದ ಬೇಡಿಕೆ ಇಡಬಹುದಾಗಿದ್ದರೂ ಈ ನ್ಯಾಯಿಕ ಪ್ರಕ್ರಿಯೆ ದುಬಾರಿ ಹಾಗೂ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ' ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

'ಇಂದಿನ ಉಗ್ರರೂಪದ ದರ ಏರಿಕೆ ಹಾಗೂ ಜೀವನ ವೆಚ್ಚದ ಸೂಚ್ಯಂಕವನ್ನು ದಿಟ್ಟಿಸಿದರೆ ಪ್ರತಿಯೊಬ್ಬ ಹಿರಿಯರಿಗೆ, ಪೋಷಕರಿಗೆ ತಿಂಗಳ ₹10 ಸಾವಿರ ಪಾಲನೆ ಭತ್ಯೆಯನ್ನೂ ಗಮನಾರ್ಹವಾಗಿ ಏರಿಕೆ ಮಾಡುವುದು ಅತ್ಯಂತ ಸಮಂಜಸ. ಈ ತೀರ್ಪನ್ನು ಕೇವಲ ಈ ಪ್ರಕರಣವನ್ನು ಇತ್ಯರ್ಥ ಮಾಡಲು ನೀಡಿಲ್ಲ. ನಿರ್ಲಕ್ಷ್ಯಕ್ಕೊಳಗಾದ ಹಿರಿಯರ ಕುರಿತಾದ ವ್ಯಾಜ್ಯಗಳು ಕೋರ್ಟ್ ಮೆಟ್ಟಿಲು ತುಳಿದು ಬಂದಾಗ ನಮ್ಮ ಅಂತಃಕರಣ ಕಲಕುತ್ತದೆ. ಅದಕ್ಕಂದೇ ಅತೀವವಾಗಿ ಕಾಡುವ ವಿಷಾದದಲ್ಲಿ ಈ ತೀರ್ಪು ನೀಡಲಾಗಿದೆ. ನಮ್ಮ ಪೋಷಕರನ್ನು, ವೃದ್ಧರನ್ನು ನಾವು ಅಪಮಾನಗಳಿಗೆ ಈಡು ಮಾಡಬಾರದು. ಯಾವೊಬ್ಬ ಹಿರಿಯರ ಇಳಿಬಾಳು ಬಯಕೆಗಳ ಬುಟ್ಟಿಯಲ್ಲಿ ಬಾಡಬಾರದು. ನಮ್ಮ ಕಾಳಜಿಯ ಕಾವಿನಲ್ಲಿ ಅವರ ಜೀವಗಳು ಹೊಳೆಯಬೇಕು. ಈ ಮಾತುಗಳನ್ನು ಶಾಸಕಾಂಗ ಸಂವೇದನಾಶೀಲತೆಯಿಂದ ಸ್ವೀಕರಿಸಬೇಕು' ಎಂದು ಸೂಚಿಸಿದೆ.



ಯಾವುದೀ ಪ್ರಕರಣ?

ಬೆಂಗಳೂರಿನ ಜಯನಗರದ ವೃದ್ಧ ದಂಪತಿ ಮತ್ತು ಅವರ ಮಕ್ಕಳಿಗೆ ಸಂಬಂಧಿಸಿದ ಈ ಪ್ರಕರಣವನ್ನು ಮೊದಲಿಗೆ ಸಕ್ಷಮ ಪ್ರಾಧಿಕಾರವಾದ ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿ ವಿಚಾರಣೆ ನಡೆಸಿದ್ದರು. ಪತಿ–ಪತ್ನಿಯ ಅಹವಾಲಿಗೆ ಕಿವಿಯಾಗಿದ್ದ ಪ್ರಾಧಿಕಾರ, '₹5 ಲಕ್ಷ ಮೊತ್ತವನ್ನು ಈ ಆದೇಶ ತಲುಪಿದ 15 ದಿನಗಳ ಒಳಗಾಗಿ ಅರ್ಜಿದಾರರಾಗಿರುವ 66 ವರ್ಷದ ಪತಿ ಮತ್ತು ಅವರ 60 ವರ್ಷದ ಪತ್ನಿಗೆ ನೀಡಬೇಕು ಮತ್ತು ಅವರ ವಾಸಸ್ಥಳಕ್ಕೆ ಸಂಬಂಧಿಸಿದಂತೆ ಅವರು ಕೇಳುತ್ತಿರುವ ಸ್ಥಿರಾಸ್ತಿಯನ್ನು ಅವರ ಅನುಭೋಗಕ್ಕೆ ಬಿಟ್ಟುಕೊಡಬೇಕು' ಎಂದು ಅವರ ಮಕ್ಕಳಿಗೆ ಆದೇಶಿಸಿತ್ತು.

ನಾಲ್ವರು ಗಂಡು ಮಕ್ಕಳು ಹಾಗೂ ಒಬ್ಬ ಸೊಸೆ ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಕುರಿತಾದ ರಿಟ್ ಅರ್ಜಿಯನ್ನು (ಡಬ್ಲ್ಯು.ಪಿ ಸಂಖ್ಯೆ:13448/2025–ಜಿಎಂ–ಆರ್‌ಇಎಸ್) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈಗ ವಿಲೇವಾರಿ ಮಾಡಿದೆ. ವೃದ್ಧ ದಂಪತಿ ಪರವಾಗಿ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ವಾದ ಮಂಡಿಸಿದ್ದರು.

ಆದೇಶ: ಉಪ ವಿಭಾಗಾಧಿಕಾರಿ ಆದೇಶವನ್ನು ರದ್ದುಗೊಳಿಸಿರುವ ನ್ಯಾಯಪೀಠ, ಪೋಷಕರ ಮನವಿಯನ್ನು ಮರುಪರಿಶೀಲನೆ ಮಾಡಬೇಕು. ವಿಚಾರಣೆ ಸಮಯದಲ್ಲಿ ಉಪ ವಿಭಾಗಾಧಿಕಾರಿಯು ಕೋರ್ಟ್ ಈ ತೀರ್ಪಿನಲ್ಲಿ ಅವಲೋಕಿಸಿರುವ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ನ್ಯಾಯಿಕ ಪ್ರಕ್ರಿಯೆ ಮುಂದುವರಿಸಿ ಸೂಕ್ತ ಆದೇಶ ಹೊರಡಿಸಬೇಕು. ಉಪವಿಭಾಗಾಧಿಕಾರಿ ಆದೇಶ ಹೊರಡಿಸುವ ತನಕ ಪ್ರತಿವಾದಿ (ಪತಿ–ಪತ್ನಿ) ಪೋಷಕರಿಗೆ ಪ್ರತಿ ತಿಂಗಳೂ ₹10 ಸಾವಿರ ನಿರ್ವಹಣಾ ವೆಚ್ಚವನ್ನು 2021ರ ಏಪ್ರಿಲ್ 16ರಿಂದಲೇ ನೀಡಬೇಕು. ಈ ತೀರ್ಪು ಪ್ರಕಟವಾದ ದಿನದಿಂದ ₹10 ಸಾವಿರ ನಿರ್ವಹಣಾ ವೆಚ್ಚವನ್ನು ₹30 ಸಾವಿರಕ್ಕೆ ಏರಿಕೆ ಮಾಡಿ ಐವರೂ ಅರ್ಜಿದಾರರು ನೀಡಬೇಕು. ಈ ತೀರ್ಪಿನ ಪ್ರತಿಯನ್ನು ರಿಜಿಸ್ಟ್ರಾರ್ ಜನರಲ್ ಅವರು ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರಿಗೆ ಮತ್ತು ಕೇಂದ್ರ ಹಣಕಾಸು ಸಚಿವಾಲಯಕ್ಕೆ ರವಾನಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

ಕಾಯ್ದೆ ಅನುಷ್ಠಾನ



'ಭಾರತೀಯ ಸಮಾಜದ ಪಾರಂಪರಿಕ ಮೌಲ್ಯಗಳಲ್ಲಿ ಹಿರಿಯರ ಆರೈಕೆಗೆ ಹೆಚ್ಚು ಒತ್ತು ಕೊಡಬೇಕು. ಆದರೆ, ಭರದಿಂದ ಚಲಿಸುತ್ತಿರುವ ಸಮಾಜದಲ್ಲಿ ಅವಿಭಜಿತ ಕುಟುಂಬದ ವ್ಯವಸ್ಥೆ ಕುಸಿಯುತ್ತಿದೆ. ಇಂತಹ ಕುಟುಂಬಗಳಲ್ಲಿನ ಹಿರಿಯರನ್ನು ಅದರಲ್ಲೂ ವಿಧವೆಯರು, ವೃದ್ಧರು ತಮ್ಮ ವೃದ್ಧಾಪ್ಯವನ್ನು ಭಾವನಾತ್ಮಕ ನಿರ್ಲಕ್ಷ್ಯ, ದೈಹಿಕ ಮತ್ತು ಆರ್ಥಿಕ ನೆರವಿನ ಕೊರತೆಗಳಲ್ಲಿ ಸಿಲುಕಿ ಒಂಟಿಯಾಗಿ ಬದುಕುವಂತಾಗಿದೆ' ಎಂಬ ಕಾರಣಗಳಿಗಾಗಿ 'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ'ಯನ್ನು 2007ರಲ್ಲಿ ಜಾರಿಗೆ ತರಲಾಯಿತು.

ಈ ಕಾಯ್ದೆಯು ಮಕ್ಕಳಿಂದ ಅಥವಾ ಹಿರಿಯ ಸಂಬಂಧಿಕರ ಆಸ್ತಿಯನ್ನು ಸ್ವೀಕರಿಸಿದವರ ಮೇಲೆ ಆ ಹಿರಿಯರನ್ನು ಪಾಲಿಸುವ ಜವಾಬ್ದಾರಿ ವಿಧಿಸುವ ಉದ್ದೇಶ ಹೊಂದಿದೆ. ಹಾಗೆಯೇ ಬಡತನದಲ್ಲಿರುವ ಹಿರಿಯರ ನೆರವಿಗಾಗಿ ವೃದ್ಧಾಶ್ರಮಗಳನ್ನು ಸ್ಥಾಪಿಸುವುದಕ್ಕೂ ಅವಕಾಶ ನೀಡುತ್ತದೆ. ಅವರಿಗೆ ಉತ್ತಮ ವೈದ್ಯಕೀಯ ಸೌಲಭ್ಯ ಒದಗಿಸಲು ಹಾಗೂ ಅವರ ಜೀವ–ಆಸ್ತಿಗೆ ರಕ್ಷಣೆಯನ್ನು ಒದಗಿಸುವ ಕ್ರಮಗಳ ಬಗ್ಗೆಯೂ ಪ್ರಸ್ತಾಪಿಸುತ್ತದೆ.

ಪೋಷಕರು–ಹಿರಿಯರಿಗೆ ಅವರ ಅವಶ್ಯಕತೆಯ ಆಧಾರದಡಿ ಅವರ ಪಾಲನೆಗಾಗಿ ಸೂಕ್ತ ವ್ಯವಸ್ಥೆಯ ಸ್ಥಾಪನೆ, ಉತ್ತಮ ವೈದ್ಯಕೀಯ ಸೌಲಭ್ಯ ನೀಡುವುದು, ಹಿರಿಯರ ಜೀವ ಮತ್ತು ಆಸ್ತಿ ರಕ್ಷಣೆಗೆ ಸೂಕ್ತ ವ್ಯವಸ್ಥೆ ಸ್ಥಾಪಿಸುವುದು, ಪ್ರತೀ ಜಿಲ್ಲೆಯಲ್ಲಿ ವೃದ್ಧಾಶ್ರಮ ಸ್ಥಾಪಿಸುವುದು ಮುಂತಾದ ಪ್ರಮುಖ ಅಂಶಗಳು ಇದರಲ್ಲಿ ಅಡಕವಾಗಿವೆ. ಮೂಲ ಕಾಯ್ದೆಯು ಹಠಾತ್ ರೂಪುಗೊಂಡದ್ದಲ್ಲ. ಇದು ಭಾರತದ ಸಂವಿಧಾನದ 41ನೇ ವಿಧಿಯನ್ನು ಅನುಸರಿಸಿ ರೂಪುಗೊಂಡಿರುವ ನಮ್ಮ ರಾಜ್ಯದ ಆರ್ಥಿಕ ಬಲದ ದಿಕ್ಸೂಚಿಯೊಂದಿಗೆ ನಿರುದ್ಯೋಗ, ಅನಾರೋಗ್ಯ, ಅಂಗವೈಕಲ್ಯ, ವೃದ್ಧಾಪ್ಯ ಮುಂತಾದ ದುರ್ಬಲ ಸ್ಥಿತಿಗಳ ಸಂದರ್ಭಗಳಲ್ಲಿ ನೀಡಲಾಗುವ ನೆರವಿನ ಶಾಸಕಾಂಗದ ಒಳದನಿ. ಈ ಕಾಯ್ದೆ 2007ರ ಡಿಸೆಂಬರ್ 29ರಂದು ಜಾರಿಗೆ ಬಂದ ನಂತರ ಅನೇಕ ಬಾರಿ ತಿದ್ದುಪಡಿಗೆ ಒಳಗಾಗಿದೆ.

2019ರಲ್ಲಿ ತರಲಾದ ತಿದ್ದುಪಡಿ ಮಸೂದೆಯ ಅನುಸಾರ ಹಿರಿಯರು ಅಥವಾ ಪೋಷಕರಿಗೆ ನೀಡಲಾಗುವ ಮಾಸಿಕ ಭತ್ಯೆಯ ಬಗ್ಗೆ ಕಲಂ 9ರ ಅಡಿಯಲ್ಲಿ ವಿಶೇಷವಾಗಿ ವಿವರಿಸಿ ಅದರ ಬದಲಾವಣೆಯನ್ನು ನಿರ್ದಿಷ್ಟಪಡಿಸಲಾಯಿತು.

ಆ ಬದಲಾವಣೆಯ ರೂಪ ಹೀಗಿತ್ತು

- ಪೋಷಕರು ಅಥವಾ ಹಿರಿಯರನ್ನು ನಿರ್ಲಕ್ಷಿಸುವ ಅಥವಾ ಪಾಲನೆ ಮಾಡಲು ನಿರಾಕರಿಸುವ ಮಕ್ಕಳ ವಿರುದ್ಧ ಅಥವಾ ಸಂಬಂಧಿಕರ ವಿರುದ್ಧ, ಹಿರಿಯರು ತಮ್ಮ ನಿರ್ವಹಣೆಯನ್ನು ಮಾಡಲಾಗದೆ, ಗೌರವಯುತವಾಗಿ ಜೀವನ ನಡೆಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಇದ್ದಾರೆ ಎಂಬುದನ್ನು ನ್ಯಾಯಮಂಡಳಿ ಮನವರಿಕೆ ಮಾಡಿಕೊಳ್ಳಬೇಕು. ಇಂತಹ ಸಂದರ್ಭದಲ್ಲಿ ನ್ಯಾಯಮಂಡಳಿಯು, ಆ ಮಕ್ಕಳು ಅಥವಾ ಸಂಬಂಧಿಕರು ಅಂತಹ ಪೋಷಕರು /ಹಿರಿಯರಿಗೆ ಪ್ರತಿ ತಿಂಗಳ ಪಾಲನೆ ಭತ್ಯೆ ಅಥವಾ ಬೇರೆ ಅಗತ್ಯ ನೆರವುಗಳನ್ನು ನೀಡುವಂತೆ ಆದೇಶಿಸಬಹುದು.
- ಪಾಲನೆಗೆ ನೀಡುವ ಮೊತ್ತದ ಬಗ್ಗೆ ನಿರ್ಧರಿಸುವಾಗ, ನ್ಯಾಯಮಂಡಳಿಯು ಆ ಹಿರಿಯರ ಜೀವನದ ಮಟ್ಟ, ಶೈಲಿ ಮತ್ತು ಅವರ ಹಾಗೂ ಮಕ್ಕಳ ಇಲ್ಲವೇ ಸಂಬಂಧಿಕರ ಆದಾಯಗಳನ್ನು ಪರಿಗಣಿಸಬಹುದು.
- ಪಾಲನೆ ಆದೇಶವು, ಆದೇಶದ ದಿನಾಂಕದಿಂದಲೇ ಜಾರಿಗೆ ಬರಬಹುದು ಅಥವಾ ಅರ್ಜಿಯ ದಿನಾಂಕದಿಂದಲೂ ಅನ್ವಯಿಸಬಹುದು.
- ಪಾಲನೆಯ ಆದೇಶದ ಪ್ರತಿಯನ್ನು
  - (i) ಉಚಿತವಾಗಿ ಪೋಷಕರಿಗೆ ಅಥವಾ ಹಿರಿಯರಿಗೆ ನೀಡಬೇಕು
  - (ii) ನ್ಯಾಯಮಂಡಳಿಯ ನೋಟಿಸ್ ಬೋರ್ಡ್ ಮೇಲೆ ಪ್ರದರ್ಶಿಸಬೇಕು
  - (iii) ಸಂಬಂಧಿಸಿದ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು
  - (iv) ಪಾಲನೆ ಅಧಿಕಾರಿಗೆ ನೀಡಬೇಕು.
- ಒಂದು ವೇಳೆ ಒಬ್ಬರಿಗಿಂತ ಹೆಚ್ಚಿನವರ ವಿರುದ್ಧ ಹಿರಿಯರ ಪಾಲನೆಯ ಆದೇಶವಾಗಿದ್ದಲ್ಲಿ, ಅವರಲ್ಲಿ ಒಬ್ಬರು ಮೃತಪಟ್ಟರೂ ಉಳಿದವರು ಹಿರಿಯರ ಪೋಷಣೆಯ ಜವಾಬ್ದಾರಿಯನ್ನು ಮುಂದುವರಿಸಬೇಕಾಗಿರುತ್ತದೆ.

ಕಲಂ 9ರ ಪಾಲನೆಯ ಆದೇಶ

(1) ಪೋಷಕರು ಅಥವಾ ಹಿರಿಯರನ್ನು ಪಾಲನೆ ಮಾಡಲು ಮಕ್ಕಳು ಅಥವಾ ಸಂಬಂಧಿಕರು ನಿರಾಕರಿಸಿದಲ್ಲಿ, ನ್ಯಾಯಮಂಡಳಿ ಅವರಿಗೆ ಪ್ರತಿ ತಿಂಗಳ ಪಾಲನೆಗೆ ಭತ್ಯೆಯನ್ನು ನೀಡಲು ಆದೇಶಿಸಬಹುದು.

(2) ರಾಜ್ಯ ಸರ್ಕಾರ ನಿಗದಿಪಡಿಸಿದ ಗರಿಷ್ಠ ಪಾಲನೆಯ ಭತ್ಯೆ ₹10 ಸಾವಿರ ಮೀರಬಾರದು.

ಈ ಕಾಯ್ದೆಯ ಮೂಲ ಉದ್ದೇಶಗಳು

(i) ಅಗತ್ಯ ಆಧಾರಿತ ಪಾಲನೆ

(ii) ಉತ್ತಮ ವೈದ್ಯಕೀಯ ಸೌಲಭ್ಯ

(iii) ರಕ್ಷಣೆಗೆ ಸೂಕ್ತ ವ್ಯವಸ್ಥೆ.



ರಾಷ್ಟ್ರೀಯ

ಹೈಕೋರ್ಟ್ ಆದೇಶ ಪ್ರಶ್ನಿಸಿ 'ಸುಪ್ರೀಂ'ಗೆ ಉಮರ್ ಖಾಲಿದ್



ನವದೆಹಲಿ (ಪಿಟಿಐ): 2020ರಲ್ಲಿ ರಾಜಧಾನಿ ದೆಹಲಿಯಲ್ಲಿ ನಡೆದಿದ್ದ ಹಿಂಸಾಚಾರಕ್ಕೆ ಪಿತೂರಿ ನಡೆಸಿದ ಆರೋಪ ಹೊತ್ತ ಪ್ರಕರಣದಲ್ಲಿ ಜಾಮೀನು ಅರ್ಜಿ ತಿರಸ್ಕರಿಸಿರುವ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಹೋರಾಟಗಾರ ಉಮರ್ ಖಾಲಿದ್ ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.

ಸೆಪ್ಟೆಂಬರ್ 2ರಂದು ಖಾಲಿದ್, ಶರ್ಜೀಲ್ ಇಮಾಮ್ ಸೇರಿ ಒಂಬತ್ತು ಜನರಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿತ್ತು. ಕಳೆದ ವಾರ ಇಮಾಮ್ ಮತ್ತು ಗಲ್ಫಿಶಾ ಫಾತಿಮಾ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

'ಸಂವಿಧಾನ ಈ ದೇಶದ ನಾಗರಿಕರಿಗೆ ಪ್ರತಿಭಟಿಸುವ ಅವಕಾಶ ಕಲ್ಪಿಸಿದೆ. ಆದರೆ ಅದು ಕಾನೂನಿನ ಮಿತಿಯಲ್ಲಿರಬೇಕು. ಪ್ರತಿಭಟನೆಯಲ್ಲಿ ಹಿಂಸಾಚಾರ ನಡೆಸುವ ಪಿತೂರಿಯನ್ನು ಸಹಿಸಲಾಗದು' ಎಂದು ಜಾಮೀನು ನಿರಾಕರಿಸುವ ವೇಳೆ ಹೈಕೋರ್ಟ್ ಹೇಳಿತ್ತು.

ಸಿಎಎ ಮತ್ತು ಎನ್‌ಆರ್‌ಸಿ ವಿರೋಧಿಸಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಹಿಂಸಾಚಾರ ನಡೆದಿತ್ತು. ಖಾಲಿದ್ ಸೇರಿ ಇತರೆ ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಾಗಿತ್ತು. 2020ರಿಂದಲೂ ಜೈಲಿನಲ್ಲಿರುವ ಆರೋಪಿಗಳು ವಿಚಾರಣಾ ನ್ಯಾಯಾಲಯದ ನಂತರ ಹೈಕೋರ್ಟ್‌ನಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಅಲ್ಲದೇ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದರು.

ಉಗ್ರನಿಗೆ ನೆರವು: ಜಮ್ಮು ಕಾಶ್ಮೀರ ಪೊಲೀಸರಿಂದ ಎರಡು ಕಡೆ ದಾಳಿ


ಶ್ರೀನಗರ (ಪಿಟಿಐ): ಹಿಜ್ಬುಲ್ ಮುಜಾಹಿದೀನ್ ಭಯೋತ್ಪಾದಕ ಪರಾರಿಯಾದ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯ ತನಿಖಾ ಸಂಸ್ಥೆಯು (ಎಸ್‌ಐಎ) ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಮತ್ತು ಪುಲ್ವಾಮ ಜಿಲ್ಲೆಗಳ ಎರಡು ಸ್ಥಳಗಳಲ್ಲಿ ಬುಧವಾರ ಮುಂಜಾನೆ ದಾಳಿ ನಡೆಸಿದೆ.

2005ರಲ್ಲಿ ಹಿಜ್ಬುಲ್ ಮುಜಾಹಿದೀನ್‌ನ ವಿಭಾಗೀಯ ಕಮಾಂಡರ್ ಅಮೀನ್ ಬಾಬಾ ಪಾಕಿಸ್ತಾನಕ್ಕೆ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆಸಲಾಗಿದೆ ಎಂದು ಎಸ್‌ಐಎ ವಕ್ತಾರರು ತಿಳಿಸಿದ್ದಾರೆ. ಮಾಜಿ ಶಾಸಕ ಗುಲ್ ರಫೀಕಿ ಮತ್ತು ಇತರರ ನೆರವಿನಿಂದ ಬಾಬಾ ಪರಾರಿಯಾಗಿದ್ದಾನೆ ಎಂದು ಅವರು ಹೇಳಿದ್ದಾರೆ.

ಆರೋಪಿಗಳು ಬಾಗಾಗೆ ನಕಲಿ ಪಾಸ್‌ಪೋರ್ಟ್ ವ್ಯವಸ್ಥೆ ಮಾಡಲು ಸಹಾಯ ಮಾಡಿದ್ದರು ಮತ್ತು ಆತನನ್ನು ಅನಂತನಾಗ್‌ನಿಂದ ಅಟಾರಿಗೆ ಆಗಿನ ಶಾಸಕರ ಅಧಿಕೃತ ವಾಹನದಲ್ಲಿ ಸಾಗಿಸಿದ್ದರು. ಇದರಿಂದಾಗಿ ಆತ ಪಾಕಿಸ್ತಾನ ತಲುಪುವುದು ಸಾಧ್ಯವಾಯಿತು ಎಂದು ವಕ್ತಾರರು ಹೇಳಿದ್ದಾರೆ.

ಈ ಬಗ್ಗೆ 2005 ರಲ್ಲಿ ಬಿಜ್‌ಬೆಹರಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಅದನ್ನು 2023ರಲ್ಲಿ ಎಸ್‌ಐಎ ಕಾಶ್ಮೀರಕ್ಕೆ ವರ್ಗಾಯಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

'ರಾಜ್ಯ ಸ್ಥಾನಮಾನಕ್ಕಾಗಿ ಸತ್ಯಾಗ್ರಹ'



ಸೋನಮ್ ವಾಂಗ್ಚುಕ್

ನವದೆಹಲಿ (ಪಿಟಿಐ): ಲಡಾಖ್‌ಗೆ ರಾಜ್ಯ ಸ್ಥಾನಮಾನ ನೀಡುವುದರ ಜೊತೆಗೆ ಅದನ್ನು ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸುವಂತೆ ಒತ್ತಾಯಿಸಿ ಲೇಹ್‌ನಲ್ಲಿ 35 ದಿನಗಳ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಬುಧವಾರ ತಿಳಿಸಿದ್ದಾರೆ. ಲೇಹ್ ಅಪೆಕ್ಸ್ ನಿಯೋಗ (ಎಲ್‌ಎಬಿ) ಕೂಡ ಇದನ್ನು ಸ್ಪಷ್ಟಪಡಿಸಿದೆ.

'ಕಳೆದ ಎರಡು ತಿಂಗಳಿಂದ ನಮ್ಮ ಬೇಡಿಕೆಗಳ ಕುರಿತು ಕೇಂದ್ರ ಗೃಹ ಸಚಿವಾಲಯವು ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ಉಪವಾಸ ಸತ್ಯಾಗ್ರಹ ಕೈಗೊಳ್ಳಲು ನಿರ್ಧರಿಸಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ವಾಂಗ್ಚುಕ್ ತಿಳಿಸಿದರು.

ಲೇಹ್‌ನ ಹಿಲ್ ಕೌನ್ಸಿಲ್ ಚುನಾವಣೆ ಶೀಘ್ರವೇ ನಡೆಯಲಿದ್ದು, ಕೇಂದ್ರ ಸರ್ಕಾರವು ಕಳೆದ ಬಾರಿಯ ಚುನಾವಣೆಯಲ್ಲೇ ಲಡಾಖ್ ಅನ್ನು ಸಂವಿಧಾನದ 6ನೇ ಪರಿಚ್ಛೇದಕ್ಕೆ ಸೇರಿಸುವುದಾಗಿ ಭರವಸೆ ನೀಡಿತ್ತು. ಇದನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಗಾಂಧಿ ಜಯಂತಿಯು ಸತ್ಯಾಗ್ರಹದ ಪ್ರಮುಖ ದಿನವಾಗಲಿದೆ ಎಂದೂ ಅವರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಮಾತನಾಡುತ್ತಿರುವ 27 ಸೆಕೆಂಡುಗಳ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಆಪರೇಷನ್ ಸಿಂಧೂರದ ಸಮಯದಲ್ಲಿ ಮೋದಿ ಸರ್ಕಾರವು ರಾಜಕೀಯ ಕಾರಣಗಳಿಗಾಗಿ ಪಾಕಿಸ್ತಾನಕ್ಕೆ ಬಲವಾದ ಏಟು ನೀಡಲು ಅನುಮತಿ ನೀಡದೇ ಇದ್ದುದರಿಂದ ಭಾರತೀಯ ವಾಯುಪಡೆ ತುಂಬಾ ನಷ್ಟವನ್ನು ಅನುಭವಿಸಬೇಕಾಯಿತು' ಎಂದು ಆ ವಿಡಿಯೊದಲ್ಲಿ ಹೇಳುವುದು ಕೇಳಿಸುತ್ತಿದೆ. ಆದರೆ. ಇದು ಸುಳ್ಳು.



ಆಗಸ್ಟ್ 26ರಂದು ನಡೆದ ಹೊಸ ಯುದ್ಧ ನೌಕೆಗಳಾದ ಐಎನ್‌ಎಸ್ ಉದಯಗಿರಿ ಮತ್ತು ಐಎನ್‌ಎಸ್ ಹಿಮಗಿರಿಗಳ ಸೇರ್ಪಡೆ ಕಾರ್ಯಕ್ರಮದಲ್ಲಿ ತ್ರಿಪಾಠಿ ಅವರು ಮಾಡಿದ್ದ ಭಾಷಣವನ್ನು ಭಾರತೀಯ ನೌಕಾ ಪಡೆಯ ಯೂಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರ ಮಾಡಲಾಗಿತ್ತು. ಆ ಭಾಷಣವನ್ನು ಕೇಳಿದಾಗ ಮೊದಲಾರ್ಧದಲ್ಲಿ ಆಪರೇಷನ್ ಸಿಂಧೂರದ ಬಗ್ಗೆ ಅವರು ಪ್ರಸ್ತಾಪಿಸುತ್ತಾರೆ. ಆದರೆ, ಎಲ್ಲೂ ಅವರು ಈ ಕಾರ್ಯಾಚರಣೆ ವಿಚಾರವಾಗಿ ಕೇಂದ್ರ ಸರ್ಕಾರವನ್ನು ಟೀಕಿಸಿ ಮಾತನಾಡುವುದಿಲ್ಲ. ವಿಡಿಯೊ ತುಣುಕಿನ ಸತ್ಯಾಸತ್ಯತೆಯನ್ನು ತಿಳಿಯುವುದಕ್ಕಾಗಿ ಡೀಪ್‌ಫೇಕ್ ಅನ್ನು ಪತ್ತೆ ಹಚ್ಚುವ ಡೀಪ್‌ಫೇಕ್–ಒ–ಮೀಟರ್ ಮತ್ತು ರೆಸೆಂಬಲ್ ಎಐ ಎಂಬ ಎಐ ಧ್ವನಿ ಪತ್ತೆ ಟೂಲ್ ಅನ್ನು ಬಳಸಲಾಯಿತು. ವಿಡಿಯೊವನ್ನು ಎಐ ಮೂಲಕ ತಿರುಚಿರುವುದು ಮತ್ತು ಎಐ ಧ್ವನಿಯನ್ನು ಸೇರ್ಪಡೆಗೊಳಿಸಿರುವುದನ್ನು ಈ ಟೂಲ್‌ಗಳು ಪತ್ತೆ ಹಚ್ಚಿದವು. ಎಐ ತಂತ್ರಜ್ಞಾನ ಬಳಸಿಕೊಂಡು ತಿರುಚಿದ ವಿಡಿಯೊ ಆಡಿಯೊವನ್ನು ಪೋಸ್ಟ್ ಮಾಡಿ ನೌಕಾಪಡೆ ಮುಖ್ಯಸ್ಥರು ಕೇಂದ್ರ ಸರ್ಕಾರವನ್ನು ಟೀಕಿಸಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6161


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ತಡವಾಗಿ ತಲುಪಿ ನೋಡಿರುವ ಜಲಪಾತ (4)
5.ಕಮರಿ ಹತ್ತಿರ ಹೆಣ್ಣು ದುಂಬಿ ಹಾರಿ ಬಂದಿದೆ (4)
7.ಗಿರಿಯ ಬಳಿ ಸೆರೆ ಹಿಡಿಯುವುದು (4)
9.ಗುಂಗುರು ಕೂದಲು ನೋಡುತ್ತಲೇ ಈ ಗೀಳು! (2)
11.ಬಯಕೆಗೊಂದು ಪರ್ಯಾಯ ಪದ(2)
12.ಬಿರುಸಾದ ಮಾತು (4)
15.ಮನದೊಳಗಿರುವ ಕುಲ (4)
16.ಉಡಿದಾರವನ್ನು ಹೀಗೂ ಹೇಳುವರು (4)

ಮೇಲಿಂದ ಕೆಳಕ್ಕೆ

1.ಲಕ್ಷಿಸಲು ಯೋಗ್ಯವಾದುದು (4)
2.ಹುರಿಯಾಳು ಹಿಡಿದಿರುವ ದಾರ (2)
3.ತರಿಯನ್ನು ತರಲು ಇಷ್ಟೇಕೆ ಅವಸರ? (4)
4.ಕುಟೀರವಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (4)
6.ಹತ್ತು ವರ್ಷಗಳ ಅವಧಿ ತಿರುವುಮುರುವಾಗಿದೆ (3)
8.ಹೊಳಪಿನ ಲೇಪನವಿದು (3)
9.ಒಂದು ಎಕರೆಯ ನಲ್ವತ್ತನೇ ಒಂದು ಭಾಗ (2)
10.ಹಾವಸೆ ಬೆಳೆದ ಜಾಗದಲ್ಲಿ ಬಿಡಿಸಿದ ರಂಗೋಲಿ (2)
11.ಆತಂಕ ಹುಟ್ಟಿಸಿದ ಅತಿಥಿ! (4)
12.ಕೈಯಲ್ಲಿರುವ ಪ್ರಚಾರದ ಚೀಟಿ (4)
13.ಶೀತವಿಲ್ಲಿ ಉಲ್ಟಾಪಲ್ಟಾ ಆಗಿದೆ (3)
14.ತೆಳ್ಳನೆಯ ಸೊಂಟ (4)
15.ವಿಷ್ಣುವಿನ ದಶಾವತರದಲ್ಲಿ ಮೊದಲನೆಯದು(2)



6160ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವನಮಹೋತ್ಸವ
4.ಸಾರಂಗ 7.ಹಗರಣ
8.ತುಕಡಿ 10.ವಾಲಗ
12.ಚಲಾವಣೆ 14.ಕಮಾನು
16.ಅಕ್ಷತಾರೋಪಣ

ಮೇಲಿಂದ ಕೆಳಕ್ಕೆ:
2.ನವರಂಗ 3.ವಸಾಹತು
5.ಗರಡಿ 6.ಗುಣವಾಚಕ
7.ಹಮಾಲ 9.ಕವಣೆ
10.ವಾರ್ತಿಕ 11.ಗರಾನುಅ
13.ವಭುರಾಪ

ಸುಡೊಕು 6545

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		7					5	
	6		4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

6544 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ನನ್ನ ದೇವರು



ನುಡಿ ಬೆಳಗು

ಪಿ.ಚಂದ್ರಿಕಾ

ನನ್ನ ಪರಿಚಿತ ಸಾಹಿತಿಯೊಬ್ಬರ ಸಂಬಂಧಿಗೆ ಬಾಡಿಗೆ ಮನೆ ನೋಡಲು ಹೋದಾಗ ಬಾಡಿಗೆ, ಮುಂಗಡ ಹಣ ಎಲ್ಲ ಒಪ್ಪಿಗೆಯಾಗಿ ಕೊನೆಯಲ್ಲಿ ಅವರು ಕೇಳಿದ ಪ್ರಶ್ನೆ: 'ನೀವು ಯಾವ ಜನ?'. ಇಂಥವರು ಎಂದು ಗೊತ್ತಾದ ಮೇಲೆ ಆ ಕ್ಷಣ ಸುಮ್ಮನಿದ್ದು ಮಾರನೆಯ ದಿನ, 'ಅಯ್ಯೋ ನನಗೆ ಗೊತ್ತಿರಲಿಲ್ಲ. ಮೊನ್ನೆಯೇ ಯಾರೋ ಟೋಕನ್ ಅಡ್ವಾನ್ಸ್ ಮಾಡಿದ್ದಾರಂತೆ, ಕ್ಷಮಿಸಿ' ಎನ್ನುವ ಉತ್ತರ. ಆಗ ನೆನಪಾಗಿದ್ದೇ ಆತ್ಮಾನಂದರು ಎನ್ನುವ ಅರವಿಂದರ ಅನುಯಾಯಿ ಹೇಳಿದ್ದ ಈ ಕಥೆ.

ಊರವರೆಲ್ಲಾ ಸೇರಿ ಗುರುವೊಬ್ಬನನ್ನು ಪ್ರವಚನ ಹೇಳುವಂತೆ ಊರಿಗೆ ಕರೆಸಿದ್ದರು. ಗುರುವಿನ ಆಗಮನದಿಂದ ಊರಲ್ಲಿ ಸಂಭ್ರಮ ಮನೆ ಮಾಡಿತ್ತು. ಬೆಳಿಗ್ಗೆ ಪೂಜೆ ಪುನಸ್ಕಾರಗಳ ನಂತರ, ಊರವರ ಜೊತೆ ಮಾತುಕತೆ. ಒಂದು ಬೆಳಿಗ್ಗೆ ಗುರುಗಳು ಪೂಜೆಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರು. ಆಗ ಊರಿನ ಒಬ್ಬ ಮನುಷ್ಯ ಕೈಗಳಲ್ಲಿ ಅದೇ ತಾನೇ ಕಿತ್ತು ತಂದಿದ್ದ ತಾವರೆ ಹಿಡಿದು ಅಲ್ಲಿಗೆ ಬಂದ. ಹೂಗಳನ್ನು ನೋಡಿ ಗುರುಗಳು, 'ಆಹಾ ಇವತ್ತು ನನ್ನ ದೇವರು ಎಂಥಾ ಪುಣ್ಯ ಮಾಡಿದ್ದ. ಇಷ್ಟು ಚೆನ್ನಾಗಿರುವ ಹೂಗಳನ್ನು ಮುಡಿದುಕೊಳ್ಳುತ್ತಾನಲ್ಲಾ' ಎಂದರು. ಅದನ್ನು ಕೇಳಿದ ಊರಿನವರು, 'ಗುರುಗಳೇ ಅವನು ಅಂತ್ಯಜ' ಎಂದರು. ಅವನನ್ನು ದಿಟ್ಟಿಸಿದ ಗುರು ಅಂತ್ಯಜನ ಕೈಹಿಡಿದು ದೇವರ ಮನೆಯೊಳಗೆ ಕರೆದುಕೊಂಡು ಹೋಗಿ, 'ನನ್ನ ದೇವರಿಗೆ ನೀನೇ ಹೂವನ್ನಿಡು' ಎನ್ನುತ್ತಾರೆ. ಇದೆಲ್ಲಾ ಗಮನಿಸುತ್ತಿದ್ದ ಒಬ್ಬನು ಸುದ್ದಿಯನ್ನು ಊರವರಿಗೆ ಮುಟ್ಟಿಸುತ್ತಾನೆ. ಜನ ಕೋಪಗೊಂಡು ದಂಡುಕಟ್ಟಿಕೊಂಡು ಬರುತ್ತಾರೆ.

'ಹೀಗೆ ಜಾತಿಯಲ್ಲದವರನ್ನು ಮನೆಯೊಳಗೆ ಅದರಲ್ಲೂ ದೇವರ ಮನೆಯೊಳಗೆ ಬಿಟ್ಟುಕೊಳ್ಳುವುದು ಸರಿಯಾ' ಊರವರ ಪ್ರಶ್ನೆ ಗುರುವಿಗೆ ತುಂಬಾ ಕ್ಲೇಷೆ ಅನ್ನಿಸಿತು. 'ಯಾಕೆ ಬಿಟ್ಟುಕೊಂಡರೆ ಏನಾದೀತು?' ಎಂದರು. 'ಒಂದು ಪದ್ಧತಿ ಬೇಡವಾ? ದೇವರನ್ನು ಮೈಲಿಗೆ ಮಾಡಿಬಿಟ್ಟಿರಿ' ಎಂದರು ಕಡುಕೋಪದಿಂದ. ಗುರುಗಳು ನಕ್ಕು, 'ನಿಮ್ಮ ದೇವರು ಮೈಲಿಗೆಯಾಗಬಹುದು. ನನ್ನ ದೇವರು ಮೈಲಿಗೆಯಾಗುವಷ್ಟು ದುರ್ಬಲ ಅಲ್ಲ' ಎಂದರು. ಊರಿನವರಿಗೆ ಗುರುಗಳದ್ದು ವಿತಂಡವಾದ ಅನ್ನಿಸಿ, 'ಶಾಸ್ತ್ರ ಸಂಪ್ರದಾಯ ಬೇಡವಾ?' ಎಂದರು. 'ನಿಮ್ಮ ಕಥೆ ಗೊತ್ತಿಲ್ಲ, ನಾನು ನಂಬುವುದು ಒಂದು ಶಕ್ತಿಯನ್ನು. ಅದು ದೇವರ ಮನೆಯಲ್ಲಿ ಬಂಧಿಯಾಗಿಲ್ಲ. ನಮ್ಮನ್ನು ಸೃಷ್ಟಿಸಿದ ಅವನೇ ಅಷ್ಟು ಅವಕಾಶಗಳನ್ನು ತೆರೆದಿರುವಾಗ, ನಾವು ಮಾತ್ರ ಕಣ್ಣುಗಳನ್ನು ಕಟ್ಟಿಕೊಂಡು ಯಾಕೆ ಕೂಡಬೇಕು' ಎಂದರು. ಅಸಮಾಧಾನವಾದರೂ ಊರವರು ಮಾತಾಡಲಿಲ್ಲ. ಗುರು, 'ನಾನು ಈಗಲೇ ಹೊರಡುವೆ' ಎಂದರು. ಊರವರಲ್ಲಿ ಕೆಲವರು ಅವರನ್ನು ತಡೆಯುತ್ತಾ, 'ತಿಳಿಯದೆ ಏನೋ ಹೇಳಿದ್ದಕ್ಕೆ ನೀವು ಹೊರಟೇ ಬಿಡುವುದಾ' ಎಂದರು. ಗುರು ನಕ್ಕರು. 'ಅವನ ದೇಹದ ಯಾವ ಭಾಗದಲ್ಲಾದರೂ ಅವನು ಅಂತ್ಯಜ ಎಂದು ಬರೆದಿದೆಯಾ ತೋರಿಸಿ, ಆಗ ನಾನು ಇಲ್ಲಿ ಉಳಿಯುವೆ. ಇದಕ್ಕಿಂತ ನಿಮಗೆ ಹೇಳುವುದಕ್ಕೆ ನನ್ನಲ್ಲಿ ಏನೂ ಉಳಿದಿಲ್ಲ. ಹಸುಗಳಲ್ಲಿ ನಾಯಿಗಳಲ್ಲಿ, ಹಂದಿಗಳಲ್ಲಿ ಸಕಲ ಜೀವರಾಶಿಗಳಲ್ಲಿ ದೇವರನ್ನು ಕಂಡವರು ನಾವು, ನಮ್ಮ ಹಾಗೆ ಇರುವ ಈ ಮನುಷ್ಯರಲ್ಲಿ ಯಾಕೆ ಕಾಣಲ್ಲ? ಹಾಗೆ ಮಾಡಿ ನೋಡಿ. ನನ್ನ ದೇವರ ಥರಾ ನಿಮ್ಮ ದೇವರು ಶಕ್ತನಾಗುತ್ತಾನೆ' ಎಂದರು.

ಈ ಕಥೆ ಹೇಳಿದ ಆತ್ಮಾನಂದರು 'ದೇವರು ಹೆಚ್ಚು ದುರ್ಬಲವಾದಷ್ಟೂ ಮನುಷ್ಯ ಕೆಡುಕಿನತ್ತ ಹೋಗುತ್ತಾನೆ. ಒಳಿತು ಕೆಡುಕು ಎರಡೂ ಮನುಷ್ಯನ ಕೈಲೇ ಇರುತ್ತದೆ ಮಗೂ' ಎಂದಿದ್ದರು. ಜಾತಿಯ ನೀತಿಯನ್ನು ಬಿಟ್ಟು, ಎಲ್ಲರನ್ನೂ ಒಳಗೊಂಡು ನಮ್ಮ ನಮ್ಮ ದೇವರನ್ನು ಶಕ್ತಿವಂತನನ್ನಾಗಿಸೋಣ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಸೆಪ್ಟೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ಥಿ ಗಂ. 12-46 **ನಕ್ಷತ್ರ:** ಅಶ್ವಿನಿ ಗಂ. 13-58 **ಯೋಗ:** ಧ್ರುವ ಗಂ. 17-05 **ಕರಣ:** ಬಾಲವ ಗಂ. 12-46 ಸಿಂಹ ಮಾಸದ 25 ನೇ ದಿನ. **ಮಳೆ ನಕ್ಷತ್ರ :** ಹುಬ್ಬಾ 4 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 03-00 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-31, ಮುಸ್ಲಿಂ ದಿನಾಂಕ : 18 ರಬಿಉಲ್ಲಾವಲ್, ಅದೃಷ್ಟ ಸಂಖ್ಯೆ : 3, 12

ಮೇಷ: ಅನ್ಯರ ಬಗ್ಗೆ ಮೊದಲ ಭೇಟಿಯಲ್ಲಿ ತೀರ್ಮಾನವನ್ನು ಮಾಡಬೇಡಿ. ಬರಬೇಕಿದ್ದ ಹಣ ಹಿಂತುರುಗಿಬಂದು ಕೈ ಸೇರಲಿದೆ. ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ದೈನಂದಿನ ಚುಟುವಟಿಕೆಗಳಲ್ಲಿ ಪಾಲುಗೊಳ್ಳುವಿರಿ.

ವೃಷಭ: ವಾಕ್ ಚಾತುರ್ಯದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ತೀಕ್ಷ್ಣವಾದ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಸಿಟ್ಟಿನಿಂದ ಹೊರಬರಲು ಶನೈಶ್ಚರನ ಪ್ರಾರ್ಥನೆ ಮಾಡಿ.

ಮಿಥುನ: ಆರೋಗ್ಯದ ವಿಷಯದಲ್ಲಿ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ರಕ್ಷಿಸಲಿದೆ.

ಕರ್ಕಾಟಕ: ಕಾಡುವ ಸಮಸ್ಯೆಯಿಂದಾಗಿ ಯಾರಲ್ಲೂ ನಂಬಿಕೆ ಇಡದಂಥ ಪರಿಸ್ಥಿತಿ ತೋರಿಬರುವುದು. ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆಯು ಬಾಳಲ್ಲಿ ನಡೆಯಲಿದೆ. ಲಕ್ಷ್ಮಿನರಸಿಂಹನನ್ನು ಆರಾಧಿಸಿ.

ಸಿಂಹ: ದೈನಂದಿನ ಬದುಕಿನಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರಲಿದೆ. ಕೃಷಿ ಕೆಲಸಗಾರರಿಗೆ, ಮರಗೆಲಸ ಮಾಡುವವರಿಗೆ ಅವಕಾಶಗಳು ಬಂದರೂ ಸೋಮಾರಿತನ ಅಡ್ಡಬರುವುದು.

ಕನ್ಯಾ: ಕುಟುಂಬದ ಸದಸ್ಯರಲ್ಲಿ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವಂತೆ ಆಗುವುದು. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ರಾಜಕೀಯ ವ್ಯಕ್ತಿಗಳಿಗೆ ಸಮಯದ ಕೊರತೆ ಕಾಣಲಿದೆ.

ತುಲಾ: ಭಾವುಕರಾಗಿ ವರ್ತಿಸುವ ಸಂದರ್ಭ ಒದಗಿ ಬಂದೀತು. ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಸ್ವಯಂ ನಿವೃತ್ತಿ ಯೋಚನೆ ಬಿಡಬೇಕಾಗುವುದು. ಚಿತ್ರಕಲೆಯಲ್ಲಿರುವ ಉತ್ಸಾಹ ಮಗ್ನರಾಗುವಂತೆ ಪ್ರೇರೇಪಿಸುವುದು.

ವೃಶ್ಚಿಕ: ಆರ್ಥಿಕ ಸ್ಥಿತಿಯು ಸ್ವಲ್ಪ ಮಟ್ಟಿಗೆ ಏರುತ್ತದೆ. ಶ್ರಮದಿಂದ ದುಡಿಯುವ ತಾಳ್ಮೆ ಮೆಚ್ಚತಕ್ಕದ್ದೇ ಆಗಿರುತ್ತದೆ. ಸಂತಾನ ಭಾಗ್ಯದ ಸುದ್ದಿ ಕೇಳುವಿರಿ. ಶಿಕ್ಷೆಗೆ ಒಳಗಾಗುವ ಲಕ್ಷಣವಿರುವುದರಿಂದ ತಪ್ಪುಗಳನ್ನು ಮಾಡದಿರಲು ಪ್ರಯತ್ನಿಸಿ.

ಧನು: ಉದ್ಯೋಗ ಅಥವಾ ವಿದ್ಯಾಭ್ಯಾಸ ಈ ತರಹದ ವಿಷಯದಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಕಾಲ ಒದಗಿ ಬರುವುದು. ಸುಂದರ ವಸ್ತು, ಚಿತ್ರ ಅಥವಾ ಸಮಾಜದ ಗಣ್ಯವ್ಯಕ್ತಿಗಳನ್ನು ನೋಡುವ ಭಾಗ್ಯ ಸಿಗುವುದು.

ಮಕರ: ವಿದ್ಯಾಭ್ಯಾಸದ ಕಡೆಗೆ ಕಠಿಣ ಶ್ರಮವಹಿಸಿ ಗಮನಹರಿಸಿ, ಏಕಾಗ್ರತೆ ಕಾಯ್ದುಕೊಳ್ಳಿ. ಧ್ಯಾನ ಹಾಗೂ ಯೋಗದ ಕಡೆ ಗಮನ ಹರಿಸಿ. ಆರೋಗ್ಯಕ್ಕೆ ಮತ್ತು ಲವಲವಿಕೆಯ ಜೀವನಕ್ಕೆ ಬಹಳ ಸಹಾಯವಾಗಲಿದೆ.

ಕುಂಭ: ವೈದ್ಯರಿಗೆ ತುರ್ತು ಕೆಲಸಗಳಿಂದ ಬಿಡುವಿಲ್ಲದಂತಾಗುವುದು. ಆಶ್ರಮ ವಾಸಿಗಳಿಗೆ ಸಹಾಯ ಸಿಗಲಿದೆ. ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆ–ತಾಯಿಯ ಆಶೀರ್ವಾದ ದೊರೆಯಲಿದೆ.

ಮೀನ: ವಾಸಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವವಿದೆ. ಆಸಕ್ತಿಕರ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಯೋಜನೆಗಳಿಗೆ ಸಹಕಾರಿಯಾಗಲಿದೆ. ಸ್ಥಿರತೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ.

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 81,101 | ಇಂದಿನ ಅಂತ್ಯ 81,425 | 323 ↑

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,868
ಇಂದಿನ ಅಂತ್ಯ:	24,973
ದಿನದ ಗರಿಷ್ಠ:	25,035
↑	104

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹565

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹355-659
ದ್ವಿತಳಿ (ಬಿ.ವಿ)	₹500-825

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1360 (1370)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1420 (1420)
ಪಾಮೋಲಿನ್	₹1270 (1275)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹100-600

ಮುಂಬೈ ಧಾರಣೆ (ಶೇಂಗಾ) 10-09-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1370 (1380)
ಒಂದು ವಾರದ ಡೆಲಿವರಿ	1365 (1375)
ಪಾಮ್ ವಾರದ ಡೆಲಿವರಿ	1268 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,100 (1,09,350)
ಬೆಳ್ಳಿ ಕೆ.ಜಿಗೆ	1,24,500 (1,24,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬೆಲೆ ಕುಸಿತ: ಕಂಗಾಲಾದ ರೈತ

ಅತಿಯಾದ ಮಳೆ: 23 ಸಾವಿರ ಹೆಕ್ಟೇರ್ ಈರುಳ್ಳಿ ಬೆಳೆ ಹಾನಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: 'ಕಳೆದ ವರ್ಷ ಕ್ವಿಂಟಲ್ ಈರುಳ್ಳಿಗೆ ₹4 ಸಾವಿರದಿಂದ ₹5,500 ಬೆಲೆ ಸಿಕ್ಕಿತ್ತು. ಹಂಗಾಗಿ ಈ ಬಾರಿ ಹೆಚ್ಚಿಗೆ ಈರುಳ್ಳಿ ಬೆಳೆದಾರ್ರಿ. ಆದರೆ, ಈಗ ಬೆಲೆ ಇಲ್ಲದ್ದಕ್ಕ ಬೆಳೆಗೆ ಮಾಡಿದ ವೆಚ್ಚವೂ ಕೈಸೇರುತ್ತಿಲ್ಲ' ಎಂದು ಹಳ್ಳೂರ ಗ್ರಾಮದ ರೈತ ಬಸಲಿಂಗಪ್ಪ ರಡ್ಡೇರ ಬೇಸರ ತೋಡಿಕೊಂಡರು.

ಜಿಲ್ಲೆಯಲ್ಲಿ ಪ್ರತಿ ವರ್ಷ 30 ಸಾವಿರ ಹೆಕ್ಟೇರ್‌ನಿಂದ 32 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗುತ್ತಿತ್ತು. ಕಳೆದ ವರ್ಷ ಹೆಚ್ಚಿನ ಬೆಲೆ ದೊರೆತಿದ್ದರಿಂದ ಬಿತ್ತನೆ ಪ್ರಮಾಣ 42 ಸಾವಿರ ಹೆಕ್ಟೇರ್‌ಗೆ ಹೆಚ್ಚಾಗಿದೆ. ಅತಿಯಾದ ಮಳೆಯಿಂದಾಗಿ ಅರ್ಧದಷ್ಟು ಈರುಳ್ಳಿ ಬೆಳೆ ಹಾಳಾಗಿದೆ. ಆದರೂ, ಉತ್ತಮ ಬೆಲೆ ದೊರೆಯುತ್ತಿಲ್ಲ.

ಬಾಗಲಕೋಟೆ ಎಪಿಎಂಸಿಗೆ 3 ಸಾವಿರ ಕ್ವಿಂಟಲ್ ಈರುಳ್ಳಿ ಆವಕವಾಗಿತ್ತು. ಕ್ವಿಂಟಲ್‌ಗೆ ಕನಿಷ್ಠ ₹500, ಗರಿಷ್ಠ ₹1,800 ದೊರೆತಿದೆ. ₹1,200 ಮಾದರಿ ಬೆಲೆಯಾಗಿದೆ. ಕಳೆದ ಬಾರಿ ಸಿಕ್ಕ ಬೆಲೆಗೆ ಹೋಲಿಸಿದರೆ ಈ ಬಾರಿ ಅರ್ಧಕ್ಕೂ ಕಡಿಮೆ ಬೆಲೆಗೆ ಮಾರಾಟ ಮಾಡುವಂತಾಗಿದೆ.

ಬೆಳೆ ಹಾನಿ: ಒಂದೆಡೆ ಬೆಲೆ ಇಲ್ಲದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದರೆ, ಇನ್ನೊಂದೆಡೆ ಅತಿಯಾದ ಮಳೆಯಿಂದಾಗಿ ಬೆಳೆದು ನಿಂತಿದ್ದ ಬೆಳೆ ಕಣ್ಮುಂದೆಯೇ ಹಾಳಾಗಿ, ಮಣ್ಣು ಸೇರಿದೆ.

'ಜಿಲ್ಲೆಯಲ್ಲಿ ಸುರಿದ ಅತಿಯಾದ ಮಳೆಯಿಂದಾಗಿ ಅಂದಾಜು 23,400 ಹೆಕ್ಟೇರ್‌ನಷ್ಟು ಈರುಳ್ಳಿ ಬೆಳೆ ಹಾನಿಯಾಗಿದೆ. ಸಮೀಕ್ಷೆ ಇನ್ನೂ ನಡೆದಿದ್ದು, ಅಂತಿಮ ವರದಿ ಇನ್ನಷ್ಟೇ ಬರಬೇಕಿದೆ' ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರವೀಂದ್ರ ಹಕಾಟೆ.

ವಾರಗಳ ಕಾಲ ಸುರಿದ ಮಳೆಯಿಂದಾಗಿ ಈರುಳ್ಳಿ ಬೆಳೆ ಕೊಳೆತಿದೆ. ಜತೆಗೆ ಪ್ರವಾಹಕ್ಕೂ ಸಿಲುಕಿ ಹಾಳಾಗಿದೆ. ಸಮೀಕ್ಷೆ ನಂತರ ಪರಿಹಾರ ನೀಡಲಾಗುವುದು ಎಂದರು.

ಸತತ ಮಳೆಯಿಂದಾಗಿ ಈರುಳ್ಳಿಯ ಗುಣಮಟ್ಟ ಕುಸಿದಿದೆ. ಗಡ್ಡೆಗಳನ್ನು ಕಾಯ್ದಿಟ್ಟುಕೊಳ್ಳುವುದೇ ಸವಾಲಾಗಿದೆ. ಬಿಸಿಲು ಬೀಳದ್ದರಿಂದಾಗಿ ಹಾಳಾಗುತ್ತಿದೆ.

ಬೆಲೆ ಕುಸಿದಿರುವುದರಿಂದ ಬಿತ್ತನೆ, ಕಳೆ, ಔಷಧಕ್ಕಾಗಿ ಮಾಡಿದ ಖರ್ಚೂ ಕೈಗೆ ಸಿಗುತ್ತಿಲ್ಲ. ಎಪಿಎಂಸಿ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಸಾಗಾಟದ ವೆಚ್ಚ ಮೈಮೇಲೆ ಬರುತ್ತದೆ ಎನ್ನುತ್ತಾರೆ ರೈತರು.



ಬಾಗಲಕೋಟೆ ಎಪಿಎಂಸಿಗೆ ಹರಾಜಿಗೆ ಬಂದಿರುವ ಈರುಳ್ಳಿ

> ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಈರುಳ್ಳಿ ಬೆಳೆಗಾರರಿಗೆ ಕಡಿಮೆ ಬೆಲೆ ಸಿಗುತ್ತಿದೆ. ಮುಂದಿನ ದಿನಗಳಲ್ಲಿ ಉತ್ತಮ ಬೆಲೆ ಸಿಗುವ ವಿಶ್ವಾಸವಿದೆ
> **ವಿ.ಡಿ.ಪಾಟೀಲ,** ಕಾರ್ಯದರ್ಶಿ, ಎಪಿಎಂಸಿ, ಬಾಗಲಕೋಟೆ

ಸಿಮೆಂಟ್ ಬೆಲೆ ₹35 ಇಳಿಕೆ?



ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಪರಿಷ್ಕರಣೆಯಿಂದ 50 ಕೆ.ಜಿ ತೂಕದ ಸಿಮೆಂಟ್ ಚೀಲದ ಬೆಲೆ ₹30ರಿಂದ ₹35ರವರೆಗೆ ಇಳಿಕೆ ಆಗಬಹುದು ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆ ಹೇಳಿದೆ. ಅಲ್ಲದೆ, ನಿರ್ಮಾಣದ ವೆಚ್ಚವು ಸಹ ತಗ್ಗಲಿದೆ ಎಂದು ತಿಳಿಸಿದೆ.

ಪ್ರಸ್ತುತ ಸಿಮೆಂಟ್‌ಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಜಿಎಸ್‌ಟಿ ಮಂಡಳಿಯ ನಿರ್ಧಾರದಂತೆ ಸೆಪ್ಟೆಂಬರ್ 22ರಿಂದ ಸಿಮೆಂಟ್‌ಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ.

ಹೆಚ್ಚಿನ ಸ್ಪರ್ಧಾತ್ಮಕತೆಯಿಂದಾಗಿ ಕಂಪನಿಗಳು ದರ ಕಡಿತಗೊಳಿಸಲಿವೆ. ಇದರ ಪ್ರಯೋಜನ ಗ್ರಾಹಕರಿಗೆ ದೊರೆಯಲಿದ್ದು, ಸಿಮೆಂಟ್ ದರ ಇಳಿಕೆಯಾಗಲಿದೆ. ಇದರಿಂದ ಮೂಲಸೌಕರ್ಯ ಮತ್ತು ಮನೆಗಳ ನಿರ್ಮಾಣ ವೆಚ್ಚವು ಕಡಿಮೆ ಆಗಲಿದೆ ಎಂದು ಸಂಸ್ಥೆ ನಿರೀಕ್ಷಿಸಿದೆ.

ಪ್ರಸಕ್ತ ವರ್ಷದಲ್ಲಿ ಸಿಮೆಂಟ್ ಬೇಡಿಕೆ ಹೆಚ್ಚಳ ಶೇ 5ರಿಂದ ಶೇ7ರಷ್ಟಿರಲಿದೆ ಎಂದು ತನ್ನ ಅಂದಾಜಿನಲ್ಲಿ ಯಥಾಸ್ಥಿತಿ ಕಾಪಾಡಿಕೊಂಡಿದೆ.

ಕೊಪ್ಪಳದಲ್ಲಿ ಉಕ್ಕು ಘಟಕ ಸ್ಥಾಪನೆಗೆ ₹2,345 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜಾಜ್ ಸಮೂಹದ ಮುಕುಂದ ಸುಮಿ ಸಹಭಾಗಿತ್ವದಲ್ಲಿ ಕೊಪ್ಪಳದಲ್ಲಿ ಉಕ್ಕು ತಯಾರಿಕಾ ಘಟಕ ಸ್ಥಾಪನೆಗೆ ಜಪಾನಿನ ಸುಮಿಟಾವೊ ಕಂಪನಿ ₹2,345 ಕೋಟಿ ಹೂಡಿಕೆ ಮಾಡಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.



ಎಂ.ಬಿ. ಪಾಟೀಲ

ಬಂಡವಾಳ ಆಕರ್ಷಣೆಗಾಗಿ ಜಪಾನ್ ಪ್ರವಾಸದಲ್ಲಿರುವ ಅವರು ಸುಮಿಟಾವೊ ಪ್ರತಿನಿಧಿಗಳ ಜತೆಗಿನ ಸಭೆಯ ನಂತರ ಈ ಮಾಹಿತಿ ನೀಡಿದ್ದಾರೆ. 'ಈ ಘಟಕವು ವಾರ್ಷಿಕ 3.50 ಲಕ್ಷ ಟನ್ ಉಕ್ಕು ತಯಾರಿಸುವ ಸಾಮರ್ಥ್ಯ ಹೊಂದಿರಲಿದೆ. 2028ರ ವೇಳೆಗೆ ಘಟಕ ಕಾರ್ಯಾರಂಭ ಮಾಡಲಿದೆ. ಅಲ್ಲದೆ ಸುಮಿಟಾವೊ ಕಂಪನಿಯು ರಾಜ್ಯದಲ್ಲಿ ಬಯೊಮಾಸ್ ಘಟಕವನ್ನೂ ಸ್ಥಾಪಿಸಲಿದೆ' ಎಂದಿದ್ದಾರೆ.

'ಹುಬ್ಬಳ್ಳಿಯಲ್ಲಿರುವ ಎನ್‌ಜಿಇಎಫ್ ಕಾರ್ಖಾನೆಯ ಪುನರಾರಂಭದ ಸಂಬಂಧ ಜೆಎಫ್‌ಇ ಷೋಜಿ ಕಂಪನಿಯ ಪ್ರತಿನಿಧಿಗಳ ಜತೆಗೆ ಮಾತುಕತೆ ನಡೆಸಲಾಗಿದೆ. ₹400 ಕೋಟಿ ಹೂಡಿಕೆ ಮಾಡಲು ಕಂಪನಿ ಮುಂದೆ ಬಂದಿದೆ. ವಿದ್ಯುತ್ ಚಾಲಿತ ವಾಹನಗಳ ಮೋಟರ್‌ಗಳ ಕೋರ್‌ಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸುವ ಬಗ್ಗೆ ಪರಿಶೀಲನೆ ನಡೆಯಲಿದೆ. ಅದರ ಭಾಗವಾಗಿ ಜೆಎಫ್‌ಇ ಷೋಜಿ ಪ್ರತಿನಿಧಿಗಳನ್ನು ಎನ್‌ಜಿಇಎಫ್ ಕಾರ್ಖಾನೆ ಭೇಟಿಗೆ ಆಹ್ವಾನಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಯಸ್ಕಾವಾ ಕಂಪನಿಯು ಬೆಂಗಳೂರಿನಲ್ಲಿ ಮೋಷನ್ ಕಂಟ್ರೋಲ್ ಮತ್ತು ವೇರಿಯೇಬಲ್ ಫ್ರೀಕ್ವೆನ್ಸಿ ಡ್ರೈವ್‌ನ ತಯಾರಕ ಘಟಕ ಸ್ಥಾಪಿಸುವ ಬಗ್ಗೆ ಆಸಕ್ತಿ ತೋರಿಸಿದೆ ಎಂದಿದ್ದಾರೆ.

ಅಡಿಕೆ ಧಾರಣೆ

ಕುಮಟಾ					
ಚಾಲಿ	39089-43399	ಫ್ಯಾಕ್ಟರಿ	4059-29129		
ಚಿಪ್ಪು	27089-32999	ಹೊಸಚಾಲಿ	36569-44099	ಗೊರಬಲು	19039-37199
ಕೋಕ	7509-24999	**ಶಿವಮೊಗ್ಗ**		ರಾಶಿ	48509-60036
		ಬೆಟ್ಟೆ	52300-66009	ಸರಕು	57119-99260

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆ ಏರಿಕೆ ಆಗಿದ್ದು, ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹250 ಹೆಚ್ಚಳವಾಗಿ, ₹1.13 ಲಕ್ಷದಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,12,750 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹300ರಷ್ಟು ಇಳಿಕೆಯಾಗಿ, ₹1,28,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಯಾಗಿದೆ. ಹೀಗಾಗಿ, ದೇಶದ ಮಾರುಕಟ್ಟೆಯಲ್ಲೂ ಬೆಲೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಳೆದ ಡಿಸೆಂಬರ್ 31ರಂದು 10 ಗ್ರಾಂ ಚಿನ್ನದ ದರ ₹78,950 ಇತ್ತು. ಈವರೆಗೆ ₹34,050 ಜಿಗಿತವಾಗಿದ್ದು, ಶೇ 43ರಷ್ಟು ಹೆಚ್ಚಳ ಕಂಡಿದೆ. ಮಂಗಳವಾರದ ವಹಿವಾಟಿನಲ್ಲಿ ಚಿನ್ನದ ದರವು ₹5,080 ಮತ್ತು ಬೆಳ್ಳಿ ₹2,800 ಹೆಚ್ಚಳವಾಗಿತ್ತು.

ಜಾಗತಿಕವಾಗಿ ಕೇಂದ್ರೀಯ ಬ್ಯಾಂಕ್‌ಗಳಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಅಲ್ಲದೆ, ಡಾಲರ್ ಮೌಲ್ಯ ಇಳಿಕೆ ಮತ್ತು ಜಾಗತಿಕ ರಾಜಕೀಯ ಅನಿಶ್ಚಿತತೆಯು ಹಳದಿ ಲೋಹದ ದರ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಈಕ್ವಿಟಿ ಮ್ಯೂಚುವಲ್ ಫಂಡ್ ಒಳಹರಿವು ಶೇ 22ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಆಗಸ್ಟ್ ತಿಂಗಳಿನಲ್ಲಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಿಗೆ (ಎಂ.ಎಫ್) ಹಣದ ಒಳಹರಿವಿನ ಪ್ರಮಾಣ ಶೇ 22ರಷ್ಟು ಇಳಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಬುಧವಾರ ತಿಳಿಸಿದೆ.

ಜುಲೈ ತಿಂಗಳಿನಲ್ಲಿ ₹42,702 ಕೋಟಿ ಒಳಹರಿವಾಗಿತ್ತು. ಆಗಸ್ಟ್‌ನಲ್ಲಿ ₹33,430 ಕೋಟಿ ಹೂಡಿಕೆಯಾಗಿದೆ ಎಂದು ತಿಳಿಸಿದೆ. ಒಳಹರಿವು ₹9 ಸಾವಿರ ಕೋಟಿಯಷ್ಟು ಕಡಿಮೆ ಆಗಿದೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳಲ್ಲಿ (ಎಸ್‌ಐಪಿ) ಹೂಡಿಕೆ ಪ್ರಮಾಣ ಸ್ವಲ್ಪ ಇಳಿಕೆಯಾಗಿದ್ದು, ₹28,265 ಕೋಟಿ ಒಳಹರಿವಾಗಿದೆ. ಜುಲೈನಲ್ಲಿ ₹28,464 ಕೋಟಿ ಹೂಡಿಕೆಯಾಗಿತ್ತು ಎಂದು ತಿಳಿಸಿದೆ.

ನ್ಯೂ ಫಂಡ್ ಆಫರ್ (ಎನ್‌ಎಫ್‌ಒ) ಪ್ರಮಾಣದಲ್ಲಿ ಇಳಿಕೆ ಆಗಿರುವುದು ಮತ್ತು ಜಾಗತಿಕ ಆರ್ಥಿಕ ಅನಿಶ್ಚಿತತೆಗಳು ಒಳಹರಿವಿನ ಇಳಿಕೆಗೆ ಕಾರಣವಾಗಿವೆ. ಅಲ್ಲದೆ, ಅಮೆರಿಕದ ಹೆಚ್ಚಿನ ಸುಂಕ ಹೇರಿಕೆ ಸಹ ಒಳಹರಿವು ಇಳಿಕೆಗೆ ಕಾರಣವಾಯಿತು ಎಂದು ತಜ್ಞರು ತಿಳಿಸಿದ್ದಾರೆ.



ಚಿನ್ನದ ಇಟಿಎಫ್‌ಗಳಲ್ಲಿ ಒಳಹರಿವು ಜುಲೈನಲ್ಲಿ ₹1,256 ಕೋಟಿಯಷ್ಟಿತ್ತು. ಇದು ಆಗಸ್ಟ್‌ನಲ್ಲಿ ₹2,190 ಕೋಟಿ ಹೂಡಿಕೆ ಸ್ವೀಕರಿಸಿದೆ ಎಂದು ತಿಳಿಸಿದೆ. ಒಟ್ಟಾರೆಯಾಗಿ, ಮ್ಯೂಚುವಲ್ ಫಂಡ್ ಉದ್ಯಮವು ಆಗಸ್ಟ್‌ನಲ್ಲಿ ಒಟ್ಟು ₹52,443 ಕೋಟಿ ಒಳಹರಿವು ಸ್ವೀಕರಿಸಿದೆ.

ಸುದ್ದಿ 2 ನಿಮಿಷ

ದ್ವಿಚಕ್ರ ವಾಹನ, ಕಾರು ಬೆಲೆ ಇಳಿಕೆ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿಗಳಾದ ರಾಯಲ್ ಎನ್‌ಫೀಲ್ಡ್, ಹೀರೊ ಮೋಟೊಕಾರ್ಪ್, ಯಮಹಾ, ಫೋಕ್ಸ್‌ವ್ಯಾಗನ್ ಹಾಗೂ ಸ್ಕೋಡಾ ಕಂಪನಿಗಳು ವಾಹನಗಳ ಮೇಲಿನ ಜಿಎಸ್‌ಟಿ ದರ ಇಳಿಕೆಯ ಪರಿಣಾಮವಾಗಿ ತಮ್ಮ ವಾಹನಗಳ ಬೆಲೆ ಕಡಿಮೆ ಆಗಲಿದೆ ಎಂದು ತಿಳಿಸಿವೆ.

ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ. ಜಿಎಸ್‌ಟಿ ದರ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲಾಗುವುದು ಎಂದು ಕಂಪನಿಗಳು ತಿಳಿಸಿವೆ.

ರಾಯಲ್ ಎನ್‌ಫೀಲ್ಡ್ ತನ್ನ 350 ಸಿ.ಸಿ ಶ್ರೇಣಿಯ ದ್ವಿಚಕ್ರ ವಾಹನದ ಬೆಲೆಯನ್ನು ₹22 ಸಾವಿರದವರೆಗೆ ತಗ್ಗಿಸಿದೆ.

ಹೀರೊ ಮೋಟೊಕಾರ್ಪ್ ತನ್ನ ಆಯ್ದ ಮಾದರಿಯ ದ್ವಿಚಕ್ರ ವಾಹನಗಳ ಬೆಲೆಯನ್ನು ₹15,743ರವರೆಗೆ ತಗ್ಗಿಸಿದೆ. ಇದು ದೆಹಲಿಯ ಷೋರೂಮ್ ದರವಾಗಿದೆ ಎಂದು ತಿಳಿಸಿದೆ.

ಯಮಹಾ ಮೋಟರ್ ತನ್ನ ದ್ವಿಚಕ್ರ ವಾಹನಗಳ ಬೆಲೆಯು ಜಿಎಸ್‌ಟಿ ದರ ಇಳಿಕೆಯ ಪರಿಣಾಮವಾಗಿ ₹17,581ರವರೆಗೆ ಕಡಿಮೆ ಆಗಲಿದೆ ಎಂದು ತಿಳಿಸಿದೆ.

ಫೋಕ್ಸ್‌ವ್ಯಾಗನ್ ಇಂಡಿಯಾ ಕಾರುಗಳ ಬೆಲೆಯನ್ನು ₹3.27 ಲಕ್ಷದವರೆಗೆ ಇಳಿಕೆ ಮಾಡಿದೆ. ಎಸ್‌ಯುವಿ ಟಿಗ್ವಾನ್ ಆರ್-ಲೈನ್ ಬೆಲೆಯನ್ನು ₹3,26,900 ಕಡಿಮೆ ಮಾಡಿದೆ. ಎಸ್‌ಯುವಿ ಟಿಗ್ವಾನ್ ₹68,400 ಮತ್ತು ಸೆಡಾನ್ ವರ್ಟೂಸ್ ₹66,900 ವರೆಗೆ ತಗ್ಗಿಸಿದೆ.

ಸ್ಕೋಡಾ ಕಂಪನಿಯು ತನ್ನ ವಾಹನಗಳ ಬೆಲೆಯನ್ನು ₹3.3 ಲಕ್ಷದವರೆಗೆ ತಗ್ಗಿಸಿದೆ. ಕೋಡಿಯಾಕ್ ಎಸ್‌ಯುವಿ ₹3,28,267, ಕೈಲಾಕ್ ₹1,19,295, ಕುಶಾಕ್ ₹65,828 ಮತ್ತು ಸೆಡಾನ್ ಸ್ಲಾವಿಯಾ ದರ ₹63,207 ಕಡಿಮೆ ಆಗಿದೆ.

ದೇಶದ ಜಿಡಿಪಿ ಬೆಳವಣಿಗೆ ಅಂದಾಜು ಪರಿಷ್ಕರಣೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷಕ್ಕೆ ಸಂಬಂಧಿಸಿದ ದೇಶದ ಜಿಡಿಪಿ ಬೆಳವಣಿಗೆ ದರದ ಅಂದಾಜನ್ನು ಫಿಚ್ ರೇಟಿಂಗ್ಸ್ ಸಂಸ್ಥೆಯು ಶೇಕಡ 6.9ಕ್ಕೆ ಹೆಚ್ಚಿಸಿದೆ. ಈ ಮೊದಲು ಅದು ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ ಎಂದು ಅಂದಾಜು ಮಾಡಿತ್ತು.

ಜೂನ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರವು ನಿರೀಕ್ಷೆಗಿಂತ ಹೆಚ್ಚಿನ ಮಟ್ಟದಲ್ಲಿ ಇದ್ದುದು ಹಾಗೂ ದೇಶಿ ಮಾರುಕಟ್ಟೆಯಲ್ಲಿನ ಬಳಕೆ ಆಧಾರಿತ ಬೇಡಿಕೆಯು ಅಂದಾಜು ಹೆಚ್ಚಿಸುವುದಕ್ಕೆ ಕಾರಣ ಎಂದು ಸಂಸ್ಥೆ ಹೇಳಿದೆ.

ಸುಂಕ ಸಂಬಂಧಿ ಅನಿಶ್ಚಿತತೆಗಳ ನಂತರ ಭಾರತದ ಜಿಡಿಪಿ ಬೆಳವಣಿಗೆ ದರದ ಅಂದಾಜನ್ನು ಹಲವು ಸಂಸ್ಥೆಗಳು ತಗ್ಗಿಸಿದ್ದವು. ಈಗ ಭಾರತದ ಜಿಡಿಪಿ ಬೆಳವಣಿಗೆ ದರದ ಅಂದಾಜನ್ನು ಹೆಚ್ಚು ಮಾಡುತ್ತಿರುವ ಮೊದಲ ಜಾಗತಿಕ ರೇಟಿಂಗ್ಸ್ ಸಂಸ್ಥೆ ಫಿಚ್ ಆಗಿದೆ.

ಅಮೆರಿಕದ ಜೊತೆಗಿನ ವ್ಯಾಪಾರಕ್ಕೆ ಸಂಬಂಧಿಸಿದ ಬಿಕ್ಕಟ್ಟು ಈಚಿನ ತಿಂಗಳುಗಳಲ್ಲಿ ತೀವ್ರಗೊಂಡಿದೆ. ಅಮೆರಿಕವು ಭಾರತದ ಸರಕುಗಳ ಮೇಲೆ ಒಟ್ಟು ಶೇ 50ರಷ್ಟು ಸುಂಕ ವಿಧಿಸಿದೆ.

'ಇದು ಕಾಲಕ್ರಮೇಣ ಮಾತುಕತೆ ಮೂಲಕ ಕಡಿಮೆ ಮಟ್ಟಕ್ಕೆ ಬರಲಿದೆ ಎಂಬುದು ನಮ್ಮ ನಿರೀಕ್ಷೆ. ಆದರೆ ವ್ಯಾಪಾರ ಸಂಬಂಧದ ಸುತ್ತಲಿನ ಅನಿಶ್ಚಿತತೆಗಳು ಹೂಡಿಕೆಯ ಮೇಲೆ ಪರಿಣಾಮ ಬೀರಬಹುದು. ಜಿಎಸ್‌ಟಿ ವ್ಯವಸ್ಥೆಗೆ ಸರ್ಕಾರವು ಸುಧಾರಣೆ ತಂದಿದೆ. ಇದು ಗ್ರಾಹಕರು ಈ ವರ್ಷದಲ್ಲಿ ಹಾಗೂ ಮುಂದಿನ ಹಣಕಾಸು ವರ್ಷಗಳಲ್ಲಿ ಹೆಚ್ಚು ವೆಚ್ಚ ಮಾಡುವಂತೆ ಉತ್ತೇಜನ ನೀಡಲಿದೆ' ಎಂದು ಫಿಚ್ ಹೇಳಿದೆ.

ಫ್ರಾನ್ಸ್: ಸರ್ಕಾರದ ವಿರುದ್ಧ ಪ್ರತಿಭಟನೆ

ನ್ಯಾಂಟೆಸ್/ಪ್ಯಾರಿಸ್ (ರಾಯಿಟರ್ಸ್): ರಾಜಕಾರಣಿಗಳು ಮತ್ತು ಉದ್ದೇಶಿತ ಬಜೆಟ್ ಕಡಿತದ ವಿರುದ್ಧ ಫ್ರಾನ್ಸ್‌ನಾದ್ಯಂತ ಬುಧವಾರ ಪ್ರತಿಭಟನೆ ನಡೆದಿದ್ದು, ಸುಮಾರು 250 ಪ್ರತಿಭಟನಕಾರರನ್ನು ಬಂಧಿಸಲಾಗಿದೆ. ಹೋರಾಟಗಾರರು ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿ, ಕಸದ ತೊಟ್ಟಿಗಳನ್ನು ಸುಟ್ಟುಹಾಕಿದ್ದು, ರಸ್ತೆ ತಡೆಗೆ ಯತ್ನಿಸಿ ಪೊಲೀಸರೊಂದಿಗೆ ಘರ್ಷಣೆ ನಡೆಸಿದ್ದಾರೆ.

ಪ್ರತಿಭಟನಕಾರರು ದೇಶದಾದ್ಯಂತ 'ಎಲ್ಲವನ್ನೂ ತಡೆಯಿರಿ' ಎಂದು ಕರೆ ನೀಡಿದ್ದಾರೆ. ಯಾವುದೆ ತಡೆಗಳನ್ನು ಆದಷ್ಟು ಬೇಗನೆ ತೆರವು ಮಾಡಲು ದೇಶದಾದ್ಯಂತ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಫ್ರಾನ್ಸ್‌ನಲ್ಲಿ ಸರ್ಕಾರದ ವಿರುದ್ಧ ಬುಧವಾರ ಪ್ರತಿಭಟನೆ ನಡೆದಿದ್ದು, ಪ್ರತಿಭಟನಕಾರರು ಪ್ಯಾರಿಸ್ ರೈಲು ನಿಲ್ದಾಣದ ಬಳಿ ಜಮಾಯಿಸಿದ್ದರು ಎಎಫ್‌ಪಿ ಚಿತ್ರ

ದೇಶದ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರನ್ ವಿರುದ್ಧ ಪ್ರತಿಭಟನಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸೋಮವಾರವಷ್ಟೆ ಪ್ರಧಾನಿಯನ್ನು ಅಧಿಕಾರದಿಂದ ಕೆಳಗಿಳಿಸಲು ವಿಪಕ್ಷಗಳು ಒಗ್ಗಟ್ಟಾಗಿದ್ದವು.

'ಮುಖ್ಯ ಸಮಸ್ಯೆ ಮ್ಯಾಕ್ರನ್ ಹೊರತು, ಮಂತ್ರಿಗಳಲ್ಲ. ಮಂತ್ರಿಗಳು ಕೂಡಾ ಸಮಸ್ಯೆಯೇ. ಆದರೆ, ಮ್ಯಾಕ್ರನ್ ಮತ್ತು ಅವರ ಕಾರ್ಯವೈಖರಿಯೇ ದೊಡ್ಡ ಸಮಸ್ಯೆ. ಅವರು ಅಧಿಕಾರದಿಂದ ತೊಲಗಬೇಕು' ಎಂದು ಪ್ರತಿಭಟನೆ ನಡೆಸುತ್ತಿರುವ ಸಂಘಟನೆಗಳ ಪ್ರತಿನಿಧಿಯೊಬ್ಬರು ಹೇಳಿದ್ದಾರೆ.

ಇತ್ತೀಚೆಗಷ್ಟೆ ದೇಶದ ಪ್ರಧಾನಿ ಫ್ರಾಂಕೋಯಿಸ್ ಬೈರೂ ವಿಶ್ವಾಸ ಮತ ಯಾಚನೆಯಲ್ಲಿ ಸೋಲುಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದರ ನಂತರ ಅಧ್ಯಕ್ಷ ಮ್ಯಾಕ್ರನ್ ಮಂಗಳವಾರ ಹೊಸ ಪ್ರಧಾನಿಯಾಗಿ ಆಪ್ತ ಮಿತ್ರ ಸೆಬಾಸ್ಟಿಯನ್ ಲೆಕೋರ್ನು ಅವರನ್ನು ಆಯ್ಕೆ ಮಾಡಿದ್ದಾರೆ. ಇದರೊಂದಿಗೆ, ಮ್ಯಾಕ್ರನ್ ಅವರು ತಮ್ಮ ಎರಡು ವರ್ಷಗಳ ಆಡಳಿತದ ಅವಧಿಯಲ್ಲಿ ಐದನೇ ಪ್ರಧಾನಿಯನ್ನು ನೇಮಕ ಮಾಡಿದಂತಾಗಿದೆ.

'ಕರಿಷ್ಮಾ ಮಕ್ಕಳಿಗೆ ₹1,900 ಕೋಟಿ ಸಂದಿದೆ'

ನವದೆಹಲಿ (ಪಿಟಿಐ): ಉದ್ಯಮಿ ಸಂಜಯ್ ಕಪೂರ್ ಅವರ ಪತ್ನಿ ಪ್ರಿಯಾ ಕಪೂರ್ ಅವರು, 'ಸಂಜಯ್ ಅವರ ಮಾಜಿ ಪತ್ನಿ ಕರಿಷ್ಮಾ ಕಪೂರ್ ಅವರ ಇಬ್ಬರು ಮಕ್ಕಳು ಕುಟುಂಬದ ಟ್ರಸ್ಟ್‌ನಿಂದ ಈಗಾಗಲೇ ₹1,900 ಕೋಟಿ ಪಡೆದಿದ್ದಾರೆ' ಎಂದು ದೆಹಲಿ ಹೈಕೋರ್ಟ್‌ಗೆ ಬುಧವಾರ ತಿಳಿಸಿದರು.

ದಿವಂಗತರಾದ ತಂದೆಯ ಆಸ್ತಿಯಲ್ಲಿ ಪಾಲು ಕೇಳಿ ಕರಿಷ್ಮಾ ಕಪೂರ್ ಅವರ ಮಕ್ಕಳು ಕೋರ್ಟ್ ಮೆಟ್ಟಿಲೇರಿದ್ದರು ಮತ್ತು ಸಂಜಯ್ ಕಪೂರ್ ಅವರ ಉಯಿಲಿನ ಸತ್ಯಾಸತ್ಯತೆಯನ್ನೂ ಅವರು ಪ್ರಶ್ನಿಸಿದ್ದರು.

ಸಂಜಯ್ ಅವರು ಬರೆದಿಟ್ಟಿರುವ ಉಯಿಲು ನೋಂದಣಿಯಾಗದಿದ್ದರೂ ಅದು ಅನೂರ್ಜಿತ ಅಲ್ಲ ಎಂದು ಪ್ರಿಯಾ ಅವರ ಪರ ವಕೀಲರು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರಿಗೆ ತಿಳಿಸಿದರು. ಒಟ್ಟು ಆಸ್ತಿಯ ವಿವರ ಒದಗಿಸುವಂತೆ ನ್ಯಾಯಾಲಯವು ಕೇಳಿತು. ಅರ್ಜಿ ವಿಚಾರಣೆಯನ್ನು ಅಕ್ಟೋಬರ್ 9ಕ್ಕೆ ಮುಂದೂಡಿತು.

ಎಸ್‌ಎಸ್‌ಎಲ್‌ವಿ ತಂತ್ರಜ್ಞಾನ: ಇಸ್ರೊ–ಎಚ್‌ಎಎಲ್ ಒಪ್ಪಂದ

ನವದೆಹಲಿ (ಪಿಟಿಐ): 'ಸಣ್ಣ ಉಪಗ್ರಹ ಉಡ್ಡಯನ ವಾಹನ'ಗಳ (ಎಸ್‌ಎಸ್‌ಎಲ್‌ವಿ) ಉತ್ಪಾದನಾ ತಂತ್ರಜ್ಞಾನ ವರ್ಗಾವಣೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಬುಧವಾರ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಜತೆ ಒಡಂಬಡಿಕೆ ಮಾಡಿಕೊಂಡಿದೆ.

ಇದು ಬಾಹ್ಯಾಕಾಶ ವಲಯದಲ್ಲಿ ಉದ್ಯಮ ಸಹಭಾಗಿತ್ವದ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ ಎಂದು ಬಣ್ಣಿಸಲಾಗಿದೆ.

ತಂತ್ರಜ್ಞಾನ ವರ್ಗಾವಣೆ ಕುರಿತ 100ನೇ ಒಪ್ಪಂದಕ್ಕೆ 'ಇಸ್ರೊ', 'ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್' (ಎನ್‌ಎಸ್‌ಐಎಲ್), 'ಇನ್‌ಸ್ಪೇಸ್' ಹಾಗೂ 'ಎಚ್‌ಎಎಲ್' ಸಹಿ ಮಾಡಿವೆ.

ಈ ಕುರಿತ ಒಪ್ಪಂದಕ್ಕೆ ಸಹಿ ಮಾಡಿದ ದಿನದಿಂದ 24 ತಿಂಗಳುಗಳ ಒಳಗೆ ತಂತ್ರಜ್ಞಾನ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ ಎಂದು 'ಇನ್‌ಸ್ಪೇಸ್' ಕೇಂದ್ರ ತಿಳಿಸಿದೆ.

ಈ ಅವಧಿಯಲ್ಲಿ ಎಸ್‌ಎಸ್‌ಎಲ್‌ವಿಗಳಿಗೆ ಸಂಬಂಧಿಸಿದ ತಾಂತ್ರಿಕ ಜ್ಞಾನ ಮತ್ತು ತರಬೇತಿಯನ್ನು 'ಇಸ್ರೊ' ಸಂಸ್ಥೆಯು ಎಚ್‌ಎಎಲ್‌ಗೆ ವರ್ಗಾಯಿಸಲಿದೆ ಎಂದು ಅದು ಹೇಳಿದೆ.

'ವಾಣಿಜ್ಯ ಉದ್ದೇಶಕ್ಕೆ ಬಾಹ್ಯಾಕಾಶ ವಲಯವನ್ನು ಭಾರತವು ಉದಾರೀಕರಿಸಿರುವುದರಿಂದ ಅವಕಾಶಗಳು ವೃದ್ಧಿಸುತ್ತಿವೆ. ಇದಕ್ಕೆ ಪೂರಕವಾಗಿ ಕ್ರಿಯಾತ್ಮಕ ತಂತ್ರಜ್ಞಾನ ವರ್ಗಾವಣೆ ಕಾರ್ಯವಿಧಾನವನ್ನು ಇಸ್ರೊ ಹೊಂದಿದೆ' ಎಂದು 'ಇಸ್ರೊ' ಅಧ್ಯಕ್ಷ ವಿ.ನಾರಾಯಣನ್ ಪ್ರತಿಕ್ರಿಯಿಸಿದ್ದಾರೆ.

ಎಸ್‌ಎಸ್‌ಎಲ್‌ವಿ ತಂತಜ್ಞಾನ ವರ್ಗಾವಣೆಗೆ ಇಸ್ರೊ, ಎಚ್‌ಎಎಲ್, ಎನ್‌ಎಸ್‌ಐಎಲ್ ಮತ್ತು ಇನ್‌ಸ್ಪೇಸ್ ಒಂದಾಗಿರುವುದು ಈ ಕ್ಷೇತ್ರದಲ್ಲಿ ಮಹತ್ವದ ಮುನ್ನಡೆಯನ್ನು ಸೂಚಿಸುತ್ತದೆ. ಇದು ಬಾಹ್ಯಾಕಾಶ ಉದ್ಯಮವನ್ನು ಸಬಲೀಕರಿಸಲು, ಕೈಗೆಟುಕುವ ಮತ್ತು ವಿಶ್ವಾಸಾರ್ಹ ಉಡಾವಣಾ ಸೇವೆಗಳಿಗಾಗಿ ಭಾರತವನ್ನು ಜಾಗತಿಕ ಕೇಂದ್ರವಾಗಿ ಸ್ಥಾಪಿಸಬಯಸಿರುವ ಭಾರತ ಸರ್ಕಾರದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದು 'ಇನ್‌ಸ್ಪೇಸ್'ನ ಅಧ್ಯಕ್ಷ ಪವನ್ ಕುಮಾರ್ ಗೋಯೆಂಕಾ ಹೇಳಿದ್ದಾರೆ.

ನೇಪಾಳ: ಸೇನೆಯಿಂದ ನಿಷೇಧಾಜ್ಞೆ ಜಾರಿ

ಮಧ್ಯಂತರ ಸರ್ಕಾರ ರಚನೆ • 'ಸುಪ್ರೀಂ'ನ ಮಾಜಿ ಸಿಜೆ ಸೇರಿ ಮೂವರ ಹೆಸರು ಮುಂಚೂಣಿಯಲ್ಲಿ

ಕಠ್ಮಂಡು (ಪಿಟಿಐ/ರಾಯಿಟರ್ಸ್): ಘರ್ಷಣೆಯನ್ನು ಹತ್ತಿಕ್ಕುವ ಸಲುವಾಗಿ ನೇಪಾಳ ಸೇನೆಯು ರಾಷ್ಟ್ರದಾದ್ಯಂತ ನಿರ್ಬಂಧ ಆದೇಶ ಮತ್ತು ನಿಷೇಧಾಜ್ಞೆಯನ್ನು ಜಾರಿಗೊಳಿಸಿದೆ.

ಕೆ.ಪಿ ಶರ್ಮಾ ಓಲಿ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ, ಸೇನೆಯು ನಿರ್ಬಂಧಗಳನ್ನು ವಿಧಿಸುವ ಮೂಲಕ ದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದೆ.

ಈ ನಡುವೆ, ದೇಶದಲ್ಲಿ ಮಧ್ಯಂತರ ಸರ್ಕಾರ ರಚಿಸುವ ಕುರಿತ ಪ್ರಯತ್ನಗಳಿಗೂ ಚಾಲನೆ ದೊರೆತಿದೆ.

ಮಧ್ಯಂತರ ಸರ್ಕಾರ ಮುನ್ನಡೆಸಲು, ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯನ್ಯಾಯಮೂರ್ತಿ ಸುಶೀಲಾ ಕಾರ್ಕಿ, ಕಠ್ಮಂಡು ಮೇಯರ್ ಬಾಲೇಂದ್ರ ಶಾ ಹಾಗೂ ವಿದ್ಯುತ್ ಮಂಡಳಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕ ಕುಲಮಾನ್ ಘೀಸಿಂಗ್ ಅವರ ಹೆಸರುಗಳನ್ನು ಪ್ರತಿಭಟನೆ ನಡೆಸುತ್ತಿರುವ ಜೆನ್–ಝಿ ಯುವ ಸಮುದಾಯ ಪರಿಗಣಿಸುತ್ತಿದೆ ಎಂದು ಮೂಲಗಳು ಹೇಳಿವೆ.

'ಜೆನ್–ಝೀ' ನಾಯಕರು ಈ ಸಂಬಂಧ ಆನ್‌ಲೈನ್ ಮೂಲಕ ಚರ್ಚೆ ನಡೆಸುತ್ತಿದ್ದಾರೆ ಎಂದೂ ಮೂಲಗಳು ಹೇಳಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಕಾರ್ಕಿ ಅವರು,'ಮಧ್ಯಂತರ ಸರ್ಕಾರ ರಚನೆ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಜ್ಞರು ಒಟ್ಟಾಗಿ ಚರ್ಚಿಸಬೇಕು' ಎಂದು ಹೇಳಿದ್ದಾರೆ.

ಬಿಗಿ ಭದ್ರತೆ: ಪ್ರತಿಭಟನಕಾರರು ಸಂಸತ್ ಕಟ್ಟಡ, ಪ್ರಧಾನಿ ನಿವಾಸ ಸೇರಿದಂತೆ ದೇಶದ ಪ್ರಮುಖ ಕಟ್ಟಡಗಳಿಗೆ ಬೆಂಕಿಹಚ್ಚುವ ಮೂಲಕ ಹಿಂಸಾಚಾರ ನಡೆಸಿದ ಕಾರಣ ಮಂಗಳವಾರ ರಾತ್ರಿಯಿಂದಲೇ ಎಲ್ಲ ಭದ್ರತಾ ಕಾರ್ಯಾಚರಣೆಗಳನ್ನು ಸೇನೆ ಬಿಗಿಗೊಳಿಸಿದೆ.

ಬುಧವಾರ ಸಂಜೆ 5 ಗಂಟೆವರೆಗೆ ನಿರ್ಬಂಧ ಆದೇಶಗಳು ಜಾರಿಯಲ್ಲಿದ್ದವು. ನಿಷೇಧಾಜ್ಞೆಯು ಗುರುವಾರ ಸಂಜೆ 6 ಗಂಟೆವರೆಗೆ ಜಾರಿಯಲ್ಲಿರಲಿದೆ ಎಂದು ಸೇನೆ ತಿಳಿಸಿದೆ.

ರಸ್ತೆಗಳು, ಪ್ರಮುಖ ಸ್ಥಳಗಳಲ್ಲಿ ಸೈನಿಕರನ್ನು ನಿಯೋಜಿಸಲಾಗಿದ್ದು, ಜನ ಸಂಚಾರವಿಲ್ಲದೇ ರಾಜಧಾನಿ ಕಠ್ಮಂಡು ಬುಧವಾರ ಸ್ತಬ್ಧವಾಗಿತ್ತು.

ಪ್ರತಿಭಟನೆ, ಹಿಂಸಾಚಾರ, ಬೆಂಕಿ ಹಚ್ಚುವುದು ಅಥವಾ ಜನರ ಮತ್ತು ಕಟ್ಟಡಗಳ ಮೇಲೆ ಯಾವುದೇ ರೀತಿಯ ದಾಳಿಯನ್ನು ನಡೆಸುವುದನ್ನು ಕ್ರಿಮಿನಲ್ ಪ್ರಕರಣವೆಂದು ಪರಿಗಣಿಸಿ ಕಠಿಣ ಕ್ರಮಕೈಗೊಳ್ಳಲಾಗುವುದೆಂದು ಸೇನೆ ಎಚ್ಚರಿಸಿದೆ.

'ಅತ್ಯಾಚಾರ ಮತ್ತು ಭೀಕರ ದಾಳಿಗಳು ನಡೆಯುವ ಸಾಧ್ಯತೆಯಿದ್ದು, ಅದಕ್ಕಾಗಿ ನಿರ್ಬಂಧ ಮತ್ತು ನಿಷೇಧಾಜ್ಞೆಯನ್ನು ಹೇರಲಾಗಿದೆ' ಎಂದು ಸೇನೆ ಹೇಳಿದೆ.



ನೇಪಾಳ ರಾಜಧಾನಿ ಕಠ್ಮಂಡುವಿನಲ್ಲಿ ಬುಧವಾರ ಬಿಗಿಭದ್ರತೆ ಹಾಕಲಾಗಿತ್ತು — ಎಎಫ್‌ಪಿ ಚಿತ್ರ

13,500 ಕೈದಿಗಳು ಪರಾರಿ, ಐವರ ಸಾವು

ಪಶ್ಚಿಮ ನೇಪಾಳದಲ್ಲಿನ ಜೈಲಿನಲ್ಲಿ ಪೊಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ, ಕಾನೂನು ಸಂಘರ್ಷಕ್ಕೆ ಒಳಗಾದ ಐವರು ಬಾಲಕರು ಮೃತಪಟ್ಟಿದ್ದಾರೆ.

ದೇಶದಾದ್ಯಂತ ವಿವಿಧ ಜೈಲುಗಳಿಂದ 13,500ಕ್ಕೂ ಅಧಿಕ ಕೈದಿಗಳು ಪರಾರಿಯಾಗಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಪ್ರತಿಭಟನೆಯ ಲಾಭ ಪಡೆದುಕೊಂಡ ಕೈದಿಗಳು ಭದ್ರತಾ ಸಿಬ್ಬಂದಿಯೊಂದಿಗೆ ಘರ್ಷಣೆ ನಡೆಸಿ ಪರಾರಿಯಾಗಿದ್ದಾರೆ. ಪರಾರಿಯಾದವರಲ್ಲಿ, ಕಾನೂನು ಸಂಘರ್ಷಕ್ಕೆ ಒಳಗಾದ 76 ಬಾಲಕರು ಸಹ ಸೇರಿದ್ದಾರೆ.

ಪ್ರಮುಖ ಬೆಳವಣಿಗೆಗಳು

- ಎರಡು ದಿನ ನಡೆದ ಪ್ರತಿಭಟನೆ ಮತ್ತು ಘರ್ಷಣೆಯಲ್ಲಿ ಒಟ್ಟು 25 ಮಂದಿ ಮೃತಪಟ್ಟಿದ್ದಾರೆ. ಸುಮಾರು 600 ಮಂದಿ ಗಾಯಗೊಂಡಿದ್ದಾರೆ ಎಂದು ಸೇನೆ ತಿಳಿಸಿದೆ
- ನೇಪಾಳ ಸೇನಾ ಮುಖ್ಯಸ್ಥ ಅಶೋಕ್ ಸಿಗ್ದೆಲ್ ಅವರು ಪ್ರತಿಭಟನಕಾರರ ಮುಖ್ಯಸ್ಥರನ್ನು ಮತ್ತು ವಿವಿಧ ಪಕ್ಷಗಳ ಮುಖಂಡರನ್ನು ಭೇಟಿಯಾಗಿ ಮಾತುಕತೆ ನಡೆಸಿದರು
- ಹಿಂಸಾಚಾರದಲ್ಲಿ ಭಾಗಿಯಾದ 27 ಜನರನ್ನು ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ
- ಕಠ್ಮಂಡುವಿನ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಬುಧವಾರ ಮತ್ತೆ ಕಾರ್ಯಾರಂಭಿಸಿದೆ

ರಾಜಸ್ಥಾನದಿಂದ ವಿಶೇಷ ಘಟಕ

ಜೈಪುರ: ಹಿಂಸೆಯಿಂದ ನಲುಗಿರುವ ನೇಪಾಳದಲ್ಲಿ ಸಿಲುಕಿರುವ ರಾಜ್ಯದ ಜನರಿಗೆ ನೆರವು ನೀಡುವುದಕ್ಕಾಗಿ ರಾಜಸ್ಥಾನ ಸರ್ಕಾರ ವಿಶೇಷ ಘಟಕ ಆರಂಭಿಸಿದೆ. ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ ಅವರು ಕಠ್ಮಂಡುವಿನಲ್ಲಿರುವ ಭಾರತೀಯ ರಾಯಭಾರಿ ಜೊತೆ ಸಂಪರ್ಕದಲ್ಲಿದ್ದು, ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂವಿಧಾನ ಶ್ಲಾಘಿಸಿದ 'ಸುಪ್ರೀಂ'

ನವದೆಹಲಿ: ನೇಪಾಳದ ಅಸ್ಥಿರತೆ ಬಗ್ಗೆ 'ನಮ್ಮ ನೆರೆಯ ದೇಶದಲ್ಲಿ ಏನಾಗುತ್ತಿದೆ ನೋಡಿ' ಎಂದಿರುವ ಸುಪ್ರೀಂ ಕೋರ್ಟ್, ಇದೇ ವೇಳೆ ಭಾರತದ ಸಂವಿಧಾನದ ಚೌಕಟ್ಟಿನ ಸ್ಥಿರತೆ ಮತ್ತು ಘನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶ್ಲಾಘಿಸಿದೆ.

ಬಿ.ಆರ್. ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ನೆರೆಯ ದೇಶ ಬಾಂಗ್ಲಾದೇಶದಲ್ಲಿ ಮುಂದುವರಿದಿರುವ ಉದ್ವಿಗ್ನತೆ ಮತ್ತು ಕಳೆದ ವರ್ಷ ಅಲ್ಲಿ ನಡೆದ ಗಲಭೆಯನ್ನು ನ್ಯಾಯಮೂರ್ತಿ ವಿಕ್ರಮ್ ಉಲ್ಲೇಖಿಸಿದರು.

ಮೋಡ ಕವಿದ ವಾತಾವರಣ ಪ್ರಯೋಗಾತ್ಮಕ ಸಿನಿಮಾ

• ಅಭಿಲಾಷ್ ಪಿ.ಎಸ್.

ಕೊಡಗಿನ ಕುವರಿ ನಟಿ ಮೋಕ್ಷ ಕುಶಾಲ್ ನಟನೆಯ, ಸಿಂಪಲ್ ಸುನಿ ನಿರ್ದೇಶನದ 'ಮೋಡ ಕವಿದ ವಾತಾವರಣ' ಶೀರ್ಷಿಕೆಯಿಂದಲೇ ಗಮನ ಸೆಳೆದ ಸಿನಿಮಾ. ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಸಿನಿಮಾ ನವೆಂಬರ್‌ನಲ್ಲಿ ರಿಲೀಸ್ ಆಗುವ ಸಾಧ್ಯತೆ ಇದೆ. ಧನಂಜಯ ನಟನೆಯ 'ಕೋಟಿ' ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿದ್ದ ಮೋಕ್ಷ ಈ ಸಿನಿಮಾವನ್ನು ಒಂದು ಪ್ರಯೋಗಾತ್ಮಕ ಸಿನಿಮಾವನ್ನಾಗಿ ಕಂಡಿದ್ದಾರೆ. ತಮ್ಮ ಸಿನಿಪಯಣದ ಬಗ್ಗೆ ಮೋಕ್ಷ ಮಾತಿಗಿಳಿದಾಗ...

'ನನ್ನ ಸಿನಿ ಜರ್ನಿಯ ಮೊದಲ ಹೆಜ್ಜೆಯೇ 'ಜಿಯೊ ಸ್ಟುಡಿಯೊಸ್'ನಂಥ ದೊಡ್ಡ ಪ್ರೊಡಕ್ಷನ್ ಹೌಸ್ ಮೂಲಕ ಆಗಿತ್ತು. ಕಿರುಚಿತ್ರಗಳಲ್ಲಿ ನಟಿಸಿದ್ದ ನಾನು ಧನಂಜಯ ಅವರ ಜೊತೆ ತೆರೆ ಹಂಚಿಕೊಂಡ ಬಳಿಕ ಕನ್ನಡಿಗರಿಗೆ ಹೆಚ್ಚು ಪರಿಚಿತಳಾದೆ. ಇದು ನನ್ನ ಮುಂದಿನ ಹೆಜ್ಜೆಗಳಿಗೂ ಸಹಕಾರಿಯಾಗಿದೆ. ನನಗೆ 'ಕೋಟಿ' ಸಿನಿಮಾದಲ್ಲಿ ಅವಕಾಶ ಸಿಕ್ಕಿದ್ದೇ ಸುನಿ ಅವರ 'ಮೋಡ ಕವಿದ ವಾತಾವರಣ' ಸಿನಿಮಾದಿಂದ. ಆ ಸಂದರ್ಭದಲ್ಲಿ ಈ ಶೀರ್ಷಿಕೆ ಘೋಷಣೆಯಾಗಿರಲಿಲ್ಲ. ಸಿನಿಮಾಗೆ ಬೇರೊಂದು ಶೀರ್ಷಿಕೆ ಇತ್ತು. ಈ ಸಿನಿಮಾದ ಟಾಕಿ ಭಾಗ ಶೂಟಿಂಗ್ ಪೂರ್ಣಗೊಂಡ ಸಂದರ್ಭದಲ್ಲಿ 'ಕೋಟಿ'ಯ ಆಡಿಷನ್‌ಗೆ ಕರೆದಿದ್ದರು' ಎನ್ನುತ್ತಾ ಬಿಡುಗಡೆಗೆ ಸಿದ್ಧವಿರುವ ತಮ್ಮ ಪ್ರಾಜೆಕ್ಟ್ ಬಗ್ಗೆ ಮೋಕ್ಷ ಮಾತು ಹೊರಳಿಸಿದರು.

'ಸುನಿ ಅವರ 'ಮೋಡ ಕವಿದ ವಾತಾವರಣ' ಸಿನಿಮಾ ಬಗ್ಗೆ ನನಗೆ ಬಹಳ ನಿರೀಕ್ಷೆಯಿದೆ. ಅವರ ನಿರ್ದೇಶನದ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಕನಸು ಇತ್ತು. ಹೊಸಬರನ್ನು ಪರಿಚಯಿಸುವುದರಲ್ಲಿ ಅವರು ನಿಸ್ಸೀಮ. ಯಾವುದೇ ಸಿನಿಮಾ ಹಿನ್ನೆಲೆಯಿಲ್ಲದೆ ನನಗೆ ಮೊದಲ ಅವಕಾಶವಿತ್ತವರು. ಹೊಸ ಪ್ರತಿಭೆಗಳ ಸಿನಿಮಾಗಳಿಗೆ ನಿರ್ಮಾಪಕರು ಸಿಗುವುದು ವಿರಳ. ಇಂತಹ ಸಂದರ್ಭದಲ್ಲಿ ಕಡಿಮೆ ಬಜೆಟ್‌ನಲ್ಲಿ ಸಿನಿಮಾಗಳನ್ನು ನಿರ್ಮಿಸಿ, ಜನತೆಗೆ ತಲುಪಿಸುವ ಕಲೆ ಅವರಿಗಿದೆ. ಅವರ ಯೋಚನೆಯೇ ಭಿನ್ನ.

> 'ಗತವೈಭವ' ಸಿನಿಮಾ ಶೂಟಿಂಗ್ ನಡೆಯುತ್ತಿದೆ. 'ಮೋಡ ಕವಿದ ವಾತಾವರಣ' ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದ್ದು, ಬಿಡುಗಡೆಗೆ ಸಿದ್ಧವಿದೆ. ನವೆಂಬರ್‌ನಲ್ಲಿ ರಿಲೀಸ್ ಮಾಡುವ ಯೋಚನೆಯಿದೆ.
> **ಸಿಂಪಲ್ ಸುನಿ,** ನಿರ್ದೇಶಕ.

ಚಿತ್ರೀಕರಣದ ಸಂದರ್ಭದಲ್ಲಿ ಸಿದ್ಧತೆ ಮಾಡಿಕೊಂಡು ಹೋದರೆ ಅದೆಲ್ಲಾ ವ್ಯರ್ಥ. ಶೂಟಿಂಗ್ ವೇಳೆಯೇ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಮುಂದಡಿ ಇಡುವ ಜಾಣ್ಮೆ ಅವರಿಗಿದೆ. ಆರಂಭದಲ್ಲಿ ಇದ್ದ ಕಥೆ ಶೂಟಿಂಗ್ ವೇಳೆ ಬದಲಾಗುತ್ತಾ ಹೋಯಿತು. ಇದರಿಂದ ನಾನೂ ಕಲಿಯುತ್ತ ಬೆಳೆದೆ. 'ಮೋಡ ಕವಿದ ವಾತಾವರಣ' ಸಿನಿಮಾದಲ್ಲೊಂದು ಒಳ್ಳೆಯ ಪಾತ್ರ ನನಗೆ ದೊರಕಿದೆ. ಸುನಿ ಅವರ ಇತರೆ ಸಿನಿಮಾಗಳಿಗಿಂತ ಈ ಸಿನಿಮಾ ಭಿನ್ನವಾಗಿದೆ. ಅವರಿಗೂ ಇದು ಒಂದು ಪ್ರಯೋಗಾತ್ಮಕ ಸಿನಿಮಾ. ಸಾಮಾನ್ಯ ಕಥೆ ಇದಲ್ಲ. ಹೊಸತನವನ್ನು ಬಯಸುತ್ತಿರುವ ಪ್ರೇಕ್ಷಕರಿಗೆ ಇದು ರುಚಿಸಲಿದೆ' ಎಂದರು ಮೋಕ್ಷ.

'ಸದ್ಯ ಯಾವುದೇ ಹೊಸ ಸಿನಿಮಾ ಒಪ್ಪಿಕೊಂಡಿಲ್ಲ. ಕಥೆಗಳನ್ನು ಕೇಳುತ್ತಿದ್ದೇನೆ. 'ಕೋಟಿ' ಬಳಿಕ ಒಳ್ಳೆಯ ಕಥೆ, ಪಾತ್ರಕ್ಕೆ ಕಾಯುತ್ತಿದ್ದೇನೆ. ಸಿನಿಮಾ ಸಂಖ್ಯೆಗಳಿಗಿಂತ ನಟಿಯಾಗಿ ಬೆಳೆಯಬೇಕು ಎನ್ನುವ ಆಸೆ ಇದೆ' ಎನ್ನುತ್ತಾರೆ ಮೋಕ್ಷ. ❖


ಮೋಕ್ಷ



ಸಿನಿಮಾ ನಿರ್ಮಾಣಕ್ಕೆ ಇಳಿದ ಪ್ರಜ್ವಲ್

ಸಾಕಷ್ಟು ನಟರು ಒಂದಷ್ಟು ಸಿನಿಮಾಗಳ ಬಳಿಕ ನಿರ್ದೇಶನ ಅಥವಾ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು ಹೊಸತೇನಲ್ಲ. ನಟ ಪ್ರಜ್ವಲ್ ದೇವರಾಜ್ ಅದೇ ಹಾದಿ ಹಿಡಿದಿದ್ದು, ತಮ್ಮ ನೂತನ ನಿರ್ಮಾಣ ಸಂಸ್ಥೆಗೆ ಇತ್ತೀಚೆಗಷ್ಟೇ ಚಾಲನೆ ನೀಡಿದ್ದಾರೆ. ಸಹೋದರ ಪ್ರಣಂ ದೇವರಾಜ್ ಅವರ 'S/O ಮುತ್ತಣ್ಣ' ಸಿನಿಮಾ ನಿರ್ಮಾಣ ಮಾಡಿರುವ ಪುರಾತನ ಫಿಲ್ಮ್ಸ್ ಜತೆ ಕೈಜೋಡಿಸಿ ಪ್ರಜ್ವಲ್ ತಮ್ಮ ಮುಂದಿನ ಸಿನಿಮಾವನ್ನು ನಿರ್ಮಿಸಲಿದ್ದಾರೆ.

'ನಮ್ಮ ಸಂಸ್ಥೆಗೆ P2 ಪ್ರೊಡಕ್ಷನ್ಸ್ ಎಂದು ಹೆಸರಿಡಲಾಗಿದೆ. ಇತ್ತೀಚೆಗಷ್ಟೇ ಪೂಜೆ ಮಾಡಿ ಸಂಸ್ಥೆಯ ಹೆಸರು ಅನಾವರಣ ಮಾಡಿದ್ದೇವೆ. 'S/O ಮುತ್ತಣ್ಣ' ಕಥೆಯನ್ನು ತಂದೆ ದೇವರಾಜ್ ಕೇಳಿ ಅಂತಿಮ ಮಾಡಿದ್ದರು. ಅವರ ಆಪ್ತರಾಗಿರುವ ಪುರಾತನ ಫಿಲ್ಮ್ಸ್‌ನಿಂದ ಇನ್ನಷ್ಟು ಉತ್ತಮ ಸಿನಿಮಾಗಳ ನಿರ್ಮಾಣದ ಬಗ್ಗೆ ಈ ಹಿಂದೆ ಹೇಳಿದ್ದೆವು. ಅವರ ಜತೆ ಕೈಜೋಡಿಸಿ ನಮ್ಮ ಮುಂದಿನ ಸಿನಿಮಾಗಳು ನಿರ್ಮಾಣಗೊಳ್ಳಲಿವೆ. 'S/O ಮುತ್ತಣ್ಣ' ತಂಡದಿಂದಲೇ ಇನ್ನೊಂದು ಸಿನಿಮಾ ಮಾಡುವ ಆಲೋಚನೆಯಿದೆ' ಎನ್ನುತ್ತಾರೆ ಪ್ರಜ್ವಲ್.

ಪ್ರಜ್ವಲ್ ಅವರ 'ಮಾಫಿಯಾ' ಚಿತ್ರ ಬಿಡುಗಡೆ ಸಿದ್ಧವಿದೆ. ಅವರ ಪತ್ನಿ ರಾಗಿಣಿ ಕೂಡ ನಟನೆಯಲ್ಲಿ ಸಕ್ರಿಯರಾಗಿದ್ದಾರೆ. ಪ್ರಣಂ ಅವರ ಮುಂದಿನ ಚಿತ್ರವನ್ನು ಈ ಸಂಸ್ಥೆ ನಿರ್ಮಿಸಲಿದೆ ಎನ್ನಲಾಗಿದೆ.

ಪೌರಕಾರ್ಮಿಕರ ಬವಣೆ 'ರಾಮ ಆ್ಯಂಡ್ ರಾಮು'


ಸೌಮ್ಯ

ಚಂದ್ರು ಓಬಯ್ಯ ನಿರ್ದೇಶಿಸಿ, ನಟಿಸಿರುವ 'ರಾಮ ಆ್ಯಂಡ್ ರಾಮು' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಂದ್ರು ಓಬಯ್ಯ ಈ ಹಿಂದೆ 'ಯೂ ಟರ್ನ್-2', 'ಕರಿಮಣಿ ಮಾಲೀಕ' ಚಿತ್ರಗಳನ್ನು ನಿರ್ದೇಶಿಸಿದ್ದರು.

ಪೌರ ಕಾರ್ಮಿಕರು ದಿನನಿತ್ಯ ಎದುರಿಸುತ್ತಿರುವ ಸಮಸ್ಯೆಗಳು, ಈ ವಿಷಯದಲ್ಲಿ ನಾಗರಿಕರ ಪಾತ್ರದ ಬಗ್ಗೆ ಈ ಚಿತ್ರದಲ್ಲಿ ಹೇಳಲಾಗಿದೆ. 'ಈ ಚಿತ್ರವನ್ನು ವರ್ಷದ ಹಿಂದೆ ಆರಂಭಿಸಿದ್ದೆ. ಫೇಸ್‌ಬುಕ್‌ನಲ್ಲಿ ನೋಡಿದ ವಿಡಿಯೊವೊಂದು ಈ ಸಿನಿಮಾವಾಗಲು ಪ್ರೇರಣೆ. ನಮ್ಮ ಪರಿಸರ, ರಸ್ತೆಯನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕ ಮಹಿಳೆಯೊಬ್ಬಳು ಮನೆಯ ಮುಂದೆ ನಿಂತು ನೀರು ಕೇಳಿದಾಗ, ಆ ಮನೆಯವರು ನಡೆದುಕೊಂಡ ರೀತಿ ಕಂಡು ನನ್ನ ಮನಸಿಗೆ ತುಂಬಾ ನೋವಾಯಿತು. ಅದೇ ಘಟನೆ ಇಟ್ಟುಕೊಂಡು ಕಾದಂಬರಿ ಬರೆದೆ. ನಂತರ ಅದನ್ನೇ ಈ ಸಿನಿಮಾ ಮಾಡಿದ್ದೇನೆ. ನಮ್ಮ ಪರಿಸರವನ್ನು ಸ್ವಚ್ಛ ಮಾಡುವವರನ್ನು ನಾವೇ ಗೌರವಿಸದಿದ್ದರೆ ಹೇಗೆ ಎಂಬ ಸಂದೇಶ ನೀಡುವ ಚಿತ್ರವಿದು' ಎಂದರು ನಿರ್ದೇಶಕರು.

ಈಗಾಗಲೇ ಚಿತ್ರ ಬಿಡುಗಡೆ ಹಂತಕ್ಕೆ ಬಂದಿದ್ದು, ಸೆನ್ಸಾರ್‌ನಿಂದ ಯು/ಎ ಪ್ರಮಾಣಪತ್ರ ಪಡೆದಿದೆ. ಸೌಮ್ಯ ಚಿತ್ರದ ನಾಯಕಿ. ನಾಗೇಂದ್ರ ಅರಸ್, ಮೂಗು ಸುರೇಶ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ.

ಇದು ಟೈಮ್ ಪಾಸ್ ಟೀಸರ್

ಚೇತನ್ ಜೋಡಿದಾರ್ ನಿರ್ದೇಶನ 'ಟೈಮ್ ಪಾಸ್' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ಅಕ್ಟೋಬರ್ 17ರಂದು ಚಿತ್ರ ತೆರೆಗೆ ಬರಲಿದೆ.

'ಡಾರ್ಕ್ ಹ್ಯೂಮರ್ ಜಾನರಿನ ಕಥೆಯಿದು. ಮನೋರಂಜನೆಯನ್ನೇ ಮುಖ್ಯ ಬಿಂದುವಾಗಿಸಿಕೊಂಡು ಈ ಕಥೆ ಮಾಡಲಾಗಿದೆ. ನನ್ನ ಚೊಚ್ಚಲ ಸಿನಿಮಾ. ಯಾವ ನಿರ್ದೇಶಕರ ಬಳಿಯೂ ಕೆಲಸ ಮಾಡಿಲ್ಲ. ಸಿನಿಮಾ ಪ್ರೇಮದಿಂದ ಎಲ್ಲವನ್ನೂ ನೋಡಿ ಕಲಿತಿದ್ದೇನೆ' ಎಂದಿದ್ದಾರೆ ನಿರ್ದೇಶಕರು.

ಶ್ರೀ ಚೇತನ ಸರ್ವಿಸಸ್ ಬ್ಯಾನರ್ ಮೂಲಕ ಗುಂಡೂರು ಶೇಖರ್, ಕಿರಣ್ ಕುಮಾರ್ ಶೆಟ್ಟಿ, ಎಂ.ಹೆಚ್.ಕೃಷ್ಣಮೂರ್ತಿ ನಿರ್ಮಾಣ ಮಾಡಿದ್ದಾರೆ. ಇಮ್ರಾನ್ ಪಾಷಾ, ವೈಸಿರಿ ಕೆ.ಗೌಡ, ರಕ್ಷಾರಾಮ್ ಮುಂತಾದವರು ಚಿತ್ರದಲ್ಲಿದ್ದಾರೆ.

ಡಿ.ಎಂ. ಉದಯ ಕುಮಾರ್ (ಡಿಕೆ) ಸಂಗೀತ ನಿರ್ದೇಶನ, ರಾಜೀವ್ ಗಣೇಶ್ ಛಾಯಾಚಿತ್ರಗ್ರಹಣ, ಹರಿ ಪರಮ್ ಸಂಕಲನ ಈ ಚಿತ್ರಕ್ಕಿದೆ.


ಚಿತ್ರದ ಪೋಸ್ಟರ್

ವಿಶ್ವ ಬಾಕ್ಸಿಂಗ್: ಸೆಮಿಗೆ ಜಾಸ್ಮಿನ್, ನೂಪುರ್


ಜಾಸ್ಮಿನ್

ಲಿವರ್‌ಪೂಲ್ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಜಾಸ್ಮಿನ್ ಹಾಗೂ ನೂಪುರ್ ಶೆವೊರಾನ್ ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ಸ್ ತಲುಪಿದರು. ಅದರೊಂದಿಗೆ ಕೂಟದಲ್ಲಿ ಭಾರತಕ್ಕೆ ಎರಡು ಪದಕ ಖಚಿತವಾದವು.

ವಿಶ್ವ ಬಾಕ್ಸಿಂಗ್ ಕಪ್ ವಿಜೇತೆ ಜಾಸ್ಮಿನ್ ಅವರು ಮಹಿಳೆಯರ 57 ಕೆ.ಜಿ. ವಿಭಾಗದ ಎಂಟರ ಘಟ್ಟದಲ್ಲಿ ಉಜ್ಬೇಕಿಸ್ತಾನದ ಖುಮೊರಬೊನು ಮಮಜೊನಾವಾಟೊ ಅವರನ್ನು 5–0ಯಿಂದ ಸುಲಭವಾಗಿ ಮಣಿಸಿದರು. ಹೆವಿವೇಟ್ ಬಾಕ್ಸರ್ ನೂಪುರ್ ಅವರು 80 + ಕೆ.ಜಿ ವಿಭಾಗದಲ್ಲಿ ಉಜ್ಬೇಕಿಸ್ತಾನದ ಓಲ್ಟಿನೊಯ್ ಸೊಟಿಮ್‌ಬೊಯೆವಾ ಅವರನ್ನು 4–1 ರಿಂದ ಸೋಲಿಸಿದರು.

ಬಾಕ್ಸಿಂಗ್ ದಂತಕತೆ ಹವಾ ಸಿಂಗ್ ಅವರ ಮೊಮ್ಮಗಳಾದ 26 ವರ್ಷ ವಯಸ್ಸಿನ ನೂಪುರ್ ನೇರವಾಗಿ ಕ್ವಾರ್ಟರ್‌ಫೈನಲ್‌ಗೆ ಪ್ರವೇಶ ಪಡೆದಿದ್ದರು.

ಜುಗ್ನೂ ಅಹ್ಲಾವತ್ ಅವರ ಅಭಿಯಾನ ಮೊದಲ ಸುತ್ತಿನಲ್ಲೇ ಅಂತ್ಯಗೊಂಡಿತು. ಅವರು 85 ಕೆ.ಜಿ. ವಿಭಾಗದಲ್ಲಿ ಸ್ಕಾಟ್ಲೆಂಡ್‌ನ ರಾಬರ್ಟ್ ಮೆಕ್ ನುಲ್ಟಿ ಅವರಿಗೆ ಮಣಿದರು. ಮೂರನೇ ಬಾರಿ ಪ್ರಶಸ್ತಿ ಗೆಲ್ಲುವ ಉತ್ಸಾಹದಲ್ಲಿದ್ದ ನಿಖತ್ ಜರೀನ್ ಅವರು ಮಹಿಳೆಯರ 51 ಕೆ.ಜಿ. ವಿಭಾಗದಲ್ಲಿ 0–5ರಿಂದ ಟರ್ಕಿಯ ಬೂಸೆ ನಾಜ್ ಛಕುರೊಲೂ ಎದುರು ಸೋತು ಆಘಾತ ಅನುಭವಿಸಿದರು.

ಸ್ಮರಣ್, ದನೀಶ್ ಮೇಲೆ ಚಿತ್ತ

ದುಲೀಪ್ ಟ್ರೋಫಿ ಫೈನಲ್ ಇಂದಿನಿಂದ
• ರನ್ ಹೊಳೆ ಹರಿಯುವ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಲದ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್ ಪಂದ್ಯಗಳಲ್ಲಿ ಎಲ್ಲರ ಚಿತ್ತ 'ತಾರಾ ವರ್ಚಸ್ಸು' ಇರುವ ಆಟಗಾರರ ಮೇಲೆ ನೆಟ್ಟಿತ್ತು. ಆದರೆ ಗುರುವಾರ ಆರಂಭವಾಗಲಿರುವ ದಕ್ಷಿಣ ವಲಯ ಮತ್ತು ಕೇಂದ್ರ ವಲಯ ತಂಡಗಳ ನಡುವಣ ಫೈನಲ್ ಪಂದ್ಯದಲ್ಲಿ ಉದಯೋನ್ಮುಖ ಆಟಗಾರರ ಮೇಲೆ ಎಲ್ಲರ ಗಮನ ಇದೆ.

ಏಕೆಂದರೆ, ಸ್ಟಾರ್ ಆಟಗಾರರೆಲ್ಲರೂ ಈಗ ಭಾರತ ಮತ್ತು ಭಾರತ ಎ ತಂಡಗಳಿಗೆ ಆಯ್ಕೆಯಾಗಿ ಹೋಗಿದ್ದಾರೆ. ಆದ್ದರಿಂದ ದಕ್ಷಿಣ ತಂಡದಲ್ಲಿ ಆಡಲಿರುವ ಕರ್ನಾಟಕದ ಉದಯೋನ್ಮುಖ ಬ್ಯಾಟರ್ ಆರ್. ಸಮರ್ಥ್, ತಮಿಳುನಾಡಿನ ವೇಗಿ ಗುರ್ಜಪನೀತ್ ಸಿಂಗ್, ಕೇಂದ್ರ ತಂಡದಲ್ಲಿರುವ ದನೀಶ್ ಮಾಳೆವರ್, ಕಾರ್ತಿಕೇಯ ಸಿಂಗ್ ಮತ್ತು ಶುಭಂ ಶರ್ಮಾ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಹಾಗೆ ನೋಡಿದರೆ, ಸದ್ಯ ಭಾರತ ತಂಡದಲ್ಲಿ ಆಡುತ್ತಿರುವ ಖ್ಯಾತನಾಮ ಆಟಗಾರನೆಂದರೆ ರಜತ್ ಪಾಟೀದಾರ್ ಒಬ್ಬರೇ. ಅವರು ಕೂಡ ರಾಷ್ಟ್ರೀಯ ತಂಡಕ್ಕೆ ಮರಳುವ ಛಲದಲ್ಲಿದ್ದಾರೆ. ಐಪಿಎಲ್ ಟೂರ್ನಿಯ ಹದಿನೆಂಟು ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಪ್ರಶಸ್ತಿ (2025) ಜಯಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವನ್ನು ಮುನ್ನಡೆಸಿದ್ದರು. ಇದೀಗ ಕೇಂದ್ರ ವಲಯದ ನಾಯಕರಾಗಿದ್ದಾರೆ. ಕೇರಳದ ಮೊಹಮ್ಮದ್ ಅಜರುದ್ದೀನ್ ನಾಯಕತ್ವದಲ್ಲಿ ದಕ್ಷಿಣ ವಲಯ ಆಡಲಿದೆ.

> **ಜಗದೀಶನ್, ಪಡಿಕ್ಕಲ್ ಈ ಪಂದ್ಯದಲ್ಲಿ ಆಡುತ್ತಿಲ್ಲ. ಅವರು ಭಾರತ ಎ ತಂಡದಲ್ಲಿ ಸ್ಥಾನ ಪಡೆದಿರುವುದು ಸಂತಸದ ಸಂಗತಿ. ಅವರ ಬದಲಿಗೆ ಆಡಲು ನಮ್ಮಲ್ಲಿ ಪ್ರತಿಭಾವಂತರಿದ್ದಾರೆ**
> **ಮೊಹಮ್ಮದ್ ಅಜರುದ್ದೀನ್,** ದಕ್ಷಿಣ ವಲಯ ತಂಡದ ನಾಯಕ

ಕಳೆದ ರಣಜಿ ಋತುವಿನಲ್ಲಿ ಸ್ಮರಣ್ ಅವರು ಏಳು ಪಂದ್ಯಗಳಲ್ಲಿ ಆಡಿದ್ದರು. ಎರಡು ಶತಕಗಳಿದ್ದ 516 ರನ್‌ಗಳನ್ನು ಕಲೆಹಾಕಿದ್ದರು. 64.50ರ ಸರಾಸರಿಯಲ್ಲಿ ಅವರು ರನ್ ಗಳಿಸಿದ್ದರು. ಲಿಸ್ಟ್ ಎ ಮತ್ತು ಟಿ20 ಪಂದ್ಯಗಳಲ್ಲಿಯೂ ಅವರು ಗಮನ ಸೆಳೆಯುವಂತಹ ಬ್ಯಾಟಿಂಗ್ ಮಾಡಿದ್ದರು. 10 ಲಿಸ್ಟ್ ಎ ಪಂದ್ಯಗಳಲ್ಲಿ 433 ರನ್ ಮತ್ತು ಆರು ಟಿ20 ಪಂದ್ಯಗಳಲ್ಲಿ 170 ರನ್ ಕಲೆಹಾಕಿದ್ದರು.



ದಕ್ಷಿಣ ವಲಯ ತಂಡದಲ್ಲಿ ಆಡಲಿರುವ ಆರ್. ಸಮರ್ಥ್ (ಎಡ) ಕೇಂದ್ರ ವಲಯ ತಂಡದ ನಾಯಕ ರಜತ್ ಪಾಟೀದಾರ್

ಆದ್ದರಿಂದ 22 ವರ್ಷದ ಎಡಗೈ ಬ್ಯಾಟರ್ ಸ್ಮರಣ್ ಮೇಲೆ ಈಗ ಆಯ್ಕೆ ಸಮಿತಿಯ ನಿಗಾ ಇರುವುದು ಸಹಜ. ಅದಕ್ಕೆ ತಕ್ಕಂತೆ ತಮ್ಮ ಲಯ ಕಾಪಾಡಿಕೊಳ್ಳುವ ಸವಾಲು ಸ್ಮರಣ್ ಅವರಿಗೆ ಇದೆ. ಅವರೊಂದಿಗೆ 19 ವರ್ಷದ ಆ್ಯಂಡ್ರೆ ಸಿದ್ಧಾರ್ಥ್ ಅವರು ಕೂಡ ಕಳೆದ ಋತುವಿನ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 612 ರನ್ ಗಳಿಸಿದ್ದರು. ಅದರೊಂದಿಗೆ ದೇಶಿ ಕ್ರಿಕೆಟ್ ಪಯಣವನ್ನು ಭರ್ಜರಿಯಾಗಿ ಆರಂಭಿಸಿದ್ದರು. ಎನ್. ಜಗದೀಶನ್ ಮತ್ತು ದೇವದತ್ತ ಪಡಿಕ್ಕಲ್ ಅವರ ಸ್ಥಾನಗಳನ್ನು ಸಮರ್ಥವಾಗಿ ತುಂಬಬೇಕಾದ ಜವಾಬ್ದಾರಿ ಇವರಿಬ್ಬರ ಮೇಲೆ ಇದೆ.

ಕೇಂದ್ರ ತಂಡದ ದನೀಶ್ ಮಾಳೆವರ್ ಇದೇ ಟೂರ್ನಿಯ ಕ್ವಾರ್ಟರ್‌ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ಕ್ರಮವಾಗಿ 203 ಮತ್ತು 76 ರನ್ ಗಳಿಸಿದ್ದಾರೆ. ವಿದರ್ಭದ 21 ವರ್ಷದ ಆಟಗಾರ ಒಟ್ಟು 11 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಅದರಲ್ಲಿ ಮೂರು ಶತಕ ದಾಖಲಿಸಿದ್ದಾರೆ. ಈ ಎಲ್ಲ 'ಪ್ರಥಮ ಋತುವಿನ ಪ್ರತಿಭೆ'ಗಳಲ್ಲದೇ ಅನುಭವಿ ರಜತ್ 33 ವರ್ಷದ ವೇಗಿ ದೀಪಕ್ ಚಾಹರ್ ಕೂಡ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಸಿದ್ಧರಾಗಿದ್ದಾರೆ.

ಪಂದ್ಯ ನಡೆಯಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಪಿಚ್‌ನಲ್ಲಿ ಈ ಹಿಂದೆ ನಡೆದ ಪಂದ್ಯಗಳಲ್ಲಿ ಯಥೇಚ್ಛವಾಗಿ ರನ್‌ಗಳು ಹರಿದಿವೆ. ವೇಗದ ಬೌಲರ್‌ಗಳು ಪರದಾಡಿದ್ದಾರೆ. ಆದರೆ ಉಭಯ ತಂಡಗಳೂ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಣಕ್ಕಿಳಿಸುವುದು ಖಚಿತ. ಇದರಿಂದಾಗಿ ರನ್‌ಗಳ ಹೊಳೆ ಹರಿದರೂ ಅಚ್ಚರಿ ಪಡಬೇಕಿಲ್ಲ.

ಚೆಸ್: ಸಿದ್ಧಾಂತ್ ರನ್ನರ್ ಅಪ್



ಬೆಂಗಳೂರು: ಗೋವಾದ ಮಡಗಾಂವ್‌ನಲ್ಲಿ ಮಂಗಳವಾರ ಮುಕ್ತಾಯಗೊಂಡ ರಾಷ್ಟ್ರೀಯ 13 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಸಿದ್ಧಾಂತ್ ಪೂಂಜಾ 11 ಸುತ್ತುಗಳಲ್ಲಿ 9 ಅಂಕ ಸಂಗ್ರಹಿಸಿ ರನ್ನರ್ ಅಪ್ ಆಗಿದ್ದಾರೆ.

ಒಂಬತ್ತನೇ ಶ್ರೇಯಾಂಕ ಪಡೆದಿದ್ದ ಮಹಾರಾಷ್ಟ್ರದ ನಾಗ್ಪುರದ ಶೌನಕ್ ಬಡೋಲೆ (10 ಅಂಕ) ಚಾಂಪಿಯನ್ ಕಿರೀಟ ಧರಿಸಿದರು. ಟ್ರೋಫಿ ಮತ್ತು ₹80,000 ನಗದು ಬಹುಮಾನ ಅವರ ಪಾಲಾಯಿತು.

ಹೆಬ್ಬಾಳದ ಸಿಂಧಿ ಹೈಸ್ಕೂಲ್ ಎಂಟನೇ ತರಗತಿ ವಿದ್ಯಾರ್ಥಿಯಾಗಿರುವ ಸಿದ್ಧಾಂತ್, ಟ್ರೋಫಿ ಜೊತೆ ₹60,000 ನಗದು ಬಹುಮಾನ ಪಡೆದರು. ಸಿದ್ಧಾಂತ್ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದರು. ಮುಂಬರುವ ಏಷ್ಯನ್ ಮತ್ತು ವಿಶ್ವ ಕೆಡೆಟ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಅವಕಾಶವನ್ನು ಸಿದ್ಧಾಂತ್ ಗಳಿಸಿದ್ದಾರೆ.

ಮಹಿಳಾ ಹಾಕಿ: ಭಾರತಕ್ಕೆ ಮಣಿದ ದಕ್ಷಿಣ ಕೊರಿಯಾ


ದಕ್ಷಿಣ ಕೊರಿಯಾ ಹಾಗೂ ಭಾರತ ತಂಡದ ಆಟಗಾರ್ತಿಯರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಸೆಣಸಾಟ ನಡೆಸಿದರು

ಹಾಂಗ್‌ಝೌ (ಚೀನಾ), (ಪಿಟಿಐ): ಅಜೇಯ ಓಟವನ್ನು ಮುಂದುವರಿಸಿದ ಭಾರತ ತಂಡ, ಮಹಿಳಾ ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಬುಧವಾರ ದಕ್ಷಿಣ ಕೊರಿಯಾ ತಂಡನವನ್ನು 4–2 ಗೋಲುಗಳಿಂದ ಸೋಲಿಸಿತು.

ವೈಷ್ಣವಿ ವಿಠ್ಠಲ್ ಫಾಲ್ಕೆ (2ನೇ ನಿಮಿಷ), ಸಂಗೀತಾ ಕುಮಾರಿ (33ನೇ ನಿಮಿಷ), ಲಾಲ್ರೆಮ್‌ಸಿಯಾಮಿ (40ನೇ ನಿಮಿಷ) ಮತ್ತು ರುತುಜಾ ದಾದಾಸೊ ಪಿಸಾಳ್ (59ನೇ ನಿಮಿಷ) ಭಾರತ ತಂಡದ ಪರ ಗೋಲುಗಳನ್ನು ಗಳಿಸಿದರು. ಯುಜಿನ್ ಕಿಮ್ ಅವರು ಕೊರಿಯಾಕ್ಕೆ ತಂಡಕ್ಕೆ 33 ಮತ್ತು 53ನೇ ನಿಮಿಷ ಗೋಲುಗಳನ್ನು ತಂದಿತ್ತರು.

ಭಾರತ ವನಿತೆಯರು ಗುರುವಾರ ನಡೆಯುವ ಪಂದ್ಯದಲ್ಲಿ ಆತಿಥೇಯ ಚೀನಾ ತಂಡವನ್ನು ಎದುರಿಸಲಿದ್ದಾರೆ.

ಇನಿಂಗ್ಸ್ ಮುನ್ನಡೆಯತ್ತ ಕೋಲ್ಟ್ಸ್

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್: ಸಂಜಯ್ ಶತಕ

ಪ್ರಜಾವಾಣಿ ವಾರ್ತೆ

ಮೈಸೂರು/ಬೆಂಗಳೂರು: ವಿಕೆಟ್‌ಕೀಪರ್ ಸಂಜಯ್ ಅಶ್ವಿನ್ ಸೊಗಸಾದ ಶತಕದಿಂದ (115; 200 ಎಸೆತ, 4X14, 6X1) ಕೆಎಸ್‌ಸಿಎ ಕೋಲ್ಟ್ಸ್ ತಂಡವು ಆಂಧ್ರ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 450 ರನ್‌ಗಳ ಉತ್ತಮ ಮೊತ್ತ ಪೇರಿಸಿದ್ದು, ಆಂಧ್ರ ತಂಡವು ಸಂಕಷ್ಟದಲ್ಲಿದೆ.

ಇಲ್ಲಿನ ಎಸ್‌ಜೆಸಿಇ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬುಧವಾರ ಬ್ಯಾಟಿಂಗ್ ಮುಂದುವರಿಸಿದ ಕೋಲ್ಟ್ಸ್ ಪರ ಅಶ್ವಿನ್ ಉತ್ತಮ ಇನಿಂಗ್ಸ್ ಕಟ್ಟಿದರು. ಅವರಿಗೆ ಆಲ್‌ರೌಂಡರ್ ಮೊಹ್ಸಿನ್ ಖಾನ್ ಅರ್ಧಶತಕದ ಮೂಲಕ (56) ಸಾಥ್ ನೀಡಿದರು.

ಪ್ರತ್ಯುತ್ತರವಾಗಿ ಆಂಧ್ರ ಕ್ರಿಕೆಟ್ ಸಂಸ್ಥೆ 6 ವಿಕೆಟ್‌ಗೆ 168 ರನ್ ಗಳಿಸಿದ್ದು, ಹಿನ್ನಡೆ ತಪ್ಪಿಸಿಕೊಳ್ಳಲು ಇನ್ನೂ 282 ರನ್ ಬೇಕಿದೆ. ತಂಡದ ಪರ ಅಶ್ವಿನ್ ಹೆಬ್ಬಾರ್ (80) ಹೊರತುಪಡಿಸಿ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಬರಲಿಲ್ಲ.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಕೆಎಸ್‌ಸಿಎ ಕೋಲ್ಟ್ಸ್: 106.5 ಓವರ್‌ಗಳಲ್ಲಿ 450 (ಸಂಜಯ್ ಅಶ್ವಿನ್ 115, ಕೆ. ಸಾಯಿತೇಜ 104ಕ್ಕೆ 3). **ಆಂಧ್ರ ಕ್ರಿಕೆಟ್ ಸಂಸ್ಥೆ:** 53 ಓವರ್‌ಗಳಲ್ಲಿ 6 ವಿಕೆಟ್‌ಗೆ 168 (ಅಶ್ವಿನ್ ಹೆಬ್ಬಾರ್ 80, ಕೆ.ಪಿ. ಕಾರ್ತಿಕೇಯ 3ಕ್ಕೆ 2, ಮೊನಿಷ್ ರೆಡ್ಡಿ 28ಕ್ಕೆ 2).

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ, ಮೈಸೂರು: ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 149 ಓವರ್‌ಗಳಲ್ಲಿ 6 ವಿಕೆಟ್‌ಗೆ 447 (ಕೆ. ಅಂಕಿತ್ 187, ಪಿ. ಮಹೇಶ್ 110ಕ್ಕೆ 3)

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 162 ಮತ್ತು 46 ಓವರ್‌ಗಳಲ್ಲಿ 4ಕ್ಕೆ150 (ಹರ್ಷ ಗೌಳಿ 40, ಯಶ್ ದುಬೆ 46, ಹರ್ಷಿತ್ ಯಾದವ್ ಔಟಾಗದೆ 34, ರಿಷಭ್ ಚೌಹಾಣ್ 26, ವಿದ್ಯಾಧರ್ ಪಾಟೀಲ 24ಕ್ಕೆ2, ಯಶೋವರ್ಧನ್ ಪರಂತಾಪ್ 12ಕ್ಕೆ2) **ಕೆಎಸ್‌ಸಿಎ ಇಲೆವನ್:** 44.3 ಓವರ್‌ಗಳಲ್ಲಿ 138 (ಕೆ.ಎಲ್. ಶ್ರೀಜಿತ್ 34, ಅಧೀರ್ ಪ್ರತಾಪ್ ಸಿಂಗ್ 48ಕ್ಕೆ4, ಆರ್ಯನ್ ಪಾಂಡೆ 21ಕ್ಕೆ2)

ಬಿಜಿಎಸ್ ಮೈದಾನ: ವಿದರ್ಭ: ಮೊದಲ ಇನಿಂಗ್ಸ್: 110.5 ಓವರ್‌ಗಳಲ್ಲಿ 383 (ಅಥರ್ವ ತೈಡೆ 170, ಅಮನ್ ಮೊಖಾಡೆ 60, ಶಿವಂ ದೇಶಮುಖ 85, ಯಶ್ ಕದಂ 33, ಆದಿತ್ಯ ನಾಯರ್ 65ಕ್ಕೆ2, ಅಧೋಕ್ಷ ಹೆಗಡೆ 96ಕ್ಕೆ4, ಶ್ರೀಶಾ ಆಚಾರ್ 96ಕ್ಕೆ3) **ಕೆಎಸ್‌ಸಿಎ ಅಧ್ಯಕ್ಷರ ಇಲೆವನ್:** 57 ಓವರ್‌ಗಳಲ್ಲಿ 7ಕ್ಕೆ191 (ಕಾರ್ತಿಕ್ ಎಸ್.ಯು 82, ಶರತ್ ಶ್ರೀನಿವಾಸ್ 51 ಗಣೇಶ್ ಭೋಸ್ಲೆ 43ಕ್ಕೆ2, ಲಲಿತ್ ಯಾದವ್ 37ಕ್ಕೆ3).

ಆರ್‌ಎಸ್‌ಐ ಮೈದಾನ: ಮೊದಲ ಇನಿಂಗ್ಸ್: ಗುಜರಾತ್: 102.5 ಓವರ್‌ಗಳಲ್ಲಿ 262 (ಅಭಿಷೇಕ್ ದೇಸಾಯಿ 38, ಆರ್ಯ ದೇಸಾಯಿ 51, ಮನನ್ ಹಿಂಗರಜಿಯಾ 90, ಊರ್ವಿಲ್ ಪಟೇಲ್ 26, ಇರ್ಫಾನ್ ಉಮೇರ್ 41ಕ್ಕೆ3, ಹಿಮಾಂಶು ಸಿಂಗ್ 72ಕ್ಕೆ2, ಅಥರ್ವ ಅಂಕೋಲೇಕರ್ 50ಕ್ಕೆ2) **ಮುಂಬೈ:** 75 ಓವರ್‌ಗಳಲ್ಲಿ 6ಕ್ಕೆ222 (ಅಖಿಲ್ ಹೆರ್ವಾಡಕರ್ 37, ವಿಶಾಲ್ ಜೈಸ್ವಾಲ್ 57ಕ್ಕೆ3)

ಆಲೂರು 2: ಮಹಾರಾಷ್ಟ್ರ: 136 ಮತ್ತು 43 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 127 (ಯಶ್ ಕ್ಷೀರಸಾಗರ 65, ದಿಗ್ವಿಜಯ ಪಾಟೀಲ ಔಟಾಗದೇ 41) **ಗೋವಾ:** 90.3 ಓವರ್‌ಗಳಲ್ಲಿ 333 (ಅಭಿನವ್ ತೇಜರಾಣಾ 77, ದರ್ಶನ್ ಮಿಶಾಲ್ 61, ಮೋಹಿತ್ ರೇಡಕರ್ 58, ಅರ್ಜುನ್ ತೆಂಡೂಲ್ಕರ್ ಔಟಾಗದೆ 36, ನಿಕಿತ್ ಧುಮಾಲ್ 43ಕ್ಕೆ4)

ಆಲೂರು 3: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 98.5 ಓವರ್‌ಗಳಲ್ಲಿ 315(ಕಾರ್ತಿಕ್ ಕೃಷ್ಣಾ 72, ಮಾಧವ್ ಪಿ ಬಜಾಜ್ 63, ಮುಕ್ತಾರ್ ಹುಸೇನ್ 64ಕ್ಕೆ4, ರಿಯಾನ್ ಪರಾಗ್ 106ಕ್ಕೆ4) **ಅಸ್ಸಾಂ:** 140 (ಆಕಾಶ್ ಸೇನ್‌ಗುಪ್ತಾ 42, ವೆಂಕಟೇಶ್ ಎಂ 28ಕ್ಕೆ5, ಅಭಿಷೇಕ್ ಅಹ್ಲಾವತ್ 65ಕ್ಕೆ4) **ಎರಡನೇ ಇನಿಂಗ್ಸ್:** 33.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 54 (ಅಭಿಷೇಕ್ ಠಾಕೂರಿ 28).


ಕೆಎಸ್‌ಸಿಎ ಕೋಲ್ಟ್ಸ್ ತಂಡದ ಪರ ಶತಕ ಸಿಡಿಸಿದ ಸಂಜಯ್ ಅಶ್ವಿನ್ ಆಟದ ವೈಖರಿ ಚಿತ್ರ: ಅನೂಪ್ ರಾಘ.ಟಿ.

ಭರತ್ ಮಿಂಚು: ಟೈಟನ್ಸ್‌ಗೆ ಜಯ

ವಿಶಾಖಪಟ್ಟಣ (ಪಿಟಿಐ): ಆಲ್‌ರೌಂಡರ್ ಭರತ್ ಅಮೋಘ ಆಟದ ಬಲದಿಂದ ತೆಲುಗು ಟೈಟನ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜಯಸಾಧಿಸಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 45–37ರಿಂದ ಯು ಮುಂಬಾದ ಸವಾಲನ್ನು ಮೀರಿ ನಿಂತಿತು. ಭರತ್ 13 ಅಂಕಗಳನ್ನು ಗಳಿಸಿ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

16 ಸಲ ದಾಳಿ ಮಾಡಿದ ಅವರು 10 ಟಚ್ ಪಾಯಿಂಟ್‌ಗಳನ್ನು ಗಳಿಸಿದರು. ಎರಡು ಬೋನಸ್ ಮತ್ತು ಒಂದು ಟ್ಯಾಕಲ್ ಪಾಯಿಂಟ್ ಗಳಿಸಿದರು. ರೇಡರ್ ಚೇತನ್ ಸೊಹು ಆರು ಅಂಕ ಗಳಿಸಿದರು. ಅವಿ ದುಹಾನ್ ಹಾಗೂ ಅಜಿತ್ ಪವಾರ್ ಅವರು ರಕ್ಷಣೆ ವಿಭಾಗದಲ್ಲಿ ತಲಾ 3 ಅಂಕ ಗಳಿಸಿದರು. ನಾಯಕ, ಆಲ್‌ರೌಂಡರ್ ವಿಜಯ್ ಮಲಿಕ್ 5 ಅಂಕ ಪಡೆದರು.

ಮುಂಬಾ ತಂಡದಲ್ಲಿ ಸತೀಶ್ ಕಣ್ಣನ್ ಮತ್ತು ನಾಯಕ ಸುನಿಲ್ ಕುಮಾರ್ ಅವರೂ ದಿಟ್ಟ ಹೋರಾಟ ಮಾಡಿದರು. ತಲಾ ಆರು ಅಂಕ ಗಳಿಸಿದರು. ಬದಲೀ ಆಟಗಾರ ಸಂದೀಪ್ ಅವರು ಏಳು ಅಂಕ ಪಡೆದರು. ಆದರೆ ತಂಡದ ಸೋಲು ತಪ್ಪಿಸಲು ಅವರಿಗೂ ಸಾಧ್ಯವಾಗಲಿಲ್ಲ. ಟೈಟನ್ಸ್ ತಂಡಕ್ಕೆ ಇದು ಮೂರನೇ ಜಯವಾಗಿದ್ದು, ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ.

ಪಲ್ಟನ್‌ಗೆ ಮೂರನೇ ಜಯ: ದಿನದ ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡ 43–32ರಿಂದ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು.

ಮೈಸೂರು ರೇಸ್

ಮ್ಯಾಗ್ನೆಟಿಕ್ ಗೆಲ್ಲುವ ನಿರೀಕ್ಷೆ

ಡೆನ್ನಿಸ್ ಅಂಡ್ ವೈವಾನ್ ಜಾರ್ವಿಸ್ ಮೆಮೋರಿಯಲ್ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮ್ಯಾಗ್ನೆಟಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐ ದಿ ಮೈಂಡ್ 5, ಪೋಲಾರ್ ಕ್ವೀನ್ 7, ಫ್ಯಾಸನಿಸ್ಟ 4
2ನೇ ರೇಸ್: ಟ್ರೂ ಪಂಚ್ 9, ವರ್ದಾನ್ 4, ಪೋಲಾರ್ ವಿಂಡ್ 6
3ನೇ ರೇಸ್: ನೋಬಲ್ ಕಾಸ್ 4, ಆಬ್ಸೊಲ್ಯೂಟ್ ರೂಲರ್ 1, ಅಬ್ನೆಗೇಟರ್ 2
4ನೇ ರೇಸ್: ಪವರ್ ಆಫ್ ಬ್ಯೂಟಿ 1, ಎಟರ್ನಲ್ ಗ್ಲೋರಿ 6, ಅಮೇಜಿಂಗ್ ಇಮ್ಪ್ರಾರಿಫ 2
5ನೇ ರೇಸ್: ಮ್ಯಾಗ್ನೆಟಿಕ್ 2, ಕನ್ಯಾ ರಾಶಿ 1, ಟಿಗಾನೆಲೊ 7
6ನೇ ರೇಸ್: ಜಿವ 8, ದುಫಿ 4, ಮೋಣ 5
7ನೇ ರೇಸ್: ಫೆಲಿಸಿಟ 2, ಈಗಲ್ ಬ್ಲಫ್ 8, ಬ್ರೇಕ್ ಅವೇ 10

ಉತ್ತಮ ಬೆಟ್: ಟ್ರೂ ಪಂಚ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಭಾರತಕ್ಕೆ ಸುಲಭದ ತುತ್ತಾದ ಯುಎಇ

ಏಷ್ಯಾ ಕಪ್ ಕ್ರಿಕೆಟ್: ಕುಲದೀಪ್‌ಗೆ 4, ದುಬೆಗೆ 3 ವಿಕೆಟ್ • ಅಬ್ಬರಿಸಿದ ಅಭಿಷೇಕ್



ನಾಲ್ಕು ವಿಕೆಟ್‌ಗಳನ್ನು ಪಡೆದ ಭಾರತ ತಂಡದ ಕುಲದೀಪ್ ಯಾದವ್ (ಎಡದಿಂದ ಮೂರನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು ಎಎಫ್‌ಪಿ ಚಿತ್ರ

ಏಷ್ಯಾ ಕಪ್ 2025

ದುಬೈ (ಪಿಟಿಐ): ಬಲಾಢ್ಯ ಭಾರತ ತಂಡಕ್ಕೆ ಯುನೈಟೆಡ್ ಅರಬ್ ಎಮಿರೇಟ್ಸ್ ಬಳಗವು ಸುಲಭದ ತುತ್ತಾಯಿತು.

ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 9 ವಿಕೆಟ್‌ಗಳ ಸುಲಭದ ಜಯ ದಾಖಲಿಸಿತು.

ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (7ಕ್ಕೆ4) ಮತ್ತು ಮಧ್ಯಮವೇಗಿ ಶಿವಂ ದುಬೆ (4ಕ್ಕೆ3) ಅವರ ಬೌಲಿಂಗ್ ಮುಂದೆ ಯುಎಇ ತಂಡವು ತತ್ತರಿಸಿತು. ಟಾಸ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಅನುಭವದ ಕೊರತೆಯಿರುವ ಆಟಗಾರರಿರುವ ಯುಎಇ ತಂಡವು 13.1 ಓವರ್‌ಗಳಲ್ಲಿ 57 ರನ್‌ಗಳಿಗೆ ಸರ್ವಪತನವಾಯಿತು. ಇದಕ್ಕುತ್ತರವಾಗಿ ಭಾರತ ತಂಡವು ಕೇವಲ 4.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 60 ರನ್ ಗಳಿಸಿತು. ಅಭಿಷೇಕ್ ಶರ್ಮಾ (30; 16ಎ, 4X2, 6X3) ಅವರ ವಿಕೆಟ್ ಅನ್ನು ಜುನೈದ್ ಸಿದ್ದೀಕ್ ಪಡೆದರು. ಶುಭಮನ್ ಗಿಲ್ (ಔಟಾಗದೇ 20; 9ಎ, 4X2, 6X1) ಮತ್ತು ಸೂರ್ಯ (ಔಟಾಗದೇ 7; 2ಎ, 6X1) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಯುಎಇ ತಂಡವು ಭಾರತಕ್ಕೆ ಯಾವುದೇ ಹಂತದಲ್ಲಿಯೂ ಕಠಿಣ ಸವಾಲೊಡ್ಡಲಿಲ್ಲ. ಅನುಭವ, ಕೌಶಲದಲ್ಲಿ ಬಲಾಢ್ಯವಾಗಿರುವ ಭಾರತ ತಂಡಕ್ಕೆ ಸುಲಭ ಜಯ ಒಲಿಯಿತು.

ಯುಎಇ ತಂಡದ ಆರಂಭಿಕ ಜೋಡಿ ಅಲಿಷಾನ್ ಶರಾಫು (22; 17ಎ, 4X3, 6X1) ಮತ್ತು ನಾಯಕ ಮೊಹಮ್ಮದ್ ವಾಸೀಂ (19; 22ಎ, 4X3) ಮೊದಲ ವಿಕೆಟ್ ಜೊತೆಯಾಟದಲ್ಲಿ 26 ರನ್ ಸೇರಿಸಿದರು. ತಂಡದ ಇಡೀ ಇನಿಂಗ್ಸ್‌ನಲ್ಲಿ ಇದು ದೊಡ್ಡ ಜೊತೆಯಾಟವಾಯಿತು. ಅಲ್ಲದೇ ಈ ಇಬ್ಬರು ಬ್ಯಾಟರ್‌ಗಳು ಮಾತ್ರ ಎರಡಂಕಿ ತಲುಪಿದರು.

ನಾಲ್ಕನೇ ಓವರ್‌ನಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಅಲಿಷಾನ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿ ತಂಡದ ವಿಕೆಟ್ ಖಾತೆ ತೆರೆದರು. ಇಲ್ಲಿಂದ ಮುಂದೆ ಕುಲದೀಪ್ ತಮ್ಮ ಕೈಚಳಕ ಮೆರೆದರು. ಅವರು ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಮೊಹಮ್ಮದ್ ವಾಸೀಂ ಆಟಕ್ಕೆ ತೆರೆಬಿತ್ತು.

ರಾಹುಲ್ ಚೋಪ್ರಾ, ಹರ್ಷಿತ್ ಕೌಶಿಕ್ ಮತ್ತು ಹೈದರ್ ಅಲಿ ಅವರ ವಿಕೆಟ್‌ಗಳೂ ಕುಲದೀಪ್ ಪಾಲಾದವು. ಇನ್ನೊಂದು ಬದಿಯಿಂದ ಮಧ್ಯಮವೇಗಿ ದುಬೆ ಕೂಡ ಮೂವರು ಪ್ರಮುಖ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದರು. ವರುಣ್ ಚಕ್ರವರ್ತಿ ಅವರು ಮೊಹಮ್ಮದ್ ಝೊಹಾಬ್ ವಿಕೆಟ್ ಗಳಿಸಿ ತಮ್ಮ ಹೊಣೆ ನಿಭಾಯಿಸಿದರು.

ಭಾರತ ತಂಡವು ಮೂವರು ಸ್ಪಿನ್ನರ್, ಒಬ್ಬ ವೇಗದ ಬೌಲರ್‌ನೊಂದಿಗೆ ತಂಡವನ್ನು ಕಣಕ್ಕಿಳಿಸಿತ್ತು. ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ, ಶಿವಂ, ಅಕ್ಷರ್ ಅವರಿಗೆ ಅವಕಾಶ ದೊರೆಯಿತು. ವಿಕೆಟ್‌ಕೀಪಿಂಗ್ ಹೊಣೆಯನ್ನು ಅನುಭವಿ ಸಂಜು ಸ್ಯಾಮ್ಸನ್ ಅವರಿಗೆ ನೀಡಲಾಗಿತ್ತು. ಅದರಿಂದಾಗಿ ಜಿತೇಶ್ ಶರ್ಮಾ ಅವರಿಗೆ ಅವಕಾಶ ದೊರೆಯಲಿಲ್ಲ.

ಸಂಕ್ಷಿಪ್ತ ಸ್ಕೋರು: ಯುಎಇ: 13.1 ಓವರ್‌ಗಳಲ್ಲಿ 57 (ಅಲಿಷಾನ್ ಶರಾಫು 22, ಮೊಹಮ್ಮದ್ ವಾಸೀಂ 19, ಕುಲದೀಪ್ ಯಾದವ್ 7ಕ್ಕೆ4, ಶಿವಂ ದುಬೆ 4ಕ್ಕೆ3) ಭಾರತ: 4.3 ಓವರ್‌ಗಳಲ್ಲಿ 1 ವಿಕೆಟ್‌ಗೆ 60 (ಅಭಿಷೇಕ್ ಶರ್ಮಾ 30, ಶುಭಮನ್ ಗಿಲ್ ಔಟಾಗದೇ 20, ಸೂರ್ಯಕುಮಾರ್ ಯಾದವ್ ಔಟಾಗದೇ 7, ಜುನೇದ್ ಸಿದ್ದಿಕ್ 16ಕ್ಕೆ1)

ಫಲಿತಾಂಶ: ಭಾರತ ತಂಡಕ್ಕೆ 9 ವಿಕೆಟ್‌ಗಳ ಜಯ.

ಇಂದಿನ ಪಂದ್ಯ

ಬಾಂಗ್ಲಾದೇಶ–ಹಾಂಗ್‌ಕಾಂಗ್ (ಗುಂಪು ಬಿ)
ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಗಾಲ್ಫ್: ಮಾಹಿರ್ ರಾಕ್ರಾಗೆ ಪ್ರಶಸ್ತಿ

ಬೆಂಗಳೂರು: ಮಾಹಿರ್ ರಾಕ್ರಾ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆದ ಕರ್ನಾಟಕ ಓಪನ್ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಮುಕ್ತ (ಗ್ರಾಸ್) ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಆ್ಯರನ್ ಮೆಂಡೋನ್ಸಾ ರನ್ನರ್ ಅಪ್ ಆದರು.

ಹ್ಯಾಂಡಿಕ್ಯಾಪ್ 0–9 ವಿಭಾಗದಲ್ಲಿ ಸುಂದರಂ ಸಿ., 10–18 ವಿಭಾಗದಲ್ಲಿ ಸುಮಂತ್ ಎನ್.ವೈ. ಹಾಗೂ 19–24 ವಿಭಾಗದಲ್ಲಿ ಸಿದ್ದಲಿಂಗ ಸ್ವಾಮಿ ಎಸ್. ಪ್ರಶಸ್ತಿ ತಮ್ಮದಾಗಿಸಿಕೊಂಡರು.

ರಿಯಾಂಕಾ ತಿಮ್ಮಯ್ಯ ಮಹಿಳೆಯರ ಗ್ರಾಸ್ ಸ್ಪರ್ಧೆಯಲ್ಲಿ ವಿಜೇತರಾದರೆ, ನೆಟ್ ವಿಭಾಗದಲ್ಲಿ ಸುನೀತಾ ಪ್ರಶಸ್ತಿಗೆ ಮುತ್ತಿಕ್ಕಿದರು. 65 + ಸೀನಿಯರ್ಸ್ ವಿಭಾಗದ ಗ್ರಾಸ್ ಸ್ಪರ್ಧೆಯಲ್ಲಿ ವಿ.ಟಿ. ರಂಗನಾಥ್ ಹಾಗೂ ನೆಟ್ ವಿಭಾಗದಲ್ಲಿ ಡಾ. ರಾಮೇಗೌಡ ಚಾಂಪಿಯನ್ ಆದರು.

ಸುಬ್ರತೊ ಕಪ್ ಫೈನಲ್ ಇಂದು

ಬೆಂಗಳೂರು: ಮೊಹಾಲಿಯ ಮಿನರ್ವ ಪಬ್ಲಿಕ್ ಸ್ಕೂಲ್ ಮತ್ತು ಬಿಹಾರದ ವಿದ್ಯಾಚಲ ಇಂಟರ್ ನ್ಯಾಷನಲ್ ಸ್ಕೂಲ್ ತಂಡಗಳು 64ನೇ ಸುಬ್ರತೊ ಕಪ್ ಸಬ್ ಜೂನಿಯರ್ ಬಾಲಕರ ಅಂತರರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿಗಾಗಿ ಗುರುವಾರ ಸೆಣಸಲಿವೆ.

ಫೈನಲ್ ಪಂದ್ಯವು ಯಲಹಂಕದ ವಾಯುನೆಲೆಯಲ್ಲಿ ನಡೆಯಲಿದೆ. ಭಾರತ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಮಂಗಳವಾರ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಮಿನರ್ವ ತಂಡವು ಜಾರ್ಖಂಡ್‌ನ ಸೇಂಟ್ ಜಾನ್ ಸ್ಕೂಲ್ ಎದುರು ಹಾಗೂ ವಿದ್ಯಾಚಲ ತಂಡವು ಮಧ್ಯಪ್ರದೇಶದ ರಿವರ್‌ಸೈಡ್ ನ್ಯಾಚುರಲ್ ಸ್ಕೂಲ್ ತಂಡದ ಎದುರು ಜಯ ಸಾಧಿಸಿದ್ದವು.

ಮೊದಲ ಸುತ್ತಿನಲ್ಲೇ ಹೊರಬಿದ್ದ ಸಿಂಧು



ಪಿ.ವಿ.ಸಿಂಧು

ಹಾಂಗ್‌ಕಾಂಗ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಆದರೆ ಲಕ್ಷ್ಯ ಸೇನ್ ಮತ್ತು ಪ್ರಣಯ್ ಅವರು ಪ್ರಯಾಸದ ಗೆಲುವಿನೊಡನೆ ಎರಡನೇ ಸುತ್ತಿಗೆ ಮುನ್ನಡೆದರು.

ಹೋದ ತಿಂಗಳು ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎಂಟರ ಘಟ್ಟ ತಲುಪಿದ್ದ ಸಿಂಧು, ಇಲ್ಲಿ 32ರ ಸುತ್ತಿನಲ್ಲಿ 21–15, 16–21, 19–21ರಲ್ಲಿ ಡೆನ್ಮಾರ್ಕ್‌ನ ಲೀನ್ ಕ್ರಿಸ್ಟೋಫರ್ಸೆನ್ ಅವರಿಗೆ ಮಣಿದರು.

ಇದು ಭಾರತದ ಆಟಗಾರ್ತಿಗೆ, 25 ವರ್ಷ ವಯಸ್ಸಿನ ಲೀನ್ ಎದುರಿನ ಆರು ಮುಖಾಮುಖಿಗಳಲ್ಲಿ ಮೊದಲ ಸೋಲು.


ಪುರುಷರ ಸಿಂಗಲ್ಸ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ 34ನೇ ಸ್ಥಾನದಲ್ಲಿರುವ ಪ್ರಣಯ್ 21–17, 21–14 ರಿಂದ 14ನೇ ಶ್ರೇಯಾಂಕದ ಲು ಗುವಾಂಗ್ ಝು ಅವರನ್ನು 44 ನಿಮಿಷಗಳಲ್ಲಿ ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು. ಸೇನ್ 22–20, 16–21, 21–15 ರಿಂದ ಚೀನಾ ತೈಪೆಯ ವಾಂಗ್ ತ್ಸು ವಿ ಅವರನ್ನು ಮಣಿಸಿದರು. ಸೇನ್ ಮುಂದಿನ ಸುತ್ತಿನಲ್ಲಿ ಪ್ರಣಯ್ ಅವರನ್ನು ಎದುರಿಸಲಿದ್ದಾರೆ.

ಅರ್ಹತಾ ಸುತ್ತಿನಿಂದ ಬಂದಿರುವ ಕಿರಣ್ ಜಾರ್ಜ್ ಸಹ 16ರ ಸುತ್ತಿಗೆ ಕಾಲಿಟ್ಟರು. ಅವರು 21–16, 21–11 ರಿಂದ ಸಿಂಗಪುರದ ಆಟಗಾರ ಜಿಯಾ ಹೆಂಗ್ ಜೇಸನ್ ಅವರನ್ನು 34 ನಿಮಿಷಗಳಲ್ಲಿ ಸೋಲಿಸಿದರು. ಭಾರತದ ಆಟಗಾರ ಮುಂದಿನ ಸುತ್ತಿನಲ್ಲಿ ತೈವಾನ್‌ನ ಚೌ ಟಿಯನ್ ಚೆನ್ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 31ನೇ ಸ್ಥಾನದಲ್ಲಿರುವ ಆಯುಷ್ ಶೆಟ್ಟಿ 15–21, 21–19, 21–13 ರಿಂದ ಚೀನಾ ತೈಪೆಯ ಸು ಲಿ ಯಾಂಗ್ ಅವರನ್ನು ಸೋಲಿಸಿ 16ರ ಸುತ್ತಿಗೆ ತಲುಪಿದರು.

ಮಹಿಳಾ ಡಬಲ್ಸ್ ಮೊದಲ ಸುತ್ತಿನಲ್ಲಿ ಸೋದರಿಯರಾದ ರುತುಪರ್ಣ ಮತ್ತು ಶ್ವೇತಪರ್ಣ ಪಂಡಾ 21–17, 21–9 ರಿಂದ ನೇರ ಆಟಗಳಲ್ಲಿ ಹಾಂಗ್‌ಕಾಂಗ್‌ನ ಒಯಿ ಕಿ ವೆನೆಸಾ ಪೊಂಗ್– ಸುಮ್ ಯವು ವಾಂಗ್ ಜೋಡಿಯನ್ನು ಪರಾಭವಗೊಳಿಸಿತು.

ಐಸಿಸಿ ರ‍್ಯಾಂಕಿಂಗ್: ಬಿಷ್ಣೋಯಿ, ಅರ್ಷದೀಪ್ ಸಿಂಗ್‌ಗೆ ಬಡ್ತಿ



ಅರ್ಷದೀಪ್ ಸಿಂಗ್

ದುಬೈ (ಪಿಟಿಐ): ಭಾರತ ತಂಡದ ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ವೇಗಿ ಅರ್ಷದೀಪ್ ಸಿಂಗ್ ಅವರು ಬುಧವಾರ ಬಿಡುಗಡೆಯಾದ ಐಸಿಸಿ ಟಿ20 ಬೌಲಿಂಗ್ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಆರು ಮತ್ತು 10ನೇ ಸ್ಥಾನಕ್ಕೆ ಏರಿಕೆ ಕಂಡಿದ್ದಾರೆ.

ವರುಣ್ ಚಕ್ರವರ್ತಿ ಅವರು ನಾಲ್ಕನೇ ಕ್ರಮಾಂಕದಲ್ಲಿಯೇ ಉಳಿದಿದ್ದು, ಭಾರತದ ಅಗ್ರಮಾನ್ಯ ಬೌಲರ್ ಎನಿಸಿದ್ದಾರೆ. ಅಕ್ಷರ್ ಪಟೇಲ್ ಅವರು ಒಂದು ಸ್ಥಾನ ಬಡ್ತಿಯೊಂದಿಗೆ 13ನೇ ಕ್ರಮಾಂಕ ಪಡೆದಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ಅಭಿಷೇಕ್ ಶರ್ಮಾ ಅಗ್ರ ಕ್ರಮಾಂಕದಲ್ಲಿ ಮುಂದುವರಿದಿದ್ದಾರೆ. ತಿಲಕ್ ವರ್ಮಾ (2ನೇ) ಹಾಗೂ ಸೂರ್ಯಕುಮಾರ್ ಯಾದವ್ (6ನೇ) ಅಗ್ರ 10ರಲ್ಲಿ ಸ್ಥಾನ ಉಳಿಸಿಕೊಂಡಿದ್ದಾರೆ. ಯಶಸ್ವಿ ಜೈಸ್ವಾಲ್ 11ನೇ ಸ್ಥಾನಕ್ಕೆ ಕುಸಿದಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಹಾರ್ದಿಕ್ ಪಾಂಡ್ಯ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ.